ಜನಪದ ವಿಚಾರ


ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೪ ಸೆಪ್ಟಂಬರ್-೨೦೧೩ ಸಂಚಿಕೆ-೨



ಹೊಸ ರಾಜ್ಯಗಳ ಬೇಡಿಕೆ

ಹೊಸ ರಾಜ್ಯ ರಚನೆ ಯಾವ ಮತ್ತು ಯಾರ ಸುಖಕ್ಕೆ?

ಜನಪದ ವಿಚಾರದಲ್ಲಿ

ಸೆಪ್ಟಂಬರ್ - ೨೦೧೩

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಸೆಪ್ಟಂಬರ್ - ೨೦೧೩
ಸಂಪುಟ - ೧೪
ಸಂಚಿಕೆ - ೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ 08236 316344
✆ 08236 299854
e-mail : janapada@yahoo.com
web: janapada.net

ಕಾಣಿಸಿದವರು

ಬೆಳಗಿನಲಿ ನಾನು ಎದ್ದು
ಶ್ರೀರಾಮನ ನೆನೆಯಬೇಕೆಂದರೆ-
ಕಾಡಿನಲಿ ಅಲೆಯುತ್ತಿರುವ
ತುಂಬಿದ ಬಸುರಿ ಸೀತೆ ಕಾಣಿಸಿಕೊಳ್ಳುತ್ತಾಳೆ.

ಮತ್ತೆ ಕಣ್ಣು ಮುಚ್ಚಿ ಮೂಗು ಒತ್ತಿ ಧ್ಯಾನದಲಿ
ಶ್ರೀರಾಮನ ನೆನೆಯ ಬೇಕೆಂದರೆ-
ಬೆನ್ನಿನಲಿ ನೆಟ್ಟ ಬಾಣದಿಂದ
ವಿಲವಿಲನೆ ಒದ್ದಾಡುವ ವಾಲಿ ನೆನಪಾಗುತ್ತಾನೆ.

ಬೇಡ, ಶ್ರೀ ಕೃಷ್ಣಪರಮಾತ್ಮನ ನೆನೆಸಿ
ಕೈಮುಗಿದರೆ-
ಮುರಿದ ರಥದ ಮಧ್ಯೆ ಆರ್ತನಾಗಿರುವ
ಕರ್ಣ ಕಾಣಿಸಿಕೊಳ್ಳುತ್ತಾನೆ.

ಹಠದಿಂದ ಮತ್ತೆ ಪರಮಾತ್ಮನಿಗೆ
ಭಕ್ತಿಯಿಂದ ಶಿರಸಾ ಅಡ್ಡ ಬಿದ್ದರೆ-
ಅನೀತಿಗೆ ಬಲಿಯಾಗಿ ತೊಡೆ ಮುರಿದು
ತೊಳಲಾಡುವ ಕೌರವ ಕಾಣಿಸಿಕೊಳ್ಳುತ್ತಾನೆ.

ಬಿಡಿ, ಪ್ರಥಮದಲಿ ವಿಘ್ನ ನಿವಾರಕ
ವಿನಾಯಕನಿಗೆ ಅಡ್ಡ ಬೀಳುವ ಎಂದರೆ-
ಅಮ್ಮನ ಆಣತಿಗೆ ಶಿರ ಕಳೆದುಕೊಂಡ
ಮುಖವೇ ಇಲ್ಲದ ಆನೆ ಮುಖ ಕಾಣಿಸುತ್ತದೆ

ಗೆಳತಿ, ಎಲ್ಲ ಬಿಟ್ಟು ನಿನಗೊಂದು
ಮುತ್ತು ಕೊಡುವ ಎಂದರೆ-
ನೀರಿಗಾಗಿ ನಾಲ್ಕು ಖಾಲಿ ಕೊಡ ಹೊತ್ತ
ಅರೆ ಬತ್ತಲೆ ನಾರಿಯರು ಕಾಣಿಸುತ್ತಾರೆ.
ಏನುಮಾಡಲಿ ನಾನು?

- ಡಾ॥ ಜಯಪ್ರಕಾಶ ಮಾವಿನಕುಳಿ

(ಸಾಭಾರ : ಸಂವಾದ)

ಮುಗಿಯದ ಯುದ್ಧ

೧೯೪೭ರಲ್ಲಿ ನಮಗೆ ಸ್ವಾತಂತ್ರ್ಯ ಬಂದಾಗ– 'ಇನ್ನು ಹೋರಾಟ ಮುಗಿಯಿತು. ನಮಗೆ ಬೇಕಾದ್ದು ಸಿಕ್ಕಿತು' ಎಂದು ದೇಶ ಸಂತೋಷದಿಂದ ಸಂಭ್ರಮದಿಂದ ಕುಣಿದು ಕುಪ್ಪಳಿಸಿತು. ಅನಂತರ ದಿನ ಮುಗಿದ ಹಾಗೆ, ತಿಂಗಳು ಕಳೆದ ಹಾಗೆ, ವರ್ಷಗಳು ಉರುಳಿದ ಹಾಗೆಲ್ಲಾ– 'ನಮಗೆ ಬೇಕಾದ್ದು ಸಿಕ್ಕಿದೆಯೆ? ಸಿಕ್ಕಿದೆ ಎಂದುಕೊಂಡಿರುವುದು ಎಷ್ಟರ ಮಟ್ಟಿಗೆ ದಕ್ಕಿದೆ?' ಎಂದು ಕೆಲವರು ತಮ್ಮನ್ನೇ ತಾವು ಕೇಳಿಕೊಳ್ಳುತ್ತಿದ್ದಾರೆ.

ಬೇಕಾದ್ದು ಸಿಕ್ಕಿತೋ ದಕ್ಕಿತೋ ಎಂಬುದು ಹೇಗಾದರೂ ಇರಲಿ. ಹೋರಾಟ ಮಾತ್ರ ನಿಲ್ಲತಕ್ಕದ್ದಲ್ಲ ಎಂಬುದನ್ನು ಯಾರೂ ಮರೆಯಬಾರದು. ನಾವು ಮರೆಯಬೇಕೆಂದರೂ ನಮ್ಮ ಸುತ್ತಿನ ಲೋಕ ಅದನ್ನು ಮರೆಯಗೊಡುವುದಿಲ್ಲ.

ಈ ೨೧ ವರ್ಷಗಳಲ್ಲಿ ನಮ್ಮನಮ್ಮೊಳಗಿನ ಹೋರಾಟಗಳು ಅಡಗಿವೆಯೆ? ಜಾತಿಯ, ಮತದ, ಹಣದ, ಬುದ್ಧಿಯ, ಗುಣದ ವ್ಯತ್ಯಾಸಗಳಿಂದ ಎಷ್ಟು ಮುಖಗಳಲ್ಲಿ ವ್ಯಕ್ತಿಗೆ ವ್ಯಕ್ತಿಗೂ ಗುಂಪಿಗೂ ಗುಂಪಿಗೂ ಘರ್ಷಣೆ ನಡೆಯುತ್ತಿಲ್ಲಾ? 'ಭಾರತ ಒಂದು' ಎಂದು ಬಾಯಿಯಲ್ಲಿ ಹೇಳಿದರೂ, ಕೀ ಜೈಗಳನ್ನು ಕೂಗಿದರೂ, ಪ್ರಾಂತಕ್ಕೂ ಪ್ರಾಂತಕ್ಕೂ ಮಸೆಯುತ್ತಿರುವ ಅಸಹನೆಗಳನ್ನು ದಿನ ಬೆಳಗಾದರೆ ಪತ್ರಿಕೆಗಳೂ ರೇಡಿಯೋವೂ ನಮ್ಮ ಕಣ್ಣುಗಳ ಕಿವಿಗಳ ಮೂಲಕ ಮನಸ್ಸಿಗೆ ಚುಚ್ಚುತ್ತಿಲ್ಲಾ?

ಈ ಅಂತಶ್ಛಿದ್ರಗಳ ಅಸಹಾಯತೆಯನ್ನೇ ಅವಕಾಶಮಾಡಿಕೊಂಡು ೧೯೬೨ರಲ್ಲಿ ಈ ಕಡೆಯಿಂದ ಚೀನಾ, ೧೯೬೫ರಲ್ಲಿ ಆ ಕಡೆಯಿಂದ ಪಾಕಿಸ್ತಾನ ನಮ್ಮ ಸ್ವಾತಂತ್ರ್ಯವನ್ನು ನಾಶಮಾಡಲು ದಾಳಿಮಾಡಿತಲ್ಲಾ? ದೇವರ ದಯೆ ಎನ್ನಿ, ನಮ್ಮ ನಾಡಿನವರ ಒಮ್ಮನಸ್ಸು ಎನ್ನಿ, ಅಥವಾ ಇದು ಒಂದು ಪವಾಡವೇ ಎನ್ನಿ, ಬರಸಿಡಿಲಿನಂತೆ ಬಂದು ಎರಗಿದ್ದು ಬೆಳಗಿನ ಉದಯದ ಮಂಜಿನಂತೆ ಮಾಯವಾಗಿ ಹೋಯಿತಲ್ಲಾ?

ಆದರೂ, ಇಂದಿಗೂ, ಸೋತರೂ ಪಾಕಿನ ಹಾಗೂ ಚೀನಾದ ಗುಡುಗಾಟ ನಿಂತಿದೆಯೆ? ನಮ್ಮ ದೇಶದೊಳಗಿನ, ಪ್ರಾಂತಗಳೊಳಗಿನ, ಜನಗಣಮನಗಳ ಗಲಭೆ ಗದ್ದಲ ಗುದ್ದಾಟ ಏನಾದರೂ ಕಡಮೆಯಾಗಿದೆಯೆ?

೧೯೬೫ರಲ್ಲಿ ಪಾಕಿನವರು ನಮ್ಮ ಮೇಲೆ ಬಿದ್ದಾಗ, ನಮ್ಮ ಯೋಧರು ಅವರಿಗೆ ಬುದ್ಧಿ ಕಲಿಸಿದಾಗ, ಅವರು 'cease fire' ಗೆ ಒಪ್ಪಿದರು. ನಾವೂ ಒಪ್ಪಿದೆವು. ಒಪ್ಪಿಗೆಯಾದ ಮೇಲೂ cease ಎಲ್ಲ ನಮ್ಮದು, fire ಎಲ್ಲ ಅವರದು ಎನ್ನುವ ಹಾಗೆ ಅವರು ನಡಕೊಂಡರಲ್ಲಾ? ಹಾಗೆಯೇ ಇನ್ನೂ ನಡೆಯುತ್ತಿರುವರಲ್ಲಾ?

ಆದ್ದರಿಂದ ಯುದ್ಧ ಮುಗಿಯಿತೆಂಬುದು ಮರುಳರ ಮಾತು. ಒದಗಬಹುದಾದ ಯುದ್ಧಕ್ಕೆ ಸಿದ್ಧರಾಗಿರುವುದು ಜಾಣರಕೆಲಸ.

– ಜಿ.ಪಿ.ರಾಜರತ್ನಂ

ಹೊಸ ರಾಜ್ಯ ರಚನೆ
ಯಾವ ಮತ್ತು ಯಾರ ಸುಖಕ್ಕೆ?

– ಸುರೇಂದ್ರ ಕೌಲಗಿ

(ಕ್ಷುದ್ರ ರಾಜಕೀಯ ಮತ್ತು ಸ್ವ ಹಿತಾಸಕ್ತಿ ದೇಶವನ್ನು ಅನೇಕ ರಾಜ್ಯಗಳಲ್ಲಿ ಹಂಚಿ ಹೋಗುವಂತೆ ಮಾಡಿದೆ ಪ್ರಜೆಗಳ ಹಣೆಬರಹ ಸರ್ಕಾರವನ್ನವಲಂಬಿಸುವುದಾದರೆ ಗಂಡಾಂತರ ಕಾದಿದೆ.)

೨೦೧೪ರಲ್ಲಿ ಕೇಂದ್ರ ಸರ್ಕಾರ ರಚನೆಗಾಗಿ ಲೋಕಸಭೆಗೆ ಸಾರ್ವತ್ರಿಕ ಮಹಾಚುನಾವಣೆ ಬರುತ್ತಿದ್ದಂತೆಯೇ ತೆಲಂಗಣ ರಾಜ್ಯದ ಉದಯವಾಗುತ್ತಿದೆ. ಅಷ್ಟು ವರ್ಷಗಳಿಂದ ನೆನೆಗುದಿಗೆ ಬಿದಿದ್ದ ತೆಲಂಗಣ ಬೇಡಿಕೆಗೆ ಚುನಾವಣೆ ಸಂದರ್ಭ ಕಾವನ್ನು ಕೊಟ್ಟು ಮರಿಮಾಡಿತು! ಕೇಂದ್ರ ಸರ್ಕಾರದ ಆ ತೀರ್ಮಾನದ ಹಿಂದೆ ಯಾವ ಉದ್ದೇಶವಿದ್ದಿರಬಹುದು ಎಂಬುದರ ಬಗ್ಗೆ ಅನೇಕ ಪ್ರಶ್ನೆಗಳು ಉದ್ಭವಿಸುತ್ತವೆ. ಕೇಂದ್ರ ಸರ್ಕಾರದಲ್ಲಿಯ ಮುಖ್ಯ ಪಕ್ಷವಾದ ಕಾಂಗ್ರೆಸ್ ೨೦೧೪ರ ಚುನಾವಣೆಯಲ್ಲಿ ತಾನು ಅತ್ಯಂತ ಹೆಚ್ಚಿನ ಬಹುಮತದೊಂದಿಗೆ ಆಯ್ಕೆಯಾಗಿ ಬಂದು ಬಲಿಷ್ಠ ಸರ್ಕಾರ ರಚಿಸಬೇಕೆಂಬುದು ಅದರ ಉದ್ದೇಶವಾಗಿದೆ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ತೆಲಂಗಣ ರಚನೆಯ ಸಾಧ್ಯತೆಯ ಬಗ್ಗೆ ಯು.ಪಿ.ಎ ಸಕಾರದ ನಿರ್ಧಾರ ಪ್ರಕಟವಾಗುತ್ತಲೇ ಅಖಂಡ ಆಂಧ್ರಪ್ರದೇಶದ ಬೇಡಿಕೆ ಹುಟ್ಟಿ ತೆಲಂಗಣ ರಚನೆಯ ತೀರ್ಮಾನದ ವಿರುದ್ಧ ಚಳುವಳಿ ಪ್ರಾರಂಭವಾಯಿತು. ರಾಜ್ಯವಿಂಗಡಣೆಯ ವಿಷಯದಲ್ಲಿ ಚಳುವಳಿ ಪ್ರಾರಂಭವಾಗುತ್ತಲೇ ಬಿ.ಜೆ.ಪಿ ಪಕ್ಷ ತೆಲಂಗಣ ರಚನೆ ಆಗಲೇಕೆಂದು ನಿಲುವು ತಾಳಿತು. ಬಿ.ಜೆ.ಪಿ ಯ ಈ ನಿಲುವಿನ ಹಿಂದೆ ಕೂಡ ೨೦೧೪ರ ಚುನಾವಣೆಯಲ್ಲಿ ಹೆಚ್ಚು ಮತ ಪಡೆಯಬೇಕೆಂಬ ರಾಜಕೀಯ ಉದ್ದೇಶವೇ ಕಾರಣವಾಗಿದೆ. ಹೀಗೆ ರಾಜ್ಯಗಳ ಪುನರ್ ರಚನೆಯ ಹಿಂದೆ ದೇಶದ ಒಟ್ಟಾರೆ ಹಿತದ ಯಾವ ಚಿಂತನೆಯೂ ಇಲ್ಲ. ಬದಲಾಗಿ ವಿಚ್ಛೇದನಕಾರಿ ರಾಜಕೀಯ ಆಟವಾಡಿ ತಮ್ಮ ತಮ್ಮ ಪಕ್ಷಗಳ ಹಿತವನ್ನು ಸಾಧಿಸುವ ಏಕೈಕ ಉದ್ದೇಶವಿದೆ. ೧೯೫೩ರಲ್ಲಿ ಮೊಟ್ಟ ಮೊದಲ ಬಾರಿಗೆ ನ್ಯಾಯವಾದಿ ಫಜಲ್ ಅಲಿ ಅವರ ಅಧ್ಯಕ್ಷತೆಯಲ್ಲಿ ಸ್ವತಂತ್ರ ಭಾರತದ ರಾಜ್ಯ ವಿಂಗಡಣಾ ಆಯೋಗ ಸ್ಥಾಪಿತವಾಯಿತು. ಆಗ ಆಯೋಗವು ಒಂದು ಮಾತನ್ನು ಒತ್ತಿ ಹೇಳಿತು. ರಾಜ್ಯಗಳ ವಿಂಗಡಣೆಯ ಪರಿಣಾಮವಾಗಿ ಆಡಳಿತಾತ್ಮಕ ಮತ್ತು ದೇಶದ ಹಣಕಾಸಿನ ಸಂಪನ್ಮೂಲಗಳ ಮೇಲೆ ಬೀಳುವ ಅತಿದೊಡ್ಡ ಭಾರಕ್ಕೆ ಅನುಗುಣವಾಗಿ ಆಯಾ ರಾಜ್ಯಗಳ ಜನತೆಯ ಮತ್ತು ಸಮಸ್ತ ಭಾರತೀಯರ ಕಲ್ಯಾಣ ಸಾಧಿತವಾಗುವುದಿದ್ದರೆ ಮಾತ್ರ ಬದಲಾವಣೆಗಳನ್ನು ಮಾಡಬೇಕೆಂದು ಹೇಳಿತು. ಆದರೆ ಇಂದು ಪ್ರಸ್ತಾಪಿತವಾಗುತ್ತಿರುವ ರಾಜ್ಯ ವಿಂಗಡಣಾ ಸಮಿತಿಯ

ರಚನೆಯ ಹಿಂದೆ ಇರುವ ಒತ್ತಾಯದಲ್ಲಿ ಸಮಸ್ತ ದೇಶದ ಹಿತ ಲವಲೇಶವೂ ಇಲ್ಲ. ಕೇವಲ ರಾಜಕೀಯೋದ್ದೇಶಿತ ಒತ್ತಾಯವಿದೆ. ಈ ರಾಜಕೀಯ ಉದ್ದೇಶದ ಹಿಂದೆ ರಾಜಕೀಯ ಮಹತ್ವಾಕಾಂಕ್ಷೆ ಹೊಂದಿರುವ ರಾಜಕಾರಣಿಗಳ ಹಿತ ಅಡಗಿದೆ. ಭಾರತ ಸ್ವತಂತ್ರವಾದಾಗ ದೇಶದಲ್ಲಿ ೧೯ರಾಜ್ಯಗಳಿದ್ದವು. ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ವಿಶೇಷ ಸ್ಥಾನಮಾನ ಕೊಡಲಾಗಿತ್ತು. ಸ್ವಾತಂತ್ರ್ಯ ಬರುತ್ತಲೇ ಭಾಷಾವಾರು ಪ್ರಾಂತ್ಯ ರಚನೆಗಾಗಿ ಚಳುವಳಿಗಳು ಪ್ರಾರಂಭವಾದವು. ತತ್‌ಪರಿಣಾಮವಾಗಿ ಇಂದು ದೇಶದಲ್ಲಿ ೩೦ ರಾಜ್ಯಗಳಾಗಿವೆ. ಇನ್ನೂ ಹಲವಾರು ರಾಜ್ಯಗಳ ಬೇಡಿಕೆಗೆ ಒತ್ತಾಯವಿದೆ. ಒಂದು ಅಂದಾಜಿನ ಪ್ರಕಾರ ಹೊಸದಾಗಿ ೫೦ ರಾಜ್ಯಗಳಿಗಾಗಿ ಬೇಡಿಕೆಯಿದೆ! ವರ್ಷಗಳು ಉರುಳಿದಂತೆ ಮತ್ತು ಅಭಿವೃದ್ಧಿಯ ಪ್ರಕ್ರಿಯೆ ಮುಂದುವರಿದಂತೆ ಈಗಿರುವ ರಾಜ್ಯಗಳು ಒಡೆದು ಹೊಸರಾಜ್ಯಗಳು ಉಂಟಾಗುವ ಪರಿಸ್ಥಿತಿ ಬಂದಿದೆ. ಈ ವಿಭಜನೆಯ ಪ್ರಕ್ರಿಯೆಯ ಬೀಜ ದೇಶ ಪಡೆದ ಸ್ವಾತಂತ್ರ್ಯದ ಒಡಲಿನಲ್ಲಿಯೇ ಇತ್ತೆಂದು ತೋರುತ್ತದೆ. ದೇಶದ ವಿಭಜನೆ ಕೋಮಾಧಾರಿತವಾಯಿತಾದರು ವಿಭಜನೆ ಮತ್ತು ಬೇರ್ಪಡುವ ವಿಚಾರ ಜನಮಾನಸದಲ್ಲಿ ಬೇರೂರಿತು. ಆದ್ದರಿಂದ ದೇಶ ಸ್ವತಂತ್ರವಾಗುತ್ತಲೇ ಭಾಷಾಧಾರಿತವಾಗಿ ರಾಜ್ಯಗಳ ರಚನೆಯಾಯಿತು. ಸಂವಿಧಾನ ಪ್ರಕಾರವಾಗಿ ಇವು ದೇಶದಲ್ಲಿಯೇ ಉಳಿದರು ಕೂಡ ಆಯಾ ರಾಜ್ಯಗಳ ಜನರಲ್ಲಿ ಏಕತೆಯ ಮನೋಭಾವ ಮೂಡಲಿಲ್ಲ. ಸಾಂಸ್ಕೃತಿಕ ಮೌಲ್ಯ ಜನರನ್ನು ಒಟ್ಟುಗೊಡಿಸಲಿಲ್ಲ. ನಂತರ ಬಂದ ಅಭಿವೃದ್ಧಿ ಯುಗ ಹಾಗೂ ಯೋಜನಾಯುಗ ರಾಜ್ಯಗಳ ಜನತೆಯಲ್ಲಿದ್ದ ಪ್ರತ್ಯೇಕತಾ ಭಾವನೆಯನ್ನು ಬೆಳೆಸಲು ಸಹಾಯ ಮಾಡಿತು. ೬೭ ವರ್ಷಗಳಿಂದ ಒಟ್ಟಾಗಿದ್ದ ಆಂಧ್ರರು ಇಂದು ಎರಡು ಪ್ರತ್ಯೇಕ ರಾಜ್ಯಗಳಾಗಿರುವುದಕ್ಕೆ ಹೊರಟಿರುವುದು ಭಾರತ ದೇಶದ ಸಾಂಸ್ಕೃತಿಕ, ಆರ್ಥಿಕ ಮತ್ತು ಭಾವನಾತ್ಮಕ ವಿಷಯಗಳ ದುಃಸ್ಥಿತಿಯನ್ನು ತೋರಿಸುತ್ತದೆ. ಸ್ವತಂತ್ರ ಭಾರತದ ಸರ್ಕಾರ ದೇಶದ ಎಲ್ಲ ಪ್ರದೇಶಗಳ ಸಮನಾದ ಅಭಿವೃದ್ಧಿಯತ್ತ ಗಮನ ಹರಿಸಿದ್ದರೆ ಬಹುಶಃ ಇಷ್ಟೊಂದು ರಾಜ್ಯಗಳ ಬೇಡಿಕೆ ಉದಯ ವಾಗುತ್ತಿರಲಿಲ್ಲ. ಅದೇ ರೀತಿ ಅಧಿಕಾರದ ರಾಜಕೀಯ ವಿಕೇಂದ್ರಿಕರಣವಾಗಿದ್ದರೂ ಕೂಡ ಹೊಸ ರಾಜ್ಯಗಳ ಬೇಡಿಕೆಗೆ ಬಲ ಬರುತ್ತಿರಲಿಲ್ಲ.

ಇಂದು ಮುಖ್ಯವಾಗಿ ಹೊಸರಾಜ್ಯಗಳ ಬೇಡಿಕೆಗೆ ಕಾರಣ ೧) ಅಸಮತೋಲನ ಅಭಿವೃದ್ಧಿ ೨) ರಾಜಕೀಯ ಮಹಾತ್ವಾಕಾಂಕ್ಷೆ ೩) ಅಧಿಕಾರಕ್ಕಾಗಿ ರಾಜಕೀಯ ಪಕ್ಷಗಳ ಮೇಲಾಟ. ಈ ಮೂರು ಮುಖ್ಯ ಕಾರಣಗಳಿಂದಾಗಿ ಭಾರತ ಸ್ವತಂತ್ರಗೊಂಡ ೫೭ವರ್ಷಗಳ ಅವಧಿಯಲ್ಲಿ ೩೦ ರಾಜ್ಯಗಳ ರಚನೆಯಾಯಿತು. ಇನ್ನೂ ಹತ್ತಾರು ರಾಜ್ಯಗಳು ರಚನೆಯಾಗುವ ಸಂಭವಿದೆ. ಅಂದರೆ ೨೦೧೩ರವರಗೆ ಪ್ರತಿ ವರ್ಷಕ್ಕೆ ಒಂದರಂತೆ ರಾಜ್ಯಗಳ ರಚನೆಯಾಗುತ್ತ ಬಂದಂತಾಯಿತು. ಇದೇ ಕ್ರಮ ಮುಂದುವರಿದಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಮಾಯಾವತಿ ತಮ್ಮ ರಾಜ್ಯ ಹೊಸ ನಾಲ್ಕು ರಾಜ್ಯಗಳಲ್ಲಿ ವಿಭಜಿತಗೊಳ್ಳಬೇಕೆಂದು ಒತ್ತಾಯಿಸುತ್ತಿದ್ದಾರೆ. ರಾಜಕಾರಣದ ಕೆಲವು ವಿಶ್ಲೇಷಣಕಾರರು ಎರಡನೆಯ ರಾಜ್ಯ ವಿಂಗಡಣಾ ಆಯೋಗ ರಚಿತವಾಗಬೇಕೆಂದು ಹೇಳುತ್ತಿದ್ದಾರೆ. ಏಕೆಂದರೆ ಯಾವ ಹಿನ್ನಲೆಯಲ್ಲಿ ಈಗಿರುವ

ರಾಜ್ಯಗಳ ರಚನೆಯಾಯಿತೊ ಅದು ಈಗ ಬದಲಾವಣೆಗೊಂಡಿದೆ. ಬದಲಾದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಪರಿಸ್ಥಿತಿ ಹಿನ್ನಲೆಯಲ್ಲಿ ಇಂಥ ಎರಡನೇ ಆಯೋಗದ ರಚನೆ ಅಗತ್ಯವೆಂದನಿಸುತ್ತದೆ.

೧೯೦೫ರಲ್ಲಿ ಬಂಗಾಳ ರಾಜ್ಯವು ಆಗಿನ ವೈಸರಾಯ್ ಲಾರ್ಡಕರ್ಜನ್‌ನ ಮೂಲಕ ವಿಭಜನೆಗೊಂಡಿತು. ಆ ವಿಭಜನೆ ಸ್ವಾತಂತ್ರ್ಯದ ಚಳುವಳಿಯನ್ನು ದುರ್ಬಲಗೊಳಿಸಲು ಮಾಡಲಾಗಿತ್ತು. ಆದರೆ ದೇಶಭಿಮಾನಿ ಭಾರತೀಯರು ಆ ವಿಭಜನೆಯ ತೀರ್ಮಾನದ ವಿರುದ್ಧ ಹೋರಾಟ ನಡೆಸಿ ಅದನ್ನು ಒಂದು ಗೂಡಿಸಿದರು. ಆದರೆ ದೇಶ ವಿಭಜನೆಗೊಂಡಾಗ ಬಂಗಾಳರಾಜ್ಯವು ವಿಭಜನೆಗೊಂಡಿತು. ಹೆಚ್ಚು-ಹೆಚ್ಚು ರಾಜ್ಯಗಳು ನಿರ್ಮಾಣವಾದಂತೆಲ್ಲ ಪುನಃ ಅಧಿಕಾರದ ಕೇಂದ್ರಿಕರಣವಾಗುತ್ತದೆ. ಕೇಂದ್ರ ಸರ್ಕಾರ ಬಲಿಷ್ಠವಾಗುತ್ತದೆ ಮತ್ತು ರಾಜ್ಯಗಳು ಕೇಂದ್ರ ಸರ್ಕಾರದ ಮೇಲೆ ಎಲ್ಲ ವಿಷಯಕ್ಕೂ ಅವಲಂಬಿತವಾಗಬೇಕಾಗುತ್ತದೆ. ಆಡಳಿತ ವಿಕೇಂದ್ರಿಕರಣವಾಗುವುದರ ಬದಲು ಹೆಚ್ಚು ಕೇಂದ್ರಿತವಾಗುತ್ತದೆ. ಅಲ್ಲದೆ ಹೊಸದಾಗಿ ರಚಿತಗೊಂಡ ರಾಜ್ಯಗಳಲ್ಲಿ ಭಾವನಾತ್ಮಕ ಐಕ್ಯತೆ ಉಂಟಾಗಲು ಹಲವಾರು ವರ್ಷಗಳೇ ಬೇಕಾಗಬಹುದು. ಹೊಸ ರಾಜ್ಯಗಳ ಬೇಡಿಕೆಗಾಗಿ ಜನರು ಮಾಡುತ್ತಿರುವ ಹಿಂಸಾತ್ಮಾಕ ಹೋರಾಟದಿಂದ ಉದಯವಾಗಬಹುದಾದ ರಾಜ್ಯಗಳಿಗೆ ಯಾವ ರೀತಿಯಲ್ಲೂ ಒಳ್ಳೆಯದಾಗುವುದಿಲ್ಲ. ಏಕೆಂದರೆ ಆ ರಾಜ್ಯಗಳ ಉದಯದ ಉದರದಲ್ಲಿಯೇ ಹಿಂಸಾ ಬೀಜಗಳು ಅಡಕವಾಗಿವೆ. ಆದ್ದರಿಂದ ರಚಿತವಾಗುವ ಹೊಸರಾಜ್ಯಗಳಲ್ಲಿಯೂ ಕೂಡ ವಿವಿಧ ಕಾರಣಗಳಿಂದಾಗಿ ಹಿಂಸೆ ಉಂಟಾಗುತ್ತಲೇ ಇರುತ್ತದೆ. ಹೊಸರಾಜ್ಯಗಳ ಬೇಡಿಕೆಯ ಹಿಂದಿನ ಉದ್ದೇಶ ನೆರವೇರದೆ ಹೋಗುತ್ತದೆ.

ರಚಿತವಾಗುವ ಹೊಸರಾಜ್ಯಗಳು ಯಾವ ರೀತಿಯಲ್ಲಿ ಈಗಿರುವ ರಾಜ್ಯಗಳಿಗಿಂತ ಆಡಳಿತಾತ್ಮಕವಾಗಿ ಮತ್ತು ಸಾಮಾಜಿಕವಾಗಿ ಹೇಗೆ ಭಿನ್ನವಾಗುತ್ತವೆಂಬುದು ಕುತೂಹಲದ ವಿಷಯ. ಹೊಸರಾಜ್ಯಗಳು ಕೂಡ ಇಂದಿನ ಅಭಿವೃದ್ಧಿ ಮಾದರಿಯಲ್ಲಿಯೇ ಅಭಿವೃದ್ಧಿ ಸಾಧಿಸುವುದಾದರೆ, ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವದ ಶಿಕ್ಷಣವನ್ನು ಮಕ್ಕಳಿಗೆ ಕೊಡುವುದಾದರೆ, ಅದೇ ಭ್ರಷ್ಟಾಚಾರ ಮುಂದುವರಿಯುವುದಾದರೆ, ಮದ್ಯಪಾನಕ್ಕೆ ಮುಕ್ತ ಅವಕಾಶ ದೊರೆಯುವುದಾದರೆ, ಪ್ರಾಕೃತಿಕ ಸಂಪತ್ತಿನ ಲೂಟಿಯಾಗುವುದಾದರೆ, ಗ್ರಾಮಗಳ ಉಚ್ಚಾಟನೆಯಾಗುವುದಾದರೆ, ಅಸ್ಪೃಶ್ಯತೆ ಮುಂದುವರಿವುದಾದರೆ, ಮಾಫಿಯಾಗಳಿಂದ ಭೂಮಿಯ ವಶೀಕರಣವಾಗುದಾದರೆ, ಹೊಸರಾಜ್ಯಗಳ ರಚನೆ ಯಾವ ದೃಷ್ಟಿಯಿಂದ ಅಗತ್ಯವೆಂಬುದು ಅರ್ಥವಾಗುತ್ತಿಲ್ಲ. ಕೇವಲ ರಾಜಕೀಯ ಲಾಭಕ್ಕಾಗಿಯೇ ಹೊಸ ರಾಜ್ಯಗಳು ನಿರ್ಮಾಣವಾಗುತ್ತಾ ಹೋದರೆ ದೇಶದ ಸ್ವಾತಂತ್ರ್ಯಕ್ಕೆ ಮಾರಕವಾಗುತ್ತದೆ. ಒಂದು ಹೊಸ ರಾಜ್ಯದ ನಿರ್ಮಾಣವಾದರೆ ಜನರ ಭಾವನೆಗಳಿಗೆ ನೋವಾಗುತ್ತದೆ, ಆರ್ಥಿಕವಾಗಿ ಅತಿಯಾದ ಭಾರಬೀಳುತ್ತದೆ ಮತ್ತು ದೇಶದ ಒಟ್ಟು ಹಿತಕ್ಕಿಂತಲೂ ಪ್ರಾದೇಶಿಕ ಹಿತ ಮುಖ್ಯವಾಗಿಬಿಡುತ್ತದೆ. ಆಡಳಿತದ ಸೌರ್ಕಯಕ್ಕಾಗಿ ಒಂದು ಭಾಷೆಯಾಧಾರಿತ ರಾಜ್ಯವಾಗುವುದು ಸೂಕ್ತವಾಗುವುದೆಂಬ ವಿಚಾರದಿಂದ ಭಾಷಾವಾರು ಪ್ರಾಂತ್ಯಗಳ ರಚನೆ ಪ್ರಾರಂಭವಾಯಿತು. ದೇಶ

ನಿಜಾರ್ಥದಲ್ಲಿ ಗಣರಾಜ್ಯವಾಯಿತು. ಆದರೆ ಆ ಗಣರಾಜ್ಯದ ಹಿಂದೆ ಇರಬೇಕಾದ ಏಕೀಭಾವ ಜನರಲ್ಲಿ ಮೂಡಲಿಲ್ಲ. ಬದಲಿಗೆ ಗಣರಾಜ್ಯದ ಹಿಂದಿರುವ ಕಲ್ಪನೆ ನೇಪಥ್ಯಕ್ಕೆ ಸರಿಯಿತು. ಒಟ್ಟಾರೆಯಾಗಿ ಹೊಸ ಹೊಸ ರಾಜ್ಯಗಳ ರಚನೆಯಿಂದ ದೇಶದ ಐಕ್ಯತೆಗೂ ಏಟುಬೀಳುತ್ತದೆ. ಗಣರಾಜ್ಯದ ವ್ಯವಸ್ಥೆಗೂ ಏಟು ಬೀಳುತ್ತದೆ. ದೇಶ ಏಕಕಾಲಕ್ಕೆ ಎರಡು ದುರಂತಗಳನ್ನು ಎದುರಿಸಬೇಕಾಗಿ ಬಂದಿದೆ. ಇದಕ್ಕೆಲ್ಲಾ ಮುಖ್ಯ ಕಾರಣ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದ ಮೇಲೆ ಸ್ವರಾಜ್ಯವೆಂಬ ಸ್ವಾವಲಂಬಿ ಮತ್ತು ಆತ್ಮ ನಿರ್ಭರತೆಯ ವ್ಯವಸ್ಥೆಯನ್ನು ರೂಢಿಸಲು ದೇಶದ ನಾಯಕರು ವಿಫಲರಾದ್ದದ್ದು. ದೂರ ದೃಷ್ಟಿಯಿಂದ ಗಾಂಧೀಜಿ ಹೇಳಿದ್ದ ಸ್ವರಾಜ್ಯವನ್ನು ದೇಶದಲ್ಲಿ ಸ್ಥಾಪಿಸದೆ ಹೋದ್ದದ್ದು.

ಸ್ವಾತಂತ್ರ್ಯ ಬಂದ ಮೇಲೆ ಭಾರತದೇಶವನ್ನು ಯಾವ ಸೈದ್ಧಾಂತಿಕ ವಿಚಾರದ ಮೇಲೆ ಕಟ್ಟಬೇಕೆಂಬುದರ ಬಗ್ಗೆ ನಮ್ಮ ನಾಯಕರಲ್ಲಿ ಯಾವ ಕಲ್ಪನೆಯೂ ಇರದೆ ಇದ್ದದ್ದು ಇಂದಿನ ಎಲ್ಲ ಅನಾಹುತಗಳಿಗೆ ಕಾರಣವಾಗಿದೆ. ಒಂದು ಸಾಮಾನ್ಯ ಮನೆಯನ್ನು ನಿರ್ಮಿಸಬೇಕಾದರೆ ನೀಲನಕ್ಷೆಯನ್ನು ತಯಾರಿಸಲಾಗುತ್ತದೆ. ಆದರೆ ದೇಶ ನಿರ್ಮಾಣದಂಥ ಮಹಾ ಕೆಲಸಕ್ಕೆ ಯಾವುದೇ ಸೈದ್ಧಾಂತಿಕ ನೆಲಗಟ್ಟಿನ ನೀಲನಕ್ಷೆ ಇಲ್ಲದೆ ಇರುವುದು ಆಶ್ಚರ್ಯವೆನಿಸುತ್ತದೆ. ಬಂಡವಾಳಶಾಹಿವಾದ, ಸಾಮ್ಯವಾದ, ಅಭಿವೃದ್ಧಿವಾದ ಸಮಾಜವಾದ ಮತ್ತು ಇತ್ತೀಚಿಗಿನ ನಕ್ಸಲ್‌ವಾದ ಇವು ಯಾವವೂ ನಮ್ಮ ದೇಶದ ಸಂಸ್ಕೃತಿಗೆ ಹೊಂದುವಂಥ ಸಿದ್ಧಾಂತಗಳಾಗಿಲ್ಲ. ಇವುಗಳಲ್ಲಿಯ ಕೆಲ ಸಿದ್ಧಾಂತಗಳ ರಾಜ್ಯಾಡಳಿತವನ್ನು ನೋಡಿಯಾಗಿದೆ. ಅವು ಯಾವವು ಇಂದಿನ ವೈಜ್ಞಾನಿಕ ಯುಗದಲ್ಲಿ ಉಪಯೋಗಕ್ಕೆ ಬರಲಾರವು. ಇವೆಲ್ಲ ವಾದಗಳು ಸಮಾಜವನ್ನು ವಿಭಜಿಸುವಂತಾಗಿವೆಯೇ ಹೊರತು ಸಮಾಜದಲ್ಲಿರುವ ಅನೇಕ ಪ್ರಕಾರದ ವಿವಿಧತೆಗಳಲ್ಲಿ ಏಕತೆಯನ್ನು ತರುವ ಕೆಲಸ ಮಾಡುವುದಿಲ್ಲ. ಎಲ್ಲರನ್ನು ಮತ್ತು ಎಲ್ಲವನ್ನು ಒಳಗೊಂಡತೆ ಹಿತಸಾಧಿಸುವ ಶಕ್ತಿ ಈ ವಾದಗಳಿಗಿಲ್ಲ. ವಿಜ್ಞಾನ ಮತ್ತು ತಂತ್ರಜ್ಞಾನದ ಕಾರಣದಿಂದಾಗಿ ಜಗತ್ತು ಇಂದು ಭೌತಿಕವಾಗಿ ಒಂದಾಗಿದೆಯೇ ಹೊರತು, ಚಿಕ್ಕದಾಗಿದೆಯೇ ಹೊರತು ಜನಸಾಮಾನ್ಯರ ಚಿಂತನೆ, ಸ್ವಭಾವ ಮತ್ತು ಜೀವನದೃಷ್ಟಿಯಿಂದ ಅದು ಒಂದಾಗಿಲ್ಲ. ಮನುಷ್ಯ ಮನುಷ್ಯನಲ್ಲಿ ರಾಷ್ಟ್ರ ರಾಷ್ಟ್ರಗಳಲ್ಲಿ ದೂರ ದೂರಾಗಿಯೇ ಉಳಿದಿವೆ. ಅವುಗಳ ಮಧ್ಯೆ ನಾನಾ ಪ್ರಕಾರದ ಅಡ್ಡಗೋಡೆಗಳು ನಿರ್ಮಾಣವಾಗಿವೆ, ಮನಸ್ಸು ಒಂದಾಗಿಲ್ಲ.

ಏಕಕಾಲಕ್ಕೆ ಪ್ರಜಾಪ್ರಭುತ್ವವನ್ನು ಮತ್ತು ಗಣರಾಜ್ಯವನ್ನು ಬಲ ಪಡಿಸುವ ರಾಜ್ಯಗಳು ನಮಗೆ ಬೇಕಿವೆ. ಈ ವಿಚಾರಕ್ಕೆ ಪೂರಕವಾಗದ ರಾಜ್ಯ ರಚನೆ ಮಾಡುವ ಮುನ್ನ ಬಹುವಾಗಿ ಯೋಚನೆ ಮಾಡಬೇಕು ಮತ್ತು ಆ ರಾಜ್ಯದ ಬೇಡಿಕೆಯ ಹಿಂದಿರುವ ಕಾರಣಗಳನ್ನು ಗುರುತಿಸಿ ಅವುಗಳನ್ನು ಪರಿಹರಿಸಬೇಕು. ಸಾಧ್ಯವಾದಷ್ಟು ಹೊಸ ರಾಜ್ಯಗಳಿಗೆ ಅವಕಾಶ ಮಾಡಕೂಡದು. ಈ ರೀತಿ ಮಾಡದೆ ಆಯಾ ಪ್ರದೇಶಗಳ ಜನರ ಬೇಡಿಕೆಯನ್ನು ರಾಜಕೀಯ ಲಾಭಕ್ಕಾಗಿ ಉಪಯೋಗಿಸಿಕೊಂಡರೆ, ನಮ್ಮ ಭಾರತೀಯ ಸರ್ಕಾರ ಪಾಶ್ಚಿಮಾತ್ಯ ಮನೋಭಾವದ ಸರ್ಕಾರವಾಗುತ್ತದೆ. ಈ ವಿಷಯವಾಗಿ ವಿನೋಬಾ ಈ ಕೆಳಗಿನಂತೆ ಒಂದು ಕಡೆ ಹೇಳಿದ್ದಾರೆ: "ಪಾಶ್ಚಿಮಾತ್ಯರಿಗೆ

ಒಂದಾಗುವುದು ಗೊತ್ತಿಲ್ಲ. ಒಂದು ಜರ್ಮನಿಯನ್ನು ಎರಡು ತುಂಡಾಗಿ ಮಾಡಿದರು ಹಿಂದೂಸ್ಥಾನವನ್ನು ಎರಡು ತುಂಡಾಗಿ ಮಾಡಿದರು. ಹಿಂದೂಸ್ಥಾನ ಮತ್ತು ಪಾಕಿಸ್ತಾನ. ಕೊರಿಯಾವನ್ನು ಕೂಡ ಎರಡು ತುಂಡು ಮಾಡಿದರು. ಒಂದನ್ನು ಎರಡು ಮಾಡುವುದು ಎರಡನ್ನು ನಾಲ್ಕು ಮಾಡುವುದು ಅವರ ಅಭ್ಯಾಸವೆ ಆಗಿದೆ. ಫ್ರಾನ್ಸ್ ಮತ್ತು ಜರ್ಮನಿ ಸ್ವತಂತ್ರ್ಯರಾಷ್ಟ್ರವಾಗಿವುರುವುದಕ್ಕೆ ಕಾರಣವೇನೆಂದರೆ ಅವುಗಳ ಭಾಷೆ ಬೇರೆಬೇರೆಯಾಗಿದೆ. ಭಾರತದಲ್ಲೂ ಕೂಡ ಅನೇಕ ಭಾಷೆಗಳಿವೆ, ಲಿಪಿಗಳು ಕೂಡ ಅನೇಕ ಇವೆ. ಯಾವುದೇ ಒಬ್ಬ ಬಂಗಾಳಿಗೆ ತಮಿಳು ತಿಳಿಯುವುದಕ್ಕಾಗಿ ವರ್ಷವಿಡೀ ಅಧ್ಯಯನ ಮಾಡಬೇಕಾಗುವುದು ಆದರೂ ಕೂಡ ಅವನು ತಮಿಳಿನವ ತನ್ನ ಸಹೋದರನೆಂದು ತಿಳಿಯುತ್ತಾನೆ".

ಆದ್ದರಿಂದ ನಮ್ಮ ಕೇಂದ್ರ ಸರ್ಕಾರ ಭಾರತೀಯರಲ್ಲಿ ಉಂಟಾಗಬಹುದಾದ ಭಿನ್ನತೆಗಳನ್ನು ರಾಜಕೀಯ ಲಾಭಕ್ಕಾಗಿ ಬಳಸದೆ ದೇಶವನ್ನು ಸಧೃಡಗೊಳಿಸುವುದಕ್ಕಾಗಿ ಬಳಸಬೇಕು. ವಿನೋಬಾ ಹೇಳುವಂತೆ 'ಸಂಯುಕ್ತ ಕರ್ನಾಟಕ'ದ ಅರ್ಥ ಒಂದು ಭಾಷೆಯೆನ್ನಾಡುವ ಜನರಾದ ನಾವು ಒಗ್ಗಟ್ಟಾಗಿದ್ದೇವೆ ಮತ್ತು ಜಗತ್ತಿನ ಸೇವೆಗಾಗಿ ಟೊಂಕಕಟ್ಟಿದ್ದೇವೆ. ಈ ವಿಚಾರದಿಂದ ಭಾರತಕ್ಕೆ ಶಕ್ತಿ ಬರುವುದು. ಆದರೆ ಕೆಲ ಸಂಕುಚಿತ ವಿಚಾರವನ್ನು ಜನರು ಕೂಡ ತಮ್ಮೊಂದಿಗೆ ಸೇರಿಕೊಳ್ಳುತ್ತಾರೆ ಇದರಲ್ಲಿ ದುಃಖದ ಯಾವ ಮಾತು ಇಲ್ಲ. ಸದ್‌ವಿಚಾರದ ಪ್ರವಾಹದಲ್ಲಿ ಸಂಕುಚಿತ ವಿಚಾರದವರು ಕೂಡ ಸೇರಿದರೆ ನಿಧಾನವಾಗಿ ಅವರ ವಿಚಾರ ಉದಾರವಾಗುವುದು. 'ಸಂಯುಕ್ತ ಕರ್ನಾಟಕ' ಮೊದಲ ಹೆಜ್ಜೆ. ಇದಾದ ನಂತರ 'ಸಂಯುಕ್ತ ಭಾರತ' ಮತ್ತು ಅದಾದ ನಂತರ 'ಸಂಯುಕ್ತ ವಿಶ್ವ' ಮಾಡಬೇಕು. ಈ ಮಾತು ದೇಶದಲ್ಲಿಯ ಈಗಿನ ಎಲ್ಲ ರಾಜ್ಯಗಳಿಗೂ ಅನ್ವಯಿಸುತ್ತದೆ. ಹಾಗೂ ಭವಿಷ್ಯದಲ್ಲಿ ರಚಿತವಾಗಬಹುದಾದ ರಾಜ್ಯಗಳಿಗೂ ಅನ್ವಯಿಸುತ್ತದೆ. ಇಂದಿನ ಆಧುನಿಕ ಯುಗದಲ್ಲಿ ಜೈ ಕರ್ನಾಟಕ, ಜೈ ಆಂಧ್ರ, ಜೈ ಮಹಾರಾಷ್ಟ್ರ ಮುಂತಾದ ಪ್ರಾದೇಶಿಕ ಘೋಷಣೆಗಳು ಮತ್ತು ಜೈ ಹಿಂದೂಸ್ತಾನ, ಜೈ ಪಾಕಿಸ್ತಾನ ಮುಂತಾದ ರಾಷ್ಟ್ರೀಯ ಘೋಷಣೆ ಅಪ್ರಸ್ತುತವಾಗುತ್ತದೆ. ಈ ಎಲ್ಲ ವಿಚಾರಗಳ ಹಿನ್ನಲೆಯಲ್ಲಿ ಆಲೋಚನೆ ಮಾಡಿದರೆ ತೆಲಂಗಣ ರಾಜ್ಯದ ರಚನೆ ಮತ್ತು ಇನ್ನಿತರ ರಾಜ್ಯಗಳಿಗಾಗಿ ಬೇಡಿಕೆಯ ವಿಚಾರ ಎಷ್ಟು ಹಾಸ್ಯಸ್ಪದವೆಂದು ತೋರುತ್ತದೆ. ಹೊಸ ರಾಜ್ಯಗಳ ರಚನೆ ಯಾವ ಮತ್ತು ಯಾರ ಸುಖಕ್ಕಾಗಿ ಎಂದು ಕೇಳಬೇಕಾಗುತ್ತದೆ. ಈಗ ಜೈ ಜಗತ್ ಎಂದು ಹೇಳುವ ಮತ್ತು ಅಲೋಚಿಸುವ ಕಾಲ ಬಂದಿದೆ.

* * *

ಬೇಡವೆಂದು ಅರಚುತ್ತಿದೆ ಕೂಡಲಕುಲಂ

ಪುಸ್ತಕ ಪರಿಚಯ – ಬೇಡವೆಂದು ಅರಚುತ್ತಿದೆ ಕೂಡಲಕುಲಂ
ಲೇಖಕರು – ಅನಿತಾ
ಪ್ರಕಟಣಾ ವರ್ಷ – ೨೦೧೨
ಪುಟಗಳು – ೧೨೫

ಅಭಿವೃದ್ಧಿ, ಪ್ರಜಾಪ್ರಭುತ್ವ ಮಾನವ ಹಕ್ಕು ಇತ್ಯಾದಿ ವಿಷಯ ಪ್ರಸ್ತಾಪಕ್ಕೆ ಬಂದಾಗಲೆಲ್ಲ ಪ್ರಭುತ್ವ ಅವುಗಳನ್ನು ಹತ್ತಿಕ್ಕುವ ಪ್ರಯತ್ನ ಮಾಡುತ್ತಿರುವುದು ಜಗತ್ತಿನಾದ್ಯಂತ್ಯ ಮುಂದುವರೆದಿದೆ. ಪ್ರಭುತ್ವವು ಸಮಾಜದಲ್ಲಿಯ ಪ್ರಭಾವಶಾಲಿ ವರ್ಗಗಳ ಸಾಧನವಾಗಿದೆಂದು ಭಾವಿಸಲಾಗುತ್ತದೆ. ಆ ಪ್ರಭಾವಿ ವರ್ಗ ಜನಸಾಮಾನ್ಯರ ಹಿತಕ್ಕೆ ವಿರುದ್ಧವಾಗಿ ಕೆಲಸಮಾಡುತ್ತದೆ ಪರಿಣಾಮವಾಗಿ ಸಮಾಜದ ವಿವಿಧ ವರ್ಗಗಳು ಸಂಘಟಿತವಾಗುವುದಕ್ಕೆ ಕಾರಣವಾಗಿದೆ. ಅಲ್ಲದೆ, ಅಸಂಖ್ಯಾತ ಸಾಮಾಜಿಕ ಚಳುವಳಿಗಳು ಹುಟ್ಟಿಕೊಂಡಿವೆ. ನೈಸರ್ಗಿಕ ಸಂಪತ್ತಿನ ಮೇಲೆ ಅವಲಂಬಿಸಿದ ಜನರನ್ನು ನೀತಿನಿರ್ಧಾರಕ ಪ್ರಕ್ರಿಯೆಯಲ್ಲಿ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಇದ್ದಾಗ ಮತ್ತು ಸರ್ಕಾರದ ತೀರ್ಮಾನಗಳು ಜನತೆಯ ಹಿತಕ್ಕೆ ವಿರುದ್ಧವಾದಾಗ ಇಂಥ ಹೋರಾಟಗಳು ಹೆಚ್ಚಾಗಿ ಹುಟ್ಟುತ್ತವೆ. ತಮಿಳುನಾಡಿನಲ್ಲಿರುವ 'ಕೂಡಲಕುಲಂ' ಬಳಿಯ 'ಇಡಂತುಕರೈ' ಹಳ್ಳಿಯವರು 'ಕೂಡಲಕುಲಂ' ಅಣುಸ್ಥಾವರ ವಿರುದ್ಧ ನಡೆಸಿದ ಹೋರಾಟ ಇದಕ್ಕೊಂದು ಉದಾಹರಣೆ.

'ಕೂಡಲಕುಲಂ' ಅಣುಸ್ಥಾವರದಿಂದ ಇಡಂತುಕರೈ ಎಂಬ ಗ್ರಾಮ ಎರಡು ಕಿ.ಮಿ ದೂರದಲ್ಲಿ ಸ್ಥಾವರದ ನಿಷೇಧಿತ ಪ್ರದೇಶದಲ್ಲಿ ಇದೆ. ಅಲ್ಲಿರುವ ಲೌವರಡಸ್ ಚರ್ಚ್ 'ಸಮರ ಪೆಂಡಾಲ'ನ್ನು ನಿರ್ಮಿಸಿತು. ಆ ಸ್ಥಳ ಕೂಡಲಕುಲಂ ಅಣುಸ್ತಾವರದ ವಿರುದ್ಧದ ಹೋರಾಟದ ಮುಖ್ಯ ಕೇಂದ್ರವಾಯಿತು **'ಬೇಡವೆಂದು ಅರಚುತ್ತಿದೆ ಕೂಡಲಕುಲಂ'** ಎಂಬ ಈ ಪುಸ್ತಕ ಜನತಾ ಹೋರಾಟದಲ್ಲಿ ಭಾಗವಹಿಸಿದ್ದ ಮಹಿಳೆಯರ ಮತ್ತು ಮಕ್ಕಳ ಹೋರಾಟದ ಅನುಭವವಗಳನ್ನು ದಾಖಲಿಸುತ್ತದೆ. ಈ ದಾಖಲೆಯ ಅವಧಿ ಆಗಸ್ಟ್ ೨೦೧೧ ರಿಂದ ಡಿಸೆಂಬರ್ ೨೦೧೨ರ ವರೆಗಿನದ್ದಾಗಿದೆ. ಈ ಪುಸ್ತಕವು ನಾಲ್ಕು ವಿಭಾಗ ಹೊಂದಿದೆ. ಮೊದಲನೆಯದು **'ನಮ್ಮ ಜೀವನವೆಂಬುದು'** ಇದರಲ್ಲಿ ವಿವಿಧ ವಯಸ್ಸು ಮತ್ತು ಗುಂಪುಗಳಿಗೆ ಸೇರಿದ ೫ ಜನರ ವಿಚಾರಗಳಿವೆ. ಹಳ್ಳಿಯ ಜನರ ದೈನಂದಿನ ಜೀವನ ಮತ್ತು ಪ್ರಕೃತಿಯೊಂದಿಗಿರುವ ಅವರ ನಿಕಟ ಸಂಬಂಧವನ್ನು ಇಲ್ಲಿ ಹೇಳಿದ್ದಾರೆ. **'ನಮ್ಮ ಹೋರಾಟ'** ಎಂಬ ವಿಭಾಗ ಆಗಸ್ಟ್ ೨೦೧೨ ರಿಂದ ನಡೆದ ಹೋರಾಟದ ಹೆಣ್ಣುಮಕ್ಕಳ ಅನುಭವವನ್ನು ಒಳಗೊಂಡಿದೆ. ದೇಶದ ವಿವಿಧ ಭಾಗಗಳಲ್ಲಿಯ ಸಂಸ್ಥೆಗಳು ಮತ್ತು ಜನತೆ ಆ ಹೋರಾಟಕ್ಕೆ ಕೊಟ್ಟ ನೈತಿಕ ಬೆಂಬಲ ಮತ್ತು ಪ್ರೇರಣೆಯನ್ನು ದಾಖಲಿಸುತ್ತದೆ. **'ಪ್ರೀತಿಯ ಸಹೋದರಿ'** ಎಂಬ ವಿಭಾಗದಲ್ಲಿ ಹೆಣ್ಣುಮಕ್ಕಳು ಬರೆದ ಆರು ಪತ್ರಗಳಿವೆ.

ಈ ಪತ್ರಗಳು ಅಣುಶಕ್ತಿಯ ವಿರುದ್ಧದ ಅವರ ಹೋರಾಟದ ಕಾರಣಗಳನ್ನು ಮತ್ತು ಸನ್ನಿವೇಶಗಳನ್ನು ತಿಳಿಸುತ್ತವೆ ಮತ್ತು ಯೋಜನೆಯ ಆಯೋಜಕರು ಮಧ್ಯಸ್ಥಿಕೆ ವಹಿಸಿ ತಮ್ಮ ಜನಸಮುದಾಯಕ್ಕೆ ನ್ಯಾಯ ಒದಗಿಸಬೇಕೆಂದು ಹೇಳುತ್ತವೆ. **'ಕ್ಷಮಿಸಲಾರದ ಸುಳ್ಳುಗಳು'** ಎಂಬ ವಿಭಾಗ ಅಣುಸ್ಥಾವರಕ್ಕೆ ಸಂಬಂಧಿಸಿದ ಕೆಲ ಮಹತ್ವದ ವಿಷಯ ಒಳಗೊಂಡಿರುತ್ತದೆ. ಅದು ಸರ್ಕಾರ ಮಂಡಿಸುವ ವಾದ ಮತ್ತು ಅದಕ್ಕೆ ಹೋರಾಟಗಾರರ ಪ್ರತಿಉತ್ತರ ಒಳಗೊಂಡಿದೆ. ಕೊನೆಯ ವಿಭಾಗ **'ಮುಂದಿನ ದಾರಿ'** ಎಂಬುದು. ಇದನ್ನು ಎಸ್.ಶಾಂತಿ ಎಂಬುವರು ಬರೆದಿದ್ದಾರೆ. ಅದರಲ್ಲಿ ಜಗತ್ತಿನ ವಿವಿಧ ಭಾಗಗಳಲ್ಲಿ ಮಹಿಳೆಯರು ಅಣುಶಕ್ತಿಯ ವಿರುದ್ಧ ಮಾಡುತ್ತಿರುವ ಹೋರಾಟಗಳನ್ನು ಉಲ್ಲೇಖಿಸಿದ್ದಾರೆ.

ಈ ಪುಸ್ತಕಕ್ಕೆ ಡಾ॥ ಎಸ್.ಪಿ.ಉದಯಕುಮಾರ ಮುನ್ನುಡಿ ಬರೆದಿದ್ದಾರೆ ಅವರು ಪಿ.ಎ.ಎನ್.ಇ ಎಂಬುದರ ಸಮನ್ವಯಾಧಿಕಾರಿಯಾಗಿದ್ದಾರೆ. ಅಣುಶಕ್ತಿ ವಿರುದ್ಧದ ಹೋರಾಟದ ಕಾರಣಗಳ ಹಿನ್ನಲೆಯನ್ನು ವಿವರವಾಗಿ ಪ್ರಸ್ತಾಪಿಸುತ್ತಾರೆ. ಕೂಡಲಕುಲಂ ಅಣುಸ್ಥಾವರ ಸ್ಥಾಪನೆಗೆ ಮೊದಲು ಯಾವುದೇ ರೀತಿಯ ಪ್ರಜಾತಾಂತ್ರಿಕ ತೀರ್ಮಾನ ಕೈಗೊಳ್ಳುವುದಾಗಲೀ, ಸ್ಥಳೀಯ ಜನರ ಒಪ್ಪಿಗೆಯನ್ನು ಪಡೆಯುವುದಾಗಲೀ, ಮಾಡಿರುವುದಿಲ್ಲ. ಅಲ್ಲದೆ, ಪರಿಸರಾತ್ಮಕ ಪರಿಣಾಮಗಳ ವರಿದಿಯನ್ನಾಗಲೀ, ಸ್ಥಾವರ ನಿರ್ಮಾಣದ ಸ್ಥಳ ಪರಿಶೀಲನಾ ಸಮಿತಿಯ ವರದಿಯನ್ನಾಗಲೀ, ಸುರಕ್ಷಿತಾ ಆಗುಹೋಗುಗಳ ವರದಿಯನ್ನಾಗಲೀ, ಅವಘಡದ ನಿರ್ವಹಣಾ ವರದಿಯನ್ನಾಗಲೀ ಪರಿಶೀಲಿಸಿಲ್ಲ.

ಈ ವರದಿಗಳ ಬಗ್ಗೆ ಜನತಾ ಪ್ರತಿನಿಧಿಗಳೊಂದಿಗಾಗಲೀ ಅಥವಾ ಪತ್ರಿಕಾ ವರದಿಗಾರರೊಂದಿಗಾಗಲೀ ಚರ್ಚಿಸಿಲ್ಲ. ಕೂಡಲಕುಲಂ ಅಣುಸ್ಥಾವರದ ೩೦ ಕಿ.ಮಿ ಸುತ್ತಳತೆಯಲ್ಲಿ ೧೦ ಲಕ್ಷಕಿಂತ ಹೆಚ್ಚು ಸಂಖ್ಯೆಯ ಜನರು ವಾಸವಾಗಿದ್ದಾರೆ ಈ ಪ್ರಜಾಸಂಖ್ಯೆ ಅಣುಶಕ್ತಿ ನಿಯಮನ ಮಂಡಳಿ ಸೂಚಿಸಿರುವ ಪ್ರಮಾಣಕ್ಕಿಂತ ಹೆಚ್ಚಾಗಿದೆ. ಒಂದು ವೇಳೆ ಅಣುವಿಪತ್ತು ಸಂಭವಿಸಿದರೆ, ಇಷ್ಟೊಂದು ದೊಡ್ಡ ಜನಸಂಖ್ಯೆಯನ್ನು ತ್ವರಿತವಾಗಿ ಮತ್ತು ದಕ್ಷತೆಯಿಂದ ಸ್ಥಳಾಂತರಿಸುವುದು ವ್ಯವಹಾರಿಕವಾಗಿ ಅಸಾಧ್ಯವಾಗಿದೆ. ಇಷ್ಟೆ ಅಲ್ಲದೆ, ಆ ಅಣುಸ್ಥಾವರದಿಂದ ಹೊರ ಬರುವ ತಣ್ಣನೆಯ ನೀರು ಮತ್ತು ತ್ಯಾಜ್ಯ ಸಮುದ್ರದಲ್ಲಿ ಸೇರುತ್ತವೆ ಅದರಿಂದಾಗಿ ಮೀನು ಉತ್ಪಾದನೆಯ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತದೆ. ಮೀನುಗಾರರನ್ನು ಮತ್ತಷ್ಟು ಬಡತನ ಮತ್ತು ಕಾರ್ಪಣ್ಯಕ್ಕೆ ತಳ್ಳುತ್ತದೆ. ಅಣುಸ್ಥಾವರ ತನ್ನ ಸಾಮಾನ್ಯ ಚಟುವಟಿಕೆಯಲ್ಲಿ ಗಾಳಿ, ಭೂಮಿ, ಬೆಳೆ, ದನಕರು, ಮೀನು, ಸಮುದ್ರ ಮತ್ತು ಅಂತರ ಜಲ ಇಂಥವುಗಳಿಗೆ ವಿಕಿರಣಗಳನ್ನು ಸೇರಿಸುತ್ತದೆ. ಪರೀಕ್ಷೆಗೆ ಒಳಪಡದ ರಶಿಯಾ ತಯಾರಿಸಿದ ವಿ.ಇ.ಆರ್ ೧೦೦೦ ಎಂಬ ಸ್ಥಾವರಗಳ ವಿನ್ಯಾಸ ರಚನೆ ಮತ್ತು ಕಾರ್ಯಾಚರಣೆ ಬಗ್ಗೆ ಜಾಗತಿಕ ಮಟ್ಟದಲ್ಲಿ ಚಿಂತೆಯಿದೆ.

ಪುಸ್ತಕದಲ್ಲಿಯ ವಿವರಗಳು ಇಡಂತುಕರೈ ಗ್ರಾಮದ ಜನ ಸಮುದ್ರದೊಂದಿಗೆ ಹೊಂದಿರುವ ಬಾಂಧವ್ಯವನ್ನು ವಿವರಿಸುತ್ತದೆ. ಓರ್ವ ಮಹಿಳೆ ಹೀಗೆ ಹೇಳುತ್ತಾಳೆ, "ನಾವು ಸಮುದ್ರತೀರದ ಮಕ್ಕಳು. ಸಾಗರ ಬಿಟ್ಟು ನಮ್ಮ ಜೀವನವನ್ನು ಊಹಿಸಲಾರೆವು".

ಇನ್ನೋರ್ವ ಮಹಿಳೆ ಹೀಗೆ ಹೇಳುತ್ತಾಳೆ, "ಸಮುದ್ರ ನನ್ನ ತವರು ಮನೆ."

ಮಕ್ಕಳು ಶಾಲೆಗೆ ಹೋಗುವುದಿಲ್ಲ ಬಡವರು ಹಾಗೂ ಅನಕ್ಷರಸ್ಥರು ಎಂದು ದಾರಿಹೋಕರು ತಿಳಿಯುತ್ತಾರೆ. ಆದರೆ ಅವರೆಲ್ಲರೂ ಶಾಲೆಗೆ ಹೋಗುತ್ತಾರೆ. ಮಕ್ಕಳ ತಂದೆ ತಾಯಿಗಳಿಗೆ ಓದು ಬರಹ ಗೊತ್ತಿದೆ. ವರ್ತಮಾನ ಪತ್ರಿಕೆ ಓದುತ್ತಾರೆ, ಸುದ್ದಿ ಕೇಳುತ್ತಾರೆ, ಹೆಚ್ಚು ಓದಲು ಇಷ್ಟಪಡುತ್ತಾರೆ, ಕವನ ಮತ್ತು ಕಥೆ ಬರೆಯಲು ಬಯಸುತ್ತಾರೆ. ಇಡಂತುಕರೈ ಗ್ರಾಮಸ್ಥರು ೨೦೧೨ರಲ್ಲಿ ಮಾಡಿದ ಹೋರಾಟ, ಅದರಲ್ಲಿಯೂ ಮುಖ್ಯವಾಗಿ 'ಫುಕೊಶಿಮಾ ಅಣುಸ್ಥಾವರ'ದ ದುರಂತದಿಂದ ಅವರ ಮೇಲಾದ ಪರಿಣಾಮ ಹಾಗೂ ಅಣಕು ಕವಾಯತಗಳ ಬಗ್ಗೆ ವಿವರ ಈ ಪುಸ್ತಕದಲ್ಲಿದೆ. ಅವರ ಈ ಹೋರಾಟದಲ್ಲಿ ಕೇವಲ ನ್ಯಾಯದ ಬೇಡಿಕೆ ಅಷ್ಟೇ ಇರದೆ, ಮುಂದಿನ ತಲೆಮಾರಿನವರಿಗೂ ನ್ಯಾಯದೊರಕಬೇಕೆಂಬುದು ಇನ್ನೊಂದು ಬೇಡಿಕೆಯಾಗಿದೆ. ಅವರ ಒತ್ತಾಯದ ಬೇಡಿಕೆ ಏನೆಂದರೆ, ಸುರಕ್ಷಿತತೆ ಮತ್ತು ಶಾಂತಿ ಹಾಗೂ ತಮ್ಮ ಇಷ್ಟಾನುಸಾರ ಜೀವನ ನಡೆಸಲು ಅವಕಾಶ ಅವರ ಇಚ್ಛೆ ಏನೆಂದರೆ ಹಲವಾರು ತಲೆಮಾರಿನ ಸಂತತಿಯನ್ನು ಸದ್ದುಗದ್ದಲವಿಲ್ಲದೆ ಸಾಯಿಸುವ ಹಾಗೂ ಮಣ್ಣು ಮತ್ತು ನೀರನ್ನು ಹಾಳುಮಾಡುವ ವಿಷಯುಕ್ತ ಅಣುಸ್ಥಾವರದ ಪಕ್ಕದಲ್ಲಿ ವಾಸಿಸಕೂಡದು ತಮ್ಮ ಒಳ್ಳೆಯದಕ್ಕಾಗಿ ಮತ್ತು ಕಲ್ಯಾಣಕ್ಕಾಗಿ ಕೈಗೊಳ್ಳಲಾಗುವ ತೀರ್ಮಾನಗಳಲ್ಲಿ ಭಾಗವಹಿಸುವುದಕ್ಕೆ ಸಮರ್ಥರಾಗುವುದು.

ಈ ಪುಸ್ತಕದಲ್ಲಿಯ ವಿವಿಧ ಲೇಖನಗಳು ಹಿಂಸೆಯ ವಿರುದ್ಧ ಅಹಿಂಸಾತ್ಮಕ ಹೋರಾಟದ ಸಂಗತಿಗಳನ್ನು ಮನಮುಟ್ಟುವಂತೆ ತಿಳಿಸುತ್ತವೆ. ಗ್ರಾಮಸ್ಥರ ಭಾವನಾತ್ಮಕ ಹೋರಾಟವನ್ನು ಮತ್ತು ಶತಮಾನದಷ್ಟು ಹಳೆಯದಾದ 'ಲೌವರಡಸ್ ಚರ್ಚ್' ಅಪವಿತ್ರಗೊಳಿಸಿದ್ದನ್ನು ಈ ಲೇಖನಗಳು ತಿಳಿಸುತ್ತವೆ. ಹಳ್ಳಿಗರ ಅನೇಕ ಬಗೆಯ ಅನುಭವಗಳನ್ನು, ಭೂಮಿಯ ಮೇಲೆ ಮತ್ತು ಸಮುದ್ರ ತೀರದಲ್ಲಿ ಅಡೆತಡೆಗಳನ್ನು ನಿರ್ಮಿಸಿದ್ದನ್ನು, ಲಾಠಿಗಳ ಏಟನ್ನು, ಜನರ ಗುಂಪನ್ನು ಬೆನ್ನಟ್ಟಿದ್ದನ್ನು, ಕಾಲಮೀರಿದ ಅಶ್ರುವಾಯು ಉಪಯೋಗವನ್ನು, ಆಸ್ತಿಪಾಸ್ತಿಗಳ ನಾಶವನ್ನು, ಮನಸ್ಸೋಯಿಚ್ಛೆ ಬಂಧನವನ್ನು, ಮನೆಗಳಲ್ಲಿಯ ಸಾಮಾನು ಎಸೆದಾಡುವುದನ್ನು, ಮಕ್ಕಳ ಮೇಲಿನ ಅತ್ಯಾಚಾರವನ್ನು, ಇತ್ಯಾದಿ ಘಟನೆಗಳೆಲ್ಲ ಆ 'ಸಮರಪೆಂಡಾಲ' ಆತ್ಮವೃತ್ತಾಂತದ ರೂಪದಲ್ಲಿ ಪರಿಣಾಮಕಾರಿಯಾಗಿ ಹೇಳುತ್ತದೆ. ಈ ಹೋರಾಟದ ಮೇಲೆ ಗಾಂಧೀಜಿ ಪ್ರತಿಪಾದಿಸಿದ ಅಹಿಂಸೆಯ ಪ್ರಭಾವ ಇರುವುದನ್ನು ಎತ್ತಿತೋರಿಸುತ್ತದೆ. ಇಡಂತುಕರೈ ಗ್ರಾಮದ ೧೩ವರ್ಷದ ಪೋರ, 'ನಾನು ಅಹಿಂಸಾ ಶಬ್ದವನ್ನು ಪ್ರೀತಿಸುತ್ತೇನೆ'. ಪ್ರೇಮ ಮತ್ತು ಆರೈಕೆ, ಸಹ ಜೀವಿಗಳ ಬಗ್ಗೆ ಕಾಳಜಿ ಇಂಥ ಭಾವನೆಗಳೆಲ್ಲ ಆ ಶಬ್ದದಲ್ಲಿ ಇವೆ. ಈ ಹೋರಾಟದ ಮೂಲಕ ಇವನ್ನೆಲ್ಲ ಕಲಿಯುವುತಿರುವುದಕ್ಕಾಗಿ ನನಗೆ ಅಭಿಮಾನವಿದೆ. ಅತ್ಯಂತ ಘೋರ ಹಿಂಸೆಯ ವಿರುದ್ಧ ಈ ಹೋರಾಟವಾಗಿದೆ. ಅಂತಾರಾಷ್ಟ್ರೀಯ ಗ್ರೀನಪೀಸ್ ಸಂಸ್ಥೆಯ ಮಾಜಿ ಅಧ್ಯಕ್ಷೆ ಲಲಿತಾ ರಾಮದಾಸ್ ಆಗಾಗ್ಗೆ ಇಡಂತುಕರೈಗೆ ಭೇಟಿಕೊಡುತ್ತಾ ಬಂದಿದ್ದಾರೆ: "ಪ್ರಜಾಪ್ರಭುತ್ವ ಹೇಗಿರಬೇಕೆಂಬುದನ್ನು ಮನಮುಟ್ಟುವಂತೆ ಮತ್ತು ಪ್ರೇರಣೆಕೊಡುವಂತದರ ಹೆಗ್ಗುರುತಾಗಿದೆ ಈ ಕೂಡಲಕುಲಂ ಹೋರಾಟ" ಎಂದು ಹೇಳಿದ್ದಾರೆ. ಗಾಂಧೀಜಿಯವರ ಅಹಿಂಸಾ

ಸಂದೇಶವನ್ನು ಪ್ರಭುತ್ವದ ದಬ್ಬಾಳಿಕೆ ಮತ್ತು ಅನ್ಯಾಯದ ವಿರುದ್ಧ ಹೇಗೆ ಉಪಯೋಗಿಸಬಹುದೆಂಬುದನ್ನು ಕೂಡಲಕುಲಂ ಹೋರಾಟ ತೋರಿಸುತ್ತದೆ.

ಇಡಂತುಕರೈ ಗ್ರಾಮಸ್ಥರ ಈ ಹೋರಾಟ ಸ್ಥಾನೀಯವಾಗಿರಬಹುದು. ಆದರೆ ಇದು ಒಂದು ಅಣುಸ್ಥಾವರವನ್ನು ತಡೆಯುವುದಾಗಿರದೆ ಜಾಗತಿಕ ಮಟ್ಟದ ಪ್ರಶ್ನೆಗಳನ್ನು ಎತ್ತುತ್ತದೆ. ಓರ್ವ ಯುವ ಮಹಿಳೆ ಹೇಳುವಂತೆ, 'ಈ ಹೋರಾಟ ಅಣುಸ್ಥಾವರವನ್ನು ನಿಲ್ಲಿಸುವುದರ ಬಗ್ಗೆ ಅಲ್ಲ ಅದು ಪ್ರಜೆಗಳ ಧ್ವನಿಯನ್ನು ಕೇಳಿಸಿಕೊಳ್ಳುವ ಮತ್ತು ವಿಚಾರ ವಿನಿಮಯ ಮಾಡುವ ಹಕ್ಕಿನ ಬಗ್ಗೆ ಇದೆ'. ಅಣುಶಕ್ತಿಯಿಂದ ಮುಕ್ತವಾದ ಜಗತ್ತಿಗಾಗಿ ೧೪ವರ್ಷದ ಬಾಲಕ ಹೇಳುವುದೇನೆಂದರೆ 'ಎಲ್ಲ ಪ್ರಕಾರದ ದುಃಖ ದುಮ್ಮಾನಗಳ ಹೊರತಾಗಿಯೂ, ಕಷ್ಟ ನಷ್ಟಗಳ ಹೊರತಾಗಿ ಜಾಗತಿಕವಾಗಿ ಪ್ರಸ್ತುತತೆ ಮತ್ತು ಮೌಲ್ಯವಿರುವ ಹೋರಾಟ ಮಾಡುತ್ತಿದ್ದೇವೆ. ಅದಕ್ಕಾಗಿ ನಮಗೆ ಅಭಿಮಾನವಿದೆ'. ಹೇಗೆ ಬೃಹತ್ ಯೋಜನೆಗಳು ಸಂಬಂಧಿಸಿದ ಜನತೆಯ ಕಷ್ಟ ಸುಖಗಳನ್ನು ವಿಚಾರಿಸದೆ, ಆ ಯೋಜನೆಗಳ ಬಗ್ಗೆ ಮಾಹಿತಿ ಕೇಳಲು ಅವಕಾಶ ಕೊಡದೆ ಹೇರಲ್ಪಡುತ್ತವೆ ಎಂಬುದನ್ನು ಈ ಪುಸ್ತಕ ಬಹಿರಂಗ ಪಡಿಸುತ್ತದೆ. ಹೋರಾಟ ಮಾಡುವ ಜನರನ್ನು ರಾಷ್ಟ್ರವಿರೋಧಿಗಳೆಂದು, ದೇಶದ್ರೋಹಿಗಳೆಂದು ಪ್ರಭುತ್ವದ ವಿರುದ್ಧ ಯುದ್ಧ ಸಾರುವವರೆಂದು ಆಪಾದಿಸಲ್ಪಡುತ್ತಾರೆ ಎಂದು ಈ ಪುಸ್ತಕ ಹೇಳುತ್ತದೆ. ಫುಕೊಶಿಮಾ ದುರಂತದ ಅನುಭವದಿಂದ ಆಗಿರುವ ಅನುಭವ ಏನೆಂದರೆ ಯಾರು ಕೂಡಾ ಪ್ರಾಕೃತಿಕ ವಿಕೋಪವನ್ನು ಊಹಿಸಲಾರರು.(Three Mile Island) ಮತ್ತು ಚರ್ನೋಬಿಲ್‌ನಲ್ಲಿ ಆದ ದುರಂತದ ನಂತರ ಜರ್ಮನಿ, ಸ್ವಿಜರ್‌ಲ್ಯಾಂಡ್ ಮತ್ತು ಜಪಾನ್ ಅಣುಸ್ಥಾವರಗಳನ್ನು ನಿಧಾನವಾಗಿ ಕಳಚಿಹಾಕಬೇಕೆಂದೂ, ಹೊಸ ಸ್ಥಾವರಗಳನ್ನು ನಿರ್ಮಿಸಕೂಡದೆಂದೂ ತಿರ್ಮಾನಿಸಿರುವಾಗ ಅಮೇರಿಕಾ ಮತ್ತು ರಷ್ಯ ಕಳೆದು ೨-೩ ಧಶಕಗಳಲ್ಲಿ ಹೊಸ ಅಣುಸ್ಥಾವರ ನಿರ್ಮಿಸದೆ ಇರುವಾಗ ಭಾರತ ಸರಕಾರವು ಯೋಚನೆ ಮಾಡದೆ ಅಣುಶಕ್ತಿಗಾಗಿ ಒತ್ತಾಯಿಸುತ್ತಿದೆ. ತನ್ನ ಎಲ್ಲ ಅಣುಒಪ್ಪಂದಗಳು ಮತ್ತು ಚಟುವಟಿಕೆಗಳ ಬಗ್ಗೆ ಜನರ ಚಿಂತೆ ಬಗ್ಗೆ ಕೇಳಿಸಿಕೊಳ್ಳದೆ ಇರುವುದರಿಂದ ಅಂಥ ಯೋಜನೆಗಳ ಫಲಾನುಭವಿಗಳು ಯಾರೆಂಬುದರ ಬಗ್ಗೆ ಸಂಶಯ ಮೂಡುತ್ತದೆ.

'ಬೇಡವೆಂದು ಅರಚುತ್ತಿದೆ ಕೂಡಲಕುಲಂ' ಎಂಬ ಈ ಪುಸ್ತಕ ಅಂಥ ಯೋಜನೆಗಳಿಂದಾಗುವ ನೇರ ಪರಿಣಾಮದ ಬಗ್ಗೆ ಕಣ್ಣು ತೆರೆಸುತ್ತದೆ. ಸ್ಥಳೀಯ ಜನರ ದೈನಂದಿನ ಜೀವನದ ಮೇಲೆ ಆಗುವ ದುಷ್ಪರಿಣಾಮವನ್ನು ತಿಳಿಸುತ್ತದೆ. ಪ್ರಜಾಪ್ರಭುತ್ವ, ಮಾನವ ಹಕ್ಕುಗಳು ಮುಂತಾದವುಗಳ ಬಗ್ಗೆ ಗಂಭೀರವಾದ ಪ್ರಶ್ನೆಗಳನ್ನು ಎತ್ತುತ್ತದೆ. ಅಣುಶಕ್ತಿಯ ವಿರುದ್ಧ ಹೆಣ್ಣು ಮಕ್ಕಳು ನಡೆಸಿದ ಹೋರಾಟದ ಘಟನಾವಳಿ ಈ ಪುಸ್ತಕದಲ್ಲಿ ಇದೆ. ಅದು ನಿಜವಾಗಿಯೂ ಪ್ರೇರಣಾದಾಯಿಯಾಗಿದೆ. ಮಹಿಳಾ ಕೇಂದ್ರಿತ ಹೋರಾಟದ ಈ ಕಥೆಯು ಇನ್ನೂ ಹೆಚ್ಚು ಮಹಿಳೆಯರು ಮುಂದೆ ಬಂದು ಅಣುಶಕ್ತಿಯ ವಿರುದ್ಧ ಹೋರಾಡುವಂತೆ ಗ್ರಂಥ ಪ್ರೇರೇಪಿಸುತ್ತದೆ.

(ಗ್ರಂಥದ ವಿಮರ್ಶಕರು : ತೆರೆಸಾ ಜೋಸೆಫ್, ಉಪಪ್ರಾಧ್ಯಾಪಕರು, ಆಲ್‌ಫೋನ್ಸಾ ಕಾಲೇಜು, ಅರುಣಾಪುರಂ, ಕೇರಳ)

ಅಲೆಮಾರಿಯ ಅಂತರಂಗ

(ದೊಂಬಿದಾಸ ಜನಾಂಗದಲ್ಲಿ ಜನ್ಮತಳೆದ ಕುಪ್ಪೆ ನಾಗರಾಜರ ಕೃತಿ 'ಅಲೆಮಾರಿಯ ಅಂತರಂಗ'. ಇದು ನವ ಕರ್ನಾಟಕದ ಪ್ರಕಾಶನ. ಆ ಸಮಾಜದ ಅಂತರಂಗವನ್ನು ಬಿಚ್ಚಿಡುವ ಈ ಪುಸ್ತಕದ ಮೊದಲನೆಯ ಅಧ್ಯಾಯವನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ - ಸಂ)

ಇಷ್ಟು ವಿಶಾಲವಾದ ಈ ಭೂಮಿ ಮೇಲೆ ನನ್ನ ಅಪ್ಪನಿಗೆ ಎಲ್ಲಿಯೂ ಒಂದು ಅಂಗೈ ಅಗಲ ಜಾಗ ಇರಲಿಲ್ಲ. ನೆಲೆ ಇಲ್ಲದ ಅಪ್ಪ ಊರೂರು ಸುತ್ತುತ್ತಾ ತನ್ನ ಪರಂಪರೆಯ ಜೋಳಿಗೆಯನ್ನು ಹೆಗಲಿಗೆ ನೇತಾಕ್ಕೊಂಡು ಬಡಗ ಸೀಮೆಯಿಂದ ಈ ಕಡೆಗೆ ಬಂದರಂತೆ. ಅಜ್ಜ ಮುತ್ತಜ್ಜರಿಂದ ಬಳುವಳಿಯಾಗಿ ಬಂದ ಆಸ್ತಿ, ಅದೇ ಭವದ ಭಿಕ್ಷಾ ವೃತ್ತಿಯನ್ನು ಬದುಕಾಗಿಸಿಕೊಂಡಿದ್ದರು. ಹಾಡೇಳಿ, ಬಯಲಾಟ ಆಡಿ, ಹರಿಕಥೆ ಮಾಡಿ ಊರೂರು ಸುತ್ತುತ್ತಾ ಮಳೆ ಬೆಳೆ ಚೆನ್ನಾಗಿ ಆಗೋ ದಿಕ್ಕಿಗೆ ತನ್ನ ಸಂಸಾರದ ರಥವನ್ನು ನಡೆಸಿಕೊಂಡು ಸಾಗುತ್ತಿದ್ದರು. ತನ್ನ ಮನಸ್ಸು ಎಲ್ಲಿ ಕುದುರತ್ತೋ, ಎಲ್ಲಿ ನಾಲ್ಕು ದಿನ ತಳ ಊರಲು ಅನುಕೂಲಕರವಾದ ವಾತಾವರಣ ಇರುತ್ತೋ, ಅಂತ ನೀರು ನೆರಳು ಇರೋ ಜಾಗದಲ್ಲಿ ತನ್ನ ಸಂಸಾರ ಠಿಕಾಣಿ ಹೂಡುತ್ತಿತ್ತು. ಆ ಜಾಗದಲ್ಲಿ ಮೂರು ಕಲ್ಲಿಟ್ಟು ಒಲೆ ಮಾಡಿ ಸುತ್ತಮುತ್ತ ಇರುವ ಪುಳ್ಳೆ ಪುಸಕ ಆಯ್ದು ಒಲೆ ಹಚ್ಚಿ ಅವ್ವ ಹೊಟ್ಟೆಗೆ ಆಧಾರ ಮಾಡುತ್ತಿದ್ಲು.

ಅಪ್ಪ ಹಣೆಗೆ ವಿಭೂತಿ ಇಟ್ಟು ತಲೆಗೆ ಮುಂಡಾಸು ಸುತ್ತಿ ಬಿಳಿ ಅಂಗಿ ಬಿಳಿ ಪಂಚೆ ಯಾರಿಂದಲೋ ಕೇಳಿ ಪಡೆದ ಹಳೇ ಕೋಟು ತೊಟ್ಟು ಹೆಗಲಿಗೆ ಜೋಳಿಗೆ ಹಾಕಿ; ಕೈಯಲ್ಲಿ ತಂಬೂರಿಯೋ ಇಲ್ಲವೆ ಶೃತಿ ಪೆಟ್ಟಿಗೆಯೋ ಇಡ್ಕೊಂಡು ತನ್ನ ನಿತ್ಯದ ಕಾಯಕಕ್ಕೆ ಹೊರಡುತ್ತಿದ್ದರು. ಹೀಗೆ ಊರೂರು ಸುತ್ತುತ್ತ ಎಲ್ಲಿಯೂ ನೆಲೆ ಕಂಡುಕೊಳ್ಳದೆ ಜಂಗಮಾವಸ್ಥೆಯಲ್ಲಿಯೇ ತಾನು ಮತ್ತು ತನ್ನ ಸಂಸಾರ ಸಂಚರಿಸುತ್ತಿತ್ತು.

ಇಂತಿಪ್ಪ ನನ್ನ ಅಪ್ಪನಿಗೆ ಈ ಊರು ಹೇಗೆ ಹಿಡಿಸಿತೊ ತಿಳಿಯದು. ಊರಿನ ಜನ ಇವನು ಹಾಡುತ್ತಿದ್ದ ತರಾವರಿ ಲಾವಣಿಗಳು – ಕಥನ ಗೀತೆಗಳು, ನುಡಿಸುತ್ತಿದ್ದ ವಾದ್ಯಗಳು, ಹೇಳುತ್ತಿದ್ದ ಬಯಲಾಟದ ಡೈಲಾಗ್‌ಗಳು, ಹಾಕುತ್ತಿದ್ದ ವೇಷಭೂಷಣಗಳು, ಬಯಲಾಟಗಳಲ್ಲಿ ಬೆರಗಾಗುವಂತೆ ಅಭಿನಯಿಸುತ್ತಿದ್ದ ಕೋಡಂಗಿ ಪಾರ್ಟುಗಳಿಂದ ಆಕರ್ಷತರಾಗಿದ್ದರು. ಬಾಲಗ್ರಹ ಪೀಡಿತರಾಗಿ ಚಳಿಜ್ವರ ಬಂದು ರಚ್ಚೆಹಿಡಿದು ನರಳುತ್ತಿದ್ದ ಕಂದಮ್ಮಗಳಿಗೆ ತಾಯಿತ ಕಟ್ಟಿ, ಹಣೆ ಹೊಟ್ಟೆ ಭಾಗಕ್ಕೆ ಮಂತ್ರಿಸಿದ ವಿಭೂತಿ ಹಚ್ಚಿ ಈತ ಗುಣಪಡಿಸುತ್ತದ್ದ ರೀತಿ, ತನಗೆ ತಿಳಿದಿದ್ದ ಜೋತಿಷ್ಯ ಜ್ಞಾನದಿಂದ ಶುಭ ಅಶುಭ ಗಳಿಗೆಗಳನ್ನು ತಿಳಿಸಿಕೊಟ್ಟು ಒಳ್ಳೆ ಕೆಲಸ ಕಾರ್ಯಗಳಿಗೆ ಸಮಯ–ಘಳಿಗೆ

ನಿಗದಿಪಡಿಸುತ್ತಿದ್ದ ಕ್ರಮಗಳಿಂದ ಊರ ಜನ ಇವನನ್ನು ಹಚ್ಚಿಕೊಂಡುಬಿಟ್ಟಿರು. ಕವಡೆ ಬಿಟ್ಟು ಶಾಸ್ತ್ರ ಹೇಳಿ ತಪ್ಪಿಸಿಕೊಂಡ ದನಕರುಗಳು ಇಂತಹದೇ ದಿಕ್ಕಿನಲ್ಲಿ ಇವೆ ಹೋಗಿ ಹುಡುಕಿ ಅಂತ ಹೇಳಿ, ಸೋಜಿಗವೋ ಎಂಬಂತೆ ಆ ತಪ್ಪಿಸಿಕೊಂಡ ದನಕರುಗಳು ಸಿಕ್ಕು ಅಪ್ಪನ ಶಾಸ್ತ್ರ ನಿಜ ಆಗುತ್ತಿತ್ತು. ಕೈ ಕಾಲು ಉಳುಕಿಸಿಕೊಂಡ ರೈತಾಪಿ ಜನಗಳಿಗೆ ಮಂತ್ರ ಹಾಕಿ ಉಳುಕಿ ತೆಗೆದು ನೋವು ನಿವಾರಣೆ ಮಾಡುತ್ತಿದ್ದ ಅಪ್ಪ, ತನಗೆ ತಿಳಿದಿದ್ದ ತರಾವರಿ ಗಿಡಮೂಲಿಕೆಗಳಿಂದ ಔಷಧಿ ತಯಾರಿಸಿ ರೋಗ ರುಜಿನಗಳನ್ನು ಗುಣಪಡಿಸುತ್ತಿದ್ದರು. ಹೀಗೆ ಒಂದಾ ಎರಡಾ...? ತರಾವರಿ ಜ್ಞಾನ ಸಂಪಾದಿಸಿದ್ದ ಅಪ್ಪನ್ನ ಕಂಡರೆ ಊರ ಜನಕ್ಕೆ ಅಚ್ಚು ಮೆಚ್ಚಾಯಿತು.

ಈ ರೀತಿ ಬೆಳೆದ ಸಂಬಂಧವೇ ಅಪ್ಪನ ಅಲೆಮಾರಿ ಬದುಕಿಗೆ ವಿದಾಯ ಹಾಡಿ ದೊಡ್ಡಗೌಡರ ತೊಟ್ಟಿಹಟ್ಟಿ ಜಗುಲಿಯ ಮೇಲೆ ಅಪ್ಪನ ಕುಟುಂಬ ತಳವೂರಿತು. ಅಷ್ಟೊತ್ತಿಗಾಗಲೇ ನಮ್ಮಂತೆ ಆ ಊರು ಸೇರಿದ ಎರಡು ದಾಸರ ಕುಟುಂಬ ಸೇರಿ ಮೂರು ಸಂಸಾರಗಳು ಅಲ್ಲಿ ಆಶ್ರಯ ಪಡೆದವು.

ಆ ಮೂರು ಕುಟುಂಬಗಳು ಒಟ್ಟಾಗ ಬಯಲಾಟ ಪ್ರದರ್ಶಿಸಲು ಬೇಕಾದ ಒಂದು ತಂಡ ರಚನೆಯಾಯಿತು. ಊರೂರು ಸುತ್ತುತ್ತಾ ನೆಲೆ ಕಾಣದೆ ಅತಂತ್ರ ಸ್ಥಿತಿಯಲ್ಲಿದ್ದ ಸಂಸಾರಕ್ಕೆ ತಾತ್ಕಾಲಿಕ ನೆಲೆ ಸಿಕ್ಕಿದ್ದು ಒಂದು ರೀತಿಯ ನೆಮ್ಮದಿ ತಂದಿತು. ಅವ್ವ ಮತ್ತು ನಾವು ನಾಲ್ಕು ಮಕ್ಕಳ ಹೊಟ್ಟೆ ತುಂಬಿಸಲು ಅಪ್ಪ ಆ ಊರ ಸುತ್ತಲಿನ ಹತ್ತೆಂಟು ಹಳ್ಳಿಗಳಲ್ಲಿ ತನ್ನ ವಂಶಪಾರಂಪರ್ಯವಾಗಿ ಬಂದ ಭಿಕ್ಷಾ ವೃತ್ತಿಯನ್ನು ಅವಲಂಬಿಸಿದ್ದರು. ನಮ್ಮ ಜನ ಮಾಡುತ್ತಿದ್ದ ಈ ವೃತ್ತಿಗೆ ಗ್ರಾಮೀಣ ಭಾಗದ ಜನ ಗೌರವ ಕೊಡುತ್ತಿದ್ದರು. ಇವರು ಹೇಳುತ್ತಿದ್ದ ಹಾಡುಗಳು, ಕಥನ ಗೀತೆಗಳು, ತತ್ವಪದಗಳು ಭಾರತೀಯ ಸಂಸ್ಕೃತಿಯ ಪ್ರಮುಖ ಭಾಗಗಳೇ ಆಗಿದ್ದವು. ದಾಸರು ಈ ಸಂಸ್ಕೃತಿಯನ್ನು ಜನರ ನಡುವೆ ಹಂಚಲಿಕ್ಕೆ, ಪ್ರಚುರಪಡಿಸಲಿಕ್ಕೆ ಮೀಸಲಾದ ಜನಾಂಗವೇನೋ ಎಂಬಂತಿದ್ದರು. ಇವರು ಹೇಳುತ್ತಿದ್ದ ಕಥನ ಗೀತೆಗಳಲ್ಲಿ ಲಾವಣಿಗಳಲ್ಲಿ ರಾಮಾಯಣ, ಮಹಾಭಾರತ, ಭಾಗವತದಂತಹ ಮಹಾಕಾವ್ಯಗಳ ಪ್ರಸಂಗಗಳೂ ಜನಪದ ನಾಯಕರ ಜೀವನ ಚರಿತ್ರೆಗಳೂ ಹಾಸುಹೊಕ್ಕಾಗಿದ್ದವು. ಸಮಾಜದ ನೈತಿಕ ಪ್ರಜ್ಞೆ, ಸತ್ಯ ಧರ್ಮ ನ್ಯಾಯ ನೀತಿಗಳ ಪಾಠ ಈ ದಾಸರ ಭವದ ಭಿಕ್ಷಾಟನೆ ವೃತ್ತಿಯ ಮೂಲಕ ಬಹುಪಾಲು ಅನಕ್ಷರಸ್ಥರೇ. ತುಂಬಿದ್ದ ಗ್ರಾಮೀಣ ಭಾಗದ ಜನಸಮುದಾಯಕ್ಕೆ ಸಿಗುತ್ತಿತ್ತು. ಈ ಸಂಸ್ಕೃತಿಯ ಪರಿಚಯದ ಜೊತೆಗೆ ಮನೋವಿಕಾಸ ಮತ್ತು ಮನೋರಂಜನೆಯ ಸವಿಯನ್ನೂ ಉಣಬಡಿಸುತ್ತಿದ್ದರು.

ಅಪ್ಪ ಮತ್ತಿತರರು ಸೇರಿ ರಚಿಸಿಕೊಂಡ ನಾಟಕದ ತಂಡ ಊರೂರು ಸುತ್ತಿ ಭಕ್ತಪ್ರಹ್ಲಾದ, ಶನಿಮಾಹಾತ್ಮೆ, ಗಂಗೆ–ಗೌರಿ, ಕಂಸವಧೆ ಇತ್ಯಾದಿ ನಾಟಕಗಳನ್ನು ಆಡುತ್ತಿದ್ದರು. ಊರ ಮುಖ್ಯ ಬೀದಿಯಲ್ಲಿ ರಂಗಮಂದಿರ ನಿರ್ಮಾಣ ಮಾಡಿ, ಅವರಿಂದಲೇ ಚಂದದ ಸೀರೆಗಳನ್ನು ಕೇಳಿ ಪಡೆದು ರಾಜ, ರಾಣಿ ಪಾತ್ರಧಾರಿಗಳಾಗಿ ಸಿಂಗಾರ ಮಾಡಿಕೊಂಡು ಜನರನ್ನು ರಂಜಿಸುತ್ತಿದ್ದರು. ಯಾವುದೇ ನಾಟಕವಿರಲಿ ನನ್ನಪ್ಪ ಇಡೀ ರಾತ್ರಿ ರಂಗಮಂಚದ ಮೇಲೆ ಖಾಯಂ ಆಗಿ ಇರುತ್ತಿದ್ದ. ಆತ ನಿರ್ವಹಿಸುತ್ತಿದ್ದುದು ಕೋಡಂಗಿ (ವಿದೂಷಕ) ಪಾತ್ರವಾಗಿತ್ತು ರಾಜ, ರಾಣಿ, ಮಂತ್ರಿ,

ಸೇನಾಧಿಪತಿ, ದೈತ್ಯ ಈ ಯಾವುದೇ ಪಾತ್ರಗಳ ನಡುವೆ ಈ ಕೋಡಂಗಿ ಪಾತ್ರ ಇರಲೇಬೇಕಿತ್ತು. ನವಿರಾದ ಹಾಸ್ಯಭರಿತ ಸಂಭಾಷಣೆ, ಅಂಗಚೇಷ್ಟೆಗಳ ಮೂಲಕ ರಾತ್ರಿಯಿಡೀ ಪ್ರೇಕ್ಷಕರನ್ನು ರಂಜಿಸಿ, ನಕ್ಕು ನಲಿಸುವ ವಿಶಿಷ್ಟ ವೇಷ ಇದಾಗಿರುತ್ತಿತ್ತು. ಸಂಭಾಷಣೆ, ಕಂದಪದ್ಯಗಳು/ಹಾಡುಗಳು, ಸಂದರ್ಭಗಳನ್ನು ಮರೆತರವರಿಗೆ ತನ್ನ ಮುರುಗು ಭಾಷೆಯಲ್ಲಿ ಹೇಳಿಕೊಡುತ್ತಾ, ಎಲ್ಲಿಯೂ ನಾಟಕದ ಲಯ ತಪ್ಪದೆ ಪ್ರೇಕ್ಷಕರಿಗೆ ಬೇಸರವಾಗದ ರೀತಿಯಲ್ಲಿ ಅದ್ಭುತವಾಗಿ ನಿರ್ವಹಿಸುತ್ತಿದ್ದ.

ನನ್ನ ಅಪ್ಪನಿಗೆ ಅವರ ಅಪ್ಪ ಅವ್ವ ಇಟ್ಟ ಹೆಸರು ಸಿಂಗಯ್ಯ ಅಂತ. ಆದರೆ ಬಯಲಾಟಗಳಲ್ಲಿ ಇವರು ಅಭಿನಯಿಸುತ್ತಿದ್ದ ಕೋಡಂಗಿ ಪಾತ್ರದಿಂದಾಗಿ ಇವರನ್ನು 'ಕೋಡಂಗಿ' ಎಂದೇ ಜನ ಗುರುತಿಸಿತೊಡಗಿದರು. ಕಾಲಾಂತರದಲ್ಲಿ ರೆವಿನ್ಯೂ ರೆಕಾರ್ಡ್‌ಗಳಲ್ಲಿ ಕೂಡ 'ಕೋಡಂಗಯ್ಯ' ಎಂದೇ ಅವರ ಹೆಸರು ದಾಖಲಾಗಿ ಜನಜನಿತವಾಯಿತು. ಸಿಂಗಯ್ಯ ಎಂಬ ಮೂಲ ಹೆಸರು ನೇಪಥ್ಯಕ್ಕೆ ಸರಿಯಿತು.

ನನ್ನಪ್ಪನ ಈ ಬಯಲಾಟ ಮತ್ತು ಧಾರ್ಮಿಕ ಭಿಕ್ಷಾಟನೆ, ಹಾಗೆಯೇ ಅವ್ವನ ಕೂಲಿ ನಾಲಿಯಿಂದ ನಮ್ಮ ನಾಲ್ಕೂಜನ ಮಕ್ಕಳ ಹೊಟ್ಟೆ ತುಂಬತ್ತಿತ್ತು. ಅವ್ವನಿಗೆ ಕುಲಕಸುಬು ಬರುತ್ತಿರಲಿಲ್ಲ. ಅಪ್ಪನಿಗೆ ವ್ಯವಸಾಯ - ಕೂಲಿನಾಲಿಯ ಗಂಧಗಾಳಿ ತಿಳಿದಿರಲಿಲ್ಲ. ಅಪ್ಪನ ಪ್ರತಿ ದಿನದ ಕಾಯಕ, ಬೆಳಗ್ಗೆ ಎದ್ದು ಮುಖ ಕೈಕಾಲು ತೊಳೆದು ವಿಭೂತಿ ಪಟ್ಟೆ ಧರಿಸಿ ತಲೆಗೆ ಬಿಳಿಯ ಮುಂಡಾಸು ಸುತ್ತಿ ಕಂಕುಳಿಗೆ ಜೋಳಿಗೆ ನೇತು ಹಾಕಿಕೊಂಡು ಮತ್ತೊಂದು ಕೈಯಲ್ಲಿ ಏಕತಾರಿ ಹಿಡಿದು ಹೊರಡುತ್ತಿದ್ದದ್ದು. ಸಾಮಾನ್ಯವಾಗಿ ಭಿಕ್ಷೆಗೆ ಹೊರಡುವಾಗ ಇಬ್ಬರು-ಮೂವರು ಜೊತೆಯಾಗಿ ಹೋಗುತ್ತಿದ್ದುದ್ದು ಪದ್ಧತಿ. ಕೆಲವೊಮ್ಮೆ ಒಬ್ಬರೆ ಹೋಗುತ್ತಿದ್ದರು.

ನಮ್ಮ ಪಾಲಿಗೆ ಅಪ್ಪನ ಜೋಳಿಗೆ (ಹಸಿಬೆ ಚೀಲ) ಕಾಮಧೇನು-ಕಲ್ಪವೃಕ್ಷವಾಗಿತ್ತು. ಆ ಜೋಳಿಗೆಯಲ್ಲಿ ಮೂರು ಭಾಗಗಳಿದ್ದು ಒಂದು ಭಾಗದಲ್ಲಿ ಬತ್ತ, ರಾಗಿ, ಜೋಳ ಹಾಕಿಸಿಕೊಂಡರೆ; ಮತ್ತೊಂದು ಭಾಗದಲ್ಲಿ ರಾಗಿ ಹಿಟ್ಟು, ಅಕ್ಕಿ, ರೊಟ್ಟಿ ಹಾಕಿಸಿಕೊಳ್ಳುತ್ತಿದ್ದರು. ಇನ್ನೊಂದರಲ್ಲಿ ಕಾಳು-ಕಡ್ಡಿ, ಮೆಣಸಿನಕಾಯಿ ಇತ್ಯಾದಿ ಸಾಂಬಾರು ಪದಾರ್ಥಗಳು ಇರುತ್ತಿದ್ದವು. ನಮ್ಮ ಹಸಿವನ್ನು ನೀಗಿಸುವ ಅಕ್ಷಯ ಪಾತ್ರೆ ಇದಾಗಿತ್ತು. ಅಪ್ಪ ಕಾಯಕ ಮುಗಿಸಿ ಬಂದ ತಕ್ಷಣ ಅವ್ವ ಲಗುಬಗೆಯಿಂದ ಆ ಅಕ್ಷಯ ಪಾತ್ರೆಯಂತಿದ್ದ ಜೋಳಿಗೆ ಪರಿಶೀಲಿಸಿ ಅದರಲ್ಲಿ ತುಂಬಿದ್ದ ದವಸಧಾನ್ಯಗಳನ್ನು ಬೇರ್ಪಡಿಸುತ್ತಿದ್ದರು. ಮೊದಲಿಗೆ ರಾಗಿಹಿಟ್ಟು ಇದ್ದ ಚೀಲ ತೆಗೆದು ಸಾಂಬಾರಿಗೆ ಬೇಯಲಿಕ್ಕೆ ಹಾಕಿ ಮುದ್ದೆ, ಅನ್ನ, ಸಾರು ಮಾಡುತ್ತಿದ್ದರು. ಈ ಎಲ್ಲಾ ತಯಾರಿ ನಡೆಸಿ ಅಡಿಗೆ ರೆಡಿಯಾಗೊಷ್ಟರಲ್ಲಿ ನಾವೆಲ್ಲ ಮಲಗಿ ಒಂದು ನಿದ್ರೆ ಹೊಡೆದಿರುತ್ತಿದ್ವು, ಅವ್ವ ಎಲ್ಲರನ್ನು ಎಬ್ಬಿಸಿ ಊಟ ಮಾಡಿಸಿ, ತಾವು ಉಳಿದು ಬಳದದ್ದನ್ನು ತಿಂದು ಮಲಗುತ್ತಿದ್ದರು. ಇದು ಪ್ರತೀ ದಿನದ ದಿನಚರಿಯಾಗಿರುತ್ತಿತ್ತು. ಅಪ್ಪ ಒಮ್ಮೊಮ್ಮೆ ಭಿಕ್ಷೆ ಮುಗಿಸಿ ವಾಪಾಸ್ ಬರುವಾಗ ಯಾವುದಾದರೂ ಪ್ರಾಣಿ, ಪಕ್ಷಿಗಳನ್ನು ಬೇಟೆಯಾಡಿ ತರುತ್ತಿದ್ದುದುಂಟು. ಈ ಮಿಕಗಳನ್ನು ಹಿಡಿಯಲು ಬೇಕಾದ ಬಲೆ ಉರುಳು ಇತ್ಯಾದಿಗಳನ್ನು ಆ ಜೋಳಿಗೆ ಜೊತೆಯಲ್ಲಿಯೇ ಇಟ್ಟುಕೊಳ್ಳುತ್ತಿದ್ದರು.

ಹೀಗೆ ಆ ಊರು ಮತ್ತು ಊರ ಜನರ ಪ್ರೀತಿ ನಮ್ಮ ಅಲೆಮಾರಿ ಬದುಕಿಗೆ

ನೆಲೆಯಾಗಿ, ಊರವರ ಜಗಲಿಯ ನೆರಕೆಯೊಳಗಿನ ಅರಮನೆ ನಮಗೆ ಜನ್ಮ ನೀಡಿದ ಜನ್ಮಸ್ಥಾನವು ಆಯಿತು. ಆ ಜಗಲಿ ಮೇಲೆ ಆರು ತಿಂಗಳು ಈ ಜಗಲಿ ಮೇಲೆ ಆರು ತಿಂಗಳು ಕಾಲ ದೂಡುತ್ತಿದ್ದ ನಮ್ಮ ಸಂಸಾರಗಳಿಗೆ ಕೊನೆಗೂ ಒಂದು ನಿಶ್ಚಿತ ನೆಲೆ ಸಿಕ್ಕುವ ದಿನ ಹತ್ತಿರವಾಯಿತು. ಅದೇನನಿಸಿತೋ ಆ ಊರ ಪಟೇಲರು ಮತ್ತು ಸಹೃದಯ ಛೇರ್ಮನ್‌ರಾಗಿದ್ದ ಪುಟ್ಟಮಲ್ಲಪ್ಪನವರು ಇನ್ನು "ನಿಮ್ಮ ಸಂಸಾರಗಳು ದೊಡ್ಡವಾಗುತ್ತಿವೆ, ಮೈಸೂರು ಹುಣಸೂರು ಮುಖ್ಯರಸ್ತೆಯಲ್ಲಿರುವ ಗೋಮಾಳದಲ್ಲಿ ಗುಡಿಸಲು ಹಾಕಿಕೊಳ್ಳಿ" ಎಂದು ಸೂಚಿಸಿದರು.

ಬಲಗಡೆ ಅರ್ಧ ಕಿ.ಮಿ. ಸವರ್ಣೀಯರು ಇದ್ದ ಊರು, ಎಡಗಡೆ ಹರಿಜನರಿದ್ದ ಇನ್ನೊಂದು ಊರು. ಈ ಎರಡರ ನಡುವೆ ನಮ್ಮ ದಾಸರ ಹೊಸ ಗುಡಿಸಲುಗಳು ತಲೆ ಎತ್ತಿದೊ. ಗುಡಿಸಲು ಕಟ್ಟಿಕೊಳ್ಳಲು ಬೇಕಾದ ಮರಮುಟ್ಟು, ತೆಂಗಿನ ಸೋಗೆ, ಹುಲ್ಲು ಇತ್ಯಾದಿಗಳನ್ನು ಆ ಊರ ಜನರೇ ನೀಡಿ ಉಪಕರಿಸಿದರು. ಸವರ್ಣೀಯರು ಮತ್ತು ಹರಿಜನರ ಈ ಎರಡೂ ಕೇರಿಗಳು ದಾಸರ ಗುಡಿಸಲುಗಳಿಗೆ ರಕ್ಷಣಾತ್ಮಕ ಗೋಡೆಗಳಂತಿದ್ದು ಈ ಕಲಾವಿದ ಸಮುದಾಯ ಅಲ್ಲಿ ನೆಲೆ ನಿಂತಿತು.

ನಮ್ಮ ದೊಂಬಿದಾಸರು ಆಡುತ್ತ ಬಯಲಾಟಗಳಿಗೆ ಮಾರುಹೋಗಿದ್ದ ಹಳ್ಳಿಗಾಡಿನ ಜನ ತಾವೂ ಕೂಡ ಬಯಲಾಟಗಳನ್ನು ಕಲಿಯಲು ಪ್ರಾರಂಭಿಸಿದರು. ಹರಿಜನರ ಕೇರಿಯಲ್ಲೊಬ್ಬರು ನಾಟಕದ ಪಾಠ (ನಿರ್ದೇಶನ) ಶುರುಮಾಡಿದರೆ, ಸವರ್ಣೀಯರ ಕೇರಿಯಲ್ಲಿ ಮತ್ತೊಬ್ಬರು ಪಾಠ ಹೇಳುತ್ತಾ, ಎಲ್ಲಾ ಸಮುದಾಯಗಳಿಗೆ ಪಾಠ ಹೇಳುವ ಗುರುಗಳಾಗಿ ಸಾಮರಸ್ಯದ ಬದುಕು ನಡೆಸಲು ಈ ದಾಸ ಸಮೂಹ ನೆರವಾಯಿತು.

* * *

ಅನೇಕರು ರಾಜಕಾರಣಕ್ಕೆ ಒಳ್ಳೆಯ ಭವಿಷ್ಯದೊಂದಿಗೆ ಪ್ರವೇಶಮಾಡುತ್ತಾರೆ. ಆದರೆ ಭಯಾನಕ ಹಿನ್ನೆಲೆಯೊಂದಿಗೆ ಹೊರಬರುತ್ತಾರೆ. - ಆಸ್ಕರ್ ವೈಲ್ಡ್

ಹಿಮಾಲಯದ ಮೇಲಿನ ಸಾಮೂಹಿಕ ಅತ್ಯಾಚಾರದ ಭೀಕರ ಪರಿಣಾಮ

– ವಂದನಾ ಶಿವ

೨೦೧೩ನೇ ವರ್ಷಾ ಋತುವಿನ ಆರಂಭದಲ್ಲಿ ಉತ್ತರಾಖಂಡದಲ್ಲಿ ಪ್ರಾಕೃತಿಕ ವಿಪತ್ತಾಯಿತು. ಈ ವಿಪತ್ತಿಗೆ ಎರಡು ಕಾರಣಗಳಿವೆ. ಮೊದಲನೇಯದು, ಹಿಮಾಲಯದ ಪರ್ವತ ಶ್ರೇಣಿಯನ್ನು ಕಾಪಿಡುವಂಥ ಪರಿಸರದ ಸೂಕ್ಮ ರೀತಿನೀತಿಗಳ ಅಜ್ಞಾನ. ಎರಡನೇಯದು ಅಲ್ಲಿಯ ಸಮೃದ್ಧ ಪ್ರಾಕೃತಿಕ ಸಂಪತ್ತನ್ನು ದೋಚಿ ಲಾಭಮಾಡಿಕೊಳ್ಳುವ ದುರಾಶೆ. ಉತ್ತರಾಖಂಡವು ಭಾರತದ ಜೀವನಾಡಿಯಾಗಿರುವ ಗಂಗಾ ಮತ್ತು ಅದರ ಉಪನದಿಗಳ ಬೀಡು. ಹಿಮಾಲಯ ಪರ್ವತ ಶ್ರೇಣಿ ಸಾವಿರಾರು ವರ್ಷಗಳಿಂದ ಸ್ಥಳೀಯ ಜನಪದವನ್ನು ಮತ್ತು ಯಾತ್ರಾರ್ಥಿಗಳನ್ನು ಬಾಳಿಸಿಕೊಂಡಿಬಂದಿದೆ. ಅವರು ಹಿಮಾಲಯ ಪರ್ವತಗಳನ್ನು ಭಕ್ತಿ ಭಾವದಿಂದಲೂ ಗೌರವ ಭಾವನೆಯಿಂದಲೂ ನೋಡಿಕೊಂಡಿದ್ದಾರೆ. ಇಂದು ಪರಿಸರತ್ಮಾಕವಾಗಿ ಸೂಕ್ಷ್ಮವಾಗಿರುವ ಹಿಮಾಲಯ ಮತ್ತು ನಮ್ಮ ಪವಿತ್ರ ನದಿಗಳ ಮೇಲೆ ಅವ್ಯಾಹತವಾದ ಅತ್ಯಾಚಾರ ನಡೆದಿದೆ. ಪ್ರಚಲಿತ ಅಂದಾಜಿನ ಪ್ರಕಾರ ಸುಮಾರು ೫೦೦೦ ಜನರ ಸಾವಿಗೆ ಮತ್ತು ಒಂದುಲಕ್ಷಕ್ಕಿಂತಲೂ ಹೆಚ್ಚು ಜನರ ಕಣ್ಮರೆಗೆ ಕಾರಣವಾದ ವಿಪತ್ತು, ಅತ್ಯಾಚಾರವನ್ನು ನಿಲ್ಲಿಸಬೇಕೆಂಬುದಕ್ಕೆ ಕರೆ ಕೊಟ್ಟಿದ್ದೆ. ತಮ್ಮ ಅದೂರದರ್ಶತ್ವದ ಕಾರಣದಿಂದಾಗಿ ಅನಾಹುತಕ್ಕೆ ಕಾರಣರಾದ ರಾಜಕಾರಣಿಗಳು, ನೀತಿ ನಿರ್ಧಾರಕರು ಮತ್ತು ಸ್ಥಳೀಯ ಸಂಸ್ಥೆಗಳು ಏನೆಲ್ಲ ದುರಂತ ಸಂಭವಿಸಿದೆಯೋ ಅದರ ಜವಾಬ್ದಾರಿಯನ್ನು ವಹಿಸಕೊಳ್ಳಬೇಕು. 'ಮಾಡಿದ್ದುಣ್ಣೊ ಮಹರಾಯಾ' ಎಂಬ ಮಾತನ್ನು ನಾವು ನೋಡುತ್ತಿರುವ ಪರಿಸರಾತ್ಮಕ ದುರಂತಕ್ಕೂ ಅನ್ವಯಿಸಬೇಕು.

ಉತ್ತರಾಖಂಡದ ಮುಖ್ಯ ಮಂತ್ರಿಯವರು ಒಟ್ಟು ನಷ್ಟ ಸುಮಾರು ಮೂರು ಸಾವಿರ ಕೋಟಿ ಆಗಬಹುದು ಮತ್ತು ಮೂರು ವರ್ಷಕಾಲದಲ್ಲಿ ಆದ ಅಭಿವೃದ್ಧಿಯನ್ನು ವಿನಾಶಗೊಳಿಸಿದೆ ಎಂದು ಹೇಳಿದ್ದಾರೆ, ಅವರ ಈ ಮಾತಿನಿಂದ ಸ್ಪಷ್ಟವಾಗಿ ಗೋಚರಿಸುವುದೇನೆಂದರೆ ಅವರು ಈ ವಿನಾಶವನ್ನು ಕೇವಲ ಕಾಂಕ್ರೀಟ್ ಮತ್ತು ಕಟ್ಟಡಗಳ ದೃಷ್ಟಿಯಿಂದ ಮಾತ್ರ ನೋಡುತ್ತಿದ್ದಾರೆ. ಪ್ರವಾಹದಿಂದಾಗಿ ಕೊಚ್ಚಿಹೋದ ಅಪಾರ ಪ್ರಮಾಣದ ಮಣ್ಣು ಅವರಿಗೆ ಕಂಡು ಬಂದಿಲ್ಲ. ಭೂಮಿಯ ಮೇಲಿನ ರಕ್ಷಣಾತ್ಮಕ ಒಂದು ಇಂಚು ಅಳತೆಯ ಮಣ್ಣಿನ ಪದರ ನಿರ್ಮಾಣವಾಗಲು ೫೦೦ ವರ್ಷಗಳು ಬೇಕಾಗುತ್ತದೆ ಎಂಬ ಸಂಗತಿಯನ್ನು ಅವರು ಗಮನಸಿಲ್ಲ. ಅಲ್ಲದೆ ಹಿಮಾಲಯ ಪರ್ವತ ಶ್ರೇಣಿಯ ತಪ್ಪಲಲ್ಲಿ ಹರಿಯುವ ನದಿಗಳು ಸೃಷ್ಟಿಸಿರುವ ಪ್ರಾಕೃತಿಕ ವೈಭವವನ್ನು ಮತ್ತು ಅಲ್ಲಿಯ ಕಣಿವೆ ಪ್ರದೇಶದಲ್ಲಿ ಸ್ಥಳೀಯ ಜನರು

ನಿರ್ಮಿಸಿದ ವಸತಿಗಳಿಗಾಗಿ ಸಾವಿರಾರು ವರ್ಷ ಬೇಕಾಯಿತು ಎಂಬುದು ಸಹ ಅವರಿಗೆ ಗೋಚರವಾಗಿಲ್ಲ. ಅವರ ಜೀವನ ಹಾಳಾದುದೂ ಅವರಿಗೆ ಕಂಡಿಲ್ಲ. ಮೂರು ವರ್ಷಗಳ ಅವಧಿಯಲ್ಲಿ ಅಲ್ಲಿಯ ಜನರ ಬದುಕನ್ನು ಕಟ್ಟಿ ಕೊಡಲು ಸಾಧ್ಯವಿಲ್ಲವೆಂಬುದನ್ನು ಅವರು ಅರಿಯದೆ ಹೋಗಿದ್ದಾರೆ.

ಈ ಪ್ರದೇಶದಲ್ಲಿ ಗಂಗಾನದಿಯ ದಡದ ಮೇಲೆ ಸುಮಾರು ೫೦೦ ಆಣೆಕಟ್ಟುಗ್ಗಳನ್ನು ಕಟ್ಟುವ ಯೋಜನೆ ಹಾಕಿಕೊಳ್ಳಲಾಗಿದೆ, 'ಗಂಗಾಸೇವಾ ಅಭಿಯಾನಂ' ಸಂಸ್ಥೆಯ ಸ್ವಾಮಿ ಜ್ಞಾನ ಸ್ವರೂಪ ಸಾನಂದ್‌ರವರು ಗಂಗೆಯನ್ನು ಉಳಿಸಲು ಪದೇ ಪದೇ ಉಪವಾಸ ಸತ್ಯಾಗ್ರಹ ಮಾಡಿದ್ದಾರೆ. ಅವರ ಪ್ರಯತ್ನಗಳಿಂದಾಗಿ ಕೇಂದ್ರ ಸರ್ಕಾರವು ಉತ್ತರಾಕಾಶಿಯಿಂದ ಗೋಮುಖದವರೆಗಿನ ಪ್ರದೇಶ ಪರಿಸರಾತ್ಮಕ ಸೂಕ್ಷ್ಮ ಪ್ರದೇಶವೆಂದು ಘೋಷಣೆ ಮಾಡಿತು. ಆದರೆ ಈಗಿನ ಮುಖ್ಯಮಂತ್ರಿ ವಿಜಯ ಬಹುಗುಣ ಅಭಿವೃದ್ಧಿಯ ಹೆಸರಿನಲ್ಲಿ ಆ ಘೋಷಣೆ ನಿರರ್ಥಕವಾಗುವಂತೆ ಮಾಡುತ್ತಿದ್ದಾರೆ. ೨೦೧೩ನೇ ಇಸವಿಯ ದುರಂತ ಹಿಮಾಲಯ ಪರ್ವತ ಶ್ರೇಣಿ ಪರಿಸರತ್ಮಾಕವಾಗಿ ಸೂಕ್ಷ್ಮ ಪ್ರದೇಶವೆಂಬ ಸಂಗತಿ ಅವರಿಗೆ ಮನವರಿಕೆಯಾಗುವುದೆಂದು ನಾನು ಆಶಿಸುತ್ತೇನೆ. ಆಣೆಕಟ್ಟುಗಳನ್ನು ಕಟ್ಟಲು ಮತ್ತು ಸುರಂಗಗಳನ್ನು ನಿರ್ಮಾಣ ಮಾಡಲು ಮನಸೋ ಇಚ್ಛೆ ಡೈನಮೈಟ್ ನಿಂದ ಆಸ್ಫೋಟಿಸಿದರಿಂದ ಸಾವಿರಾರು ಭೂಕುಸಿತಗಳು ಸಂಭವಿಸಿವೆ. ವರ್ಷಾಋತು ಪ್ರಾರಂಭವಾಗುತ್ತಲೇ ಈ ಭೂ ಕುಸಿತಗಳು ನದಿಯ ಪಾತಳಿಯನ್ನು ಕಲ್ಲುಮಣ್ಣಿನಿಂದ ತುಂಬಿಬೀಡುತ್ತವೆ. ಹಾಗಾಗಿ ನೀರು ಸಲಿಸಾಗಿ ಹರಿಯಲು ಸಾಧ್ಯವಾಗುವುದಿಲ್ಲ.

ಮಾಧ್ಯಮದಲ್ಲಿ ಆಗಲಿ ಸರ್ಕಾರಿ ವರದಿಗಳಲ್ಲಿ ಆಗಲಿ ಅದೃಶ್ಯವಾಗಿರುವ ಸ್ಥಳೀಯ ಜನ ಸಮುದಾಯಗಳು ಆ ಕಳೆದು ಹೋದ ಅವರ ಬಂಧುಗಳ ಜೀವವನ್ನಾಗಲಿ ಅಥವಾ ಕೊಚ್ಚಿ ಹೋದ ಅವರ ಜಮೀನು ಮತ್ತು ಮನೆಗಳನ್ನು ಎಂದಿಗೂ ಹಿಂಪಡೆಯಲಾರರು, ಆದರೆ ಯಾರು ಅಲ್ಲಿಯ ಪ್ರಕೃತಿಯನ್ನು ಹಾಳು ಮಾಡಿದ್ದಾರೊ ನಿರ್ಮಾಣ ಕಂಪನಿಗಳಾದ ಜೆ.ಪಿ, ಜಿ.ವಿ.ಕೆ, ಲ್ಯಾಂಕೊ, ಎಲ್. ಎನ್.ಟಿ. ಮನಸ್ಸೋ ಇಚ್ಛೆ ಆಸ್ಫೋಟಿಸಿ ಆಣೆಕಟ್ಟುಗಳನ್ನು ಕಟ್ಟುತ್ತಿರುವ ಇವು ಏನನ್ನೂ ಕಳೆದುಕೊಳ್ಳುವುದಿಲ್ಲ. ತೆರಿಗೆದಾರರಾದ ನಮ್ಮ ಸಮ್ಮತಿ ಮತ್ತು ಒಪ್ಪಿಗೆಯಿಲ್ಲದೆ ನಮ್ಮ ತೆರಿಗೆ ಹಣದಿಂದ ಆ ಕಂಪನಿಗಳನ್ನು ಸರ್ಕಾರ ಪಾರು ಮಾಡುತ್ತದೆ. ಪರಿಸರವನ್ನು ಹಾಳುಗೆಡುವುದರ ಮೂಲಕ ಯಾವ ಜನ ಕಷ್ಟ ನಷ್ಟ ಅನುಭವಿಸುತ್ತಾರೋ ಅಂಥ ಜನರನ್ನು ಯೋಜನೆ ಕೈಗೊಳ್ಳುವ ಮೊದಲು ವಿಶ್ವಾಸಕ್ಕೆ ತೆಗೆದುಕೊಳಬೇಕು ಹವಾಮಾನ ಬದಲಾವಣೆ ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರದ ಬಗ್ಗೆ ಸಂಶೋಧನೆ ನಡೆಸುತ್ತಿರುವ ನವಧಾನ್ಯಸಂಸ್ಥೆ ಅಕಾಲಿಕ ಮಳೆ ಹಿಮಕರಗುವಿಕೆಯಂಥ ಸಮಸ್ಯೆಗಳ ಬಗ್ಗೆ ಮುಂಚಿತವಾಗಿ ಎಚ್ಚರಿಕೆಯನ್ನು ನೀಡಿತ್ತು. ಆದರೆ ಸರ್ಕಾರ ಆ ಎಚ್ಚರಿಕೆಯನ್ನು ಸ್ವೀಕರಿಸುವ ಮನೋಭೂಮಿಕೆಯಲ್ಲಿ ಇರಲಿಲ್ಲ. ಕೋಪನ್‌ಹೇಗನ್‌ನಲ್ಲಿ ಹವಾಮಾನ ಸಂಬಂಧಿ ನಡೆದ ಸಮ್ಮೇಳನದಲ್ಲಿ ಕೂಡ ಸರ್ಕಾರ ಈ ಎಚ್ಚರಿಕೆಯನ್ನು ನಿರಾಕರಿಸಿತು.

ಸಾಮಾನ್ಯವಾಗಿ ವರ್ಷಾಋತುವಿನ ನಂತರ ನೆರೆ ಬರುತ್ತದೆ. ಈ ವರ್ಷ ಮಳೆ ಮುಂಚಿತವಾಗಿ ಬಂದಿತು. ಅಲ್ಲದೇ ಸಾಮಾನ್ಯ ಪ್ರಮಾಣಕ್ಕಿಂತಲೂ ಹೆಚ್ಚಾಗಿತ್ತು.

ಈ ವೈಪರಿತ್ಯಕ್ಕೆ ಕಾರಣ ಹವಾಮಾನದಲ್ಲಿಯ ಅಸ್ಥಿರತೆ.

ಈ ಮಧ್ಯೆ ಅಭಿವೃದ್ಧಿಯ ಕಾರಣದಿಂದ ಉಂಟಾದ ಪರಿಸರತ್ಮಾಕ ಹಾನಿ ಅತೀವೃಷ್ಟಿಯಿಂದ ಉಂಟಾಗುವ ಪರಿಸರ ವೈಪರೀತ್ವವನ್ನು ತಡೆಯುವ ಪರ್ವತ ಶ್ರೇಣಿಯ ಶಕ್ತಿಯನ್ನು ಕುಂಠಿತಗೊಳಿಸಿತು.

ಎಂಟನೇ ಶತಮಾನದ ಕೇದಾರನಾಥ ದೇವಸ್ಥಾನವು ಮಂದಾಕಿನಿ ನದಿಯ ಉಗಮ ಸ್ಥಾನದಲ್ಲಿ ಸ್ಥಿತವಾಗಿದೆ. ದೇವಸ್ಥಾನದ ಬಳಿ ಇರುವ ಕೇದಾರ ಡೋಮ್ ಹಿಮರಾಶಿಯನ್ನು ಒಡೆದು ಹಾಕಿದ್ದಕ್ಕಾಗಿ ಚಾರ್ ಬರಿ ಸರೋವರ ಒಡೆದು ಹೋಯಿತು. ಇವೆಲ್ಲವೂ ಹವಮಾನದ ದುರಂತಗಳು ಕೋಪನ್‌ಹೇಗನ್ ಹವಾಮಾನ ಸಮ್ಮೇಳನಕ್ಕಿಂತ ಮುಂಚೆ ನಮ್ಮ ಹಿಮರಾಶಿಗಳ ಮೇಲೆ ಯಾವ ಪರಿಣಾಮವೂ ಉಂಟಾಗಿಲ್ಲವೆಂಬ ವರದಿಯನ್ನು ಸರ್ಕಾರ ಬಿಡುಗಡೆಮಾಡಿತು. ಕೇದಾರನಾಥ ದುರಂತ ಸರ್ಕಾರದ ಈ ನಿರಾಕರಣೆ ಎಷ್ಟೊಂದು ಹಾನಿಕರವಾಯಿತೆಂಬುದು ಗೊತ್ತಾಗುತ್ತದೆ.

ದುರಂತಕ್ಕೆ ಮತ್ತೊಂದು ಕಾರಣ ಪ್ರವಾಸೋದ್ಯಮ. ಶಿಥಿಲವಾಗಿರುವ ನದಿಗಳ ದಂಡೆಯ ಮೇಲೆ ಅಪಾರ ಪ್ರಮಾಣದಲ್ಲಿ ಕಟ್ಟಡಗಳ ನಿರ್ಮಾಣವಾದವು. ನೆರೆ ಬಂದ ಕೂಡಲೆ ನಷ್ಟ ಉಂಟಾಗುತ್ತದೆ. ನನ್ನ ಬಾಲ್ಯದ ಕಾಲದಲ್ಲಿ ಹಿರಿಯರು ನಡೆದುಕೊಂಡೆ ಯಾತ್ರೆಯನ್ನು ಮಾಡುತ್ತಿದ್ದರು ರಸ್ತೆಗಳ ಜಾಲದಲ್ಲಿ ಏಕಮುಖ ಸಂಚಾರವಿತ್ತು. ಇಂದು ಪರ್ವತ ಶ್ರೇಣಿಯಲ್ಲಿ ಚತುಶ್ಪಥ ನಿರ್ಮಿಸುವ ಪ್ರಯತ್ನ ನಡೆದಿದೆ. ಹೆದ್ದಾರಿಗಳೆಂದರೆ ಭೂಕುಸಿತ. ಏಕೆಂದರೆ ಪರ್ವತದ ಇಳಿಜಾರನ್ನು ಸ್ಫೋಟಿಸಲಾಗುತ್ತದೆ. ಆಗ ಕಲ್ಲು ಮಣ್ಣು ಇಳಿಜಾರಿಗೆ ಬಂದು ಬೀಳುತ್ತದೆ.

೧೯೮೧ ರ ದಶಕದಲ್ಲಿ ನಡೆದ ಚಿಪ್ಕೋ ಚಳುವಳಿಯ ಕಾರಣದಿಂದಾಗಿ ಗಡವಾಲ್ ಹಿಮಾಲಯ ಶ್ರೇಣಿಯಲ್ಲಿ ಒಂದು ಸಾವಿರ ಕಿಲೋಮೀಟರ್ ಎತ್ತರದವರೆಗೆ ಮರ ಕಡಿಯುವುದನ್ನು ನಿಷೇಧಿಸಲಾಗಿತ್ತು. ಸೂಕ್ಷ್ಮವಾಗಿರುವ ಹಿಮಾಲಯ ಪ್ರದೇಶದಲ್ಲಿ ಕಾಡನ್ನು ಪರಿಸರದ ರಕ್ಷಣೆಗಾಗಿ, ಉಳಿಸಬೇಕೆ ಹೊರತು ವಾಣಿಜ್ಯ ವ್ಯವಹಾರಕ್ಕಾಗಿ ಅಲ್ಲ ಎಂಬುದು ಸರ್ಕಾರದ ನೀತಿ ಇಂದು ಹೇಳುತ್ತದೆ

೧೯೮೩ ರಲ್ಲಿ ಧೂನ್ ಕಣಿವೆಯಲ್ಲಿ ನಡೆಯುತ್ತಿದ್ದ ಗಣಿಗಾರಿಕೆಯನ್ನು ಸುಪ್ರೀಂ ಕೋರ್ಟ್ ನಿಲ್ಲಿಸಿತು. ಏಕೆಂದರೆ ಗಣಿಗಾರಿಕೆ ಮಾಡಿ ಪಡೆಯಲಾಗುತ್ತಿದ್ದ ಸುಣ್ಣದ ಕಲ್ಲಿಗಿಂತ ಅಲ್ಲಿ ಸಹಜವಾಗಿ ಸಿಗುತ್ತಿದ್ದ ಕಲ್ಲು ಹೆಚ್ಚು ಆರ್ಥಿಕವಾಗಿ ಲಾಭದಾಯಕವಾಗಿತ್ತು. ೨೦೧೩ರ ದುರಂತವು ವಿನಾಶಕಾರಿ ನೀತಿಯಿಂದ ಉಂಟಾಗುತ್ತಿರುವ ಸಾಮಾಜಿಕ, ಪರಿಸರಾತ್ಮಕ, ಆರ್ಥಿಕ ಹಾನಿಯ ಬಗ್ಗೆ ನಮ್ಮನ್ನು ಎಚ್ಚರಿಸಬೇಕು. ಆ ವಿನಾಶಕಾರಿ ನೀತಿ ನಮ್ಮ ಸೂಕ್ಷ್ಮ ಹಾಗೂ ಸುಂದರವಾದ ಪರ್ವತ ಪರಿಸರವನ್ನು ಹಾಳುಗೆಡವಿದೆ. ಹಿಮಾಲಯ ಪರ್ವತ ಶ್ರೇಣಿ ಜಗತ್ತಿನಲ್ಲಿಯೇ ಅತ್ಯಂತ ಚಿಕ್ಕ ಪ್ರಾಯದ ಪರ್ವತ ಶ್ರೇಣಿಯಾಗಿದೆ. ಕಾಡು ವಿನಾಶದಂಥ ಮತ್ತು ಆಣೆಕಟ್ಟು ನಿರ್ಮಾಣದಂಥ ಹಿಂಸೆಯನ್ನು ಅದು ತಡೆಯಲಾರದು. ಅದು ನಮ್ಮ ಕರುಣೆ ಮತ್ತು ಗೌರವವನ್ನು ಅಪೇಕ್ಷಿಸುತ್ತದೆ.

(ಅನು.ಸು.ಕೌ : ಸಾಭಾರ– ಡೆಕ್ಕನ್ ಹೆರಾಲ್ಡ್)

ಸಾಮೂಹಿಕ ಅಹಿಂಸೆ ಮತ್ತು ಸರ್ವೋದಯ

– ವಿನೋಬಾ

ಗಾಂಧೀಜಿ ಹೊರಟು ಹೋದರು ಆದರೆ ಅವರೊಂದು ಶಾಶ್ವತ, ಚಿರಸ್ಥಾಯಿ ಮತ್ತು ಮುಕ್ತಿದಾಯಿ ವಿಚಾರ ಕೊಟ್ಟರು. ಅದು ಅಹಿಂಸಾ ವಿಚಾರ. ಆ ವಿಚಾರ ಚಿರಕಾಲದವರೆಗೆ ಕೆಲಸಕ್ಕೆ ಬರುವಂತಹ ಮತ್ತು ಇಡೀ ಜಗತ್ತಿಗೆ ಮುಕ್ತಿ ಕೊಡುವಂತಹದ್ದಾಗಿದೆ. ಅಹಿಂಸೆ ನಮ್ಮ ದೇಶದ ಭಾಷೆ. ಅನೇಕ ಧರ್ಮಶಾಸ್ತ್ರಕಾರರು, ದರ್ಶನಕಾರರು, ಆಚಾರ್ಯರು, ಸಂತ-ಮಹಂತ ಮುಂತಾದವರು ಎಷ್ಟೊ ಈ ದೇಶದಲ್ಲಿ ಆಗಿ ಹೋದರು. ಅವರೆಲ್ಲರೂ ಅಹಿಂಸೆಯ ವಿಷಯದಲ್ಲಿ ಚಿಂತಿಸಿ, ಮಾತನಾಡಿ ಮತ್ತು ಬರೆಯುತ್ತಾ ಬಂದಿದ್ದಾರೆ. ಭಾರತೀಯರು ಎಷ್ಟೊಂದು ಈ ವಿಷಯದ ಮೇಲೆ ಬರೆದರೊ ಅಷ್ಟೊಂದು ಆತ್ಮಜ್ಞಾನ ಮತ್ತು ಪರಮಾತ್ಮನ ಬಿಟ್ಟು ಇನ್ನೂ ಯಾವುದೇ ವಿಷಯದ ಮೇಲೆ ಬರೆಯಲಿಲ್ಲ, ಚಿಂತಿಸಲಿಲ್ಲ, ಮತ್ತು ಹೇಳಲಿಲ್ಲ, ಇಲ್ಲಿಯ ಸಾಹಿತ್ಯದ ಮೇಲೆ ಅದರ ಪ್ರಭಾವವಿದೆ ಜೀವನದ ಯಾವ ಕ್ಷೇತ್ರವೂ ಕೂಡ ಅದರ ಪ್ರಭಾವದಿಂದ ದೂರವಿಲ್ಲ. ಆದರೂ ಕೂಡ ಗಾಂಧೀಜಿ ಅಹಿಂಸೆಯನ್ನು ನಮ್ಮ ಎದುರಿಗೆ ಒಂದು ವೈಜ್ಞಾನಿಕ ರೀತಿಯಲ್ಲಿ ಇಟ್ಟರು. ಹೊಸ ಮನುಷ್ಯನ ಜೀವನದ ತಳಹದಿ ಅಹಿಂಸೆಯೆ ಆಗಿರಲು ಸಾಧ್ಯ.

ಅಹಿಂಸೆಯ ಅರ್ಥ:– ಎಷ್ಟೊಂದು ಪ್ರೇಮ ಸ್ವಂತಕ್ಕೆ ಮಾಡಿಕೊಳ್ಳುತ್ತೇವೆಯೊ ಅಷ್ಟೇ ಪ್ರೇಮವನ್ನು ಭಗವಂತನ ಇಡೀ ಸೃಷ್ಟಿಯ ಮೇಲೆ ಮಾಡಬೇಕೆಂದು ಎಲ್ಲ ಜನರು ಒಪ್ಪುತ್ತಾರೆ. ಆದರೆ ಅನುಷ್ಠಾನ ಮಾಡಲಾರರು, ಆದ್ದರಿಂದ ಜನರು ನಿಧಾನ ನಿಧಾನವಾಗಿ ಎಲ್ಲರ ಮೇಲೆ ಪ್ರೇಮ ಮಾಡುವಂಥ ಶಿಕ್ಷಣ ಸಿಗಲೆಂದು ಶಾಸ್ತ್ರಕಾರರು ಮಧ್ಯದ ದಾರಿ ಕಂಡು ಹಿಡಿದರು. ನಮ್ಮ ಶರೀರ ನಮ್ಮ ವಿಸ್ತಾರ ತನುವಿನ ವಿಸ್ತಾರವೆ. ತನಯ, ಸಂತಾನ ಶಬ್ದ ಕೂಡಾ ತನುವಿನಿಂದ ರಚಿತವಾಗಿದೆ. ಯಾವರೀತಿ ಸಂತಾನ ತನುವಿನ ವಿಸ್ತಾರವೊ ಅದೇ ರೀತಿ ನಮ್ಮ ಸಮಾಜ ಕೂಡಾ ನಮ್ಮ ವಿಸ್ತಾರ. ಇದನ್ನು ತಿಳಿಯಬೇಕು, ಅದರ ಮೇಲೆ ಪ್ರೇಮಮಾಡುವುದನ್ನು ಕಲಿಯಬೇಕು.

ಅಹಿಂಸೆಯ ಅರ್ಥವೇನು? ***ಆತ್ಮವತ್ ಸರ್ವ ಭೂತೇಷು*** – ನಿನ್ನನ್ನು ನೀನು ಎಷ್ಟು ಪ್ರೀತಿಸುತ್ತಿಯೋ ಅಷ್ಟೇ ಪ್ರೀತಿಯನ್ನು ಎಲ್ಲರಿಗೂ ತೋರಿಸು. ಅಹಿಂಸೆ ಎಂದರೆ ಹಿಂಸೆಯನ್ನು ಮಾಡುವುದಲ್ಲ ಎಂಬ ಆ ಭಾವತ್ಮಾಕ ಅರ್ಥವಲ್ಲ. ಅದಕ್ಕೆ ಮೂರು ಅರ್ಥಗಳಿವೆ. ಮೊದಲನೆಯ ಅರ್ಥ ನಿರ್ಭಯತೆ, ಎರಡನೆಯ ಅರ್ಥ ಪ್ರೇಮ ಮತ್ತು ಸಹಯೋಗ ಮಾಡುವುದು, ಮತ್ತು ಮೂರನೇ ಅರ್ಥ ರಚನಾತ್ಮಕ ಕಾರ್ಯದಲ್ಲಿ ಶ್ರದ್ಧೆಯಿಡುವುದು. ನಾವು ನಿರ್ಭಯರಾಗಿ ಆತ್ಮಶಕ್ತಿಯ ಮೇಲೆ ವಿಶ್ವಾಸವಿಟ್ಟರೆ, ಪ್ರೇಮ ಮತ್ತು ಸಹಯೋಗದಿಂದ ಇಡೀ ಸಮಾಜವನ್ನು ಒಂದುಗೂಡಿಸಿದರೆ ಹಾಗೂ ರಚನಾತ್ಮಕ ಕೆಲಸದಲ್ಲಿ ತೊಡಗಿದರೆ ಆಗ ನಿಜವಾದ ಅರ್ಥದಲ್ಲಿ ನಮ್ಮ ಶಕ್ತಿ ಹೆಚ್ಚಾಗುವುದು.

ಸಾಮೂಹಿಕ ಅಹಿಂಸೆ:- ಹಿಂದುಸ್ತಾನದ ಆಧ್ಯಾತ್ಮಿಕ ಸಂಸ್ಕೃತಿಯ ಮೇಲೆ ಪಶ್ಚಿಮದ ವಿಜ್ಞಾನದ ಬಣ್ಣವೇರುತ್ತಲೆ ಅದರಲ್ಲಿ ಒಂದು ಹೊಸ ವಿಚಾರ ನಿರ್ಮಾಣವಾಯಿತು. ಅದನ್ನು ನಾವು 'ಸಾಮೂಹಿಕ ಅಹಿಂಸೆ' ಎನ್ನುತ್ತೇವೆ. ಇದು ಹಿಂದುಸ್ತಾನದ ಆಧ್ಯಾತ್ಮಿಕ ವಿಚಾರ ಮತ್ತು ಪಶ್ಚಿಮದ ವಿಜ್ಞಾನದ ಸಂಯೋಗದಿಂದ ಆಗಿದೆ.

ನಾವು ಅಹಿಂಸೆಯಿಂದ ಸ್ವರಾಜ್ಯ ಪಡೆದೆವು. ಈಗ ಪೂರ್ವ ದಿಕ್ಕಿನವರು ಪಶ್ಚಿಮದವರಿಗೆ ಸಾಮೂಹಿಕ ಅಹಿಂಸೆಯ ವಿಚಾರವನ್ನು ತಲುಪಿಸಬೇಕಾದ ಸರತಿ ಬಂದಿದೆ. ಸಾಮೂಹಿಕ ಅಹಿಂಸೆಯ ವಿಚಾರ ನಾವು ಅಹಿಂಸೆಯಿಂದ ಸ್ವರಾಜ್ಯ ಪಡೆದುದರಿಂದಲೇ ಆಗಿದೆ. ಪಶ್ಚಿಮದಿಂದ ವಿಜ್ಞಾನ ಬಂತು ಈಗ ಪೂರ್ವದಿಂದ ಸಾಮೂಹಿಕ ಅಹಿಂಸೆ ಅಲ್ಲಿಗೆ ಹೋಗುವುದೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಇದಕ್ಕೆ ನೂರಾರು ವರ್ಷವಾದರೂ ಚಿಂತೆಯಿಲ್ಲ.

ಸುಮಾರು ೨೦೦ ವರ್ಷಗಳ ಕಾಲದಲ್ಲಿ ಯೂರೋಪ್ ಮತ್ತು ಅಮೇರಿಕಾದಲ್ಲಿ ಔದ್ಯೋಗಿಕ ಮತ್ತು ವೈಜ್ಞಾನಿಕ ಪ್ರಗತಿಯ ಕಾರಣದಿಂದ ಒಂದು ತತ್ವ ಜ್ಞಾನ ಅಸ್ತಿತ್ವದಲ್ಲಿ ಬಂತು. ಆ ತತ್ವಜ್ಞಾನ 'ಬಹಳಷ್ಟು ಜನರಿಗೆ ಬಹಳಷ್ಟು ಹಿತವಾಗಬೇಕು'. ಹೆಚ್ಚು ಜನರ ಹಿತಕ್ಕಾಗಿ ಕೆಲವು ಜನರ ಹಿತಕ್ಕೆ ಹಾನಿಕೂಡಾ ಮಾಡಬಹುದು ಎಂದು ಈ ತತ್ವಜ್ಞಾನ ಒಪ್ಪುತ್ತದೆ. ಇದು ಬಹಳೇ ಭಯಾನಕ ವಿಚಾರ ಈ ವಿಚಾರದ ಕಾರಣದಿಂದ ಇಡೀ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವಿಚಾರಗಳಲ್ಲಿ ದೋಷ ಬಂದಿದೆ. ಯಾರೊಬ್ಬರ ಹಿತಕ್ಕಾಗಿ ಬೇರೆಯವರ ಹಿತಕ್ಕೆ ಅಡ್ಡಿಮಾಡುವುದು ತಪ್ಪು. ಕಣ್ಣನ್ನು ಉಳಿಸುವುದಕ್ಕಾಗಿ ಕೈ ಸಹಾಯಕ್ಕೆ ಬರುತ್ತದೆ. ಇದೇ ರೀತಿ ಯಾರಾದರೂ ಸ್ವಯಂ ಪ್ರೇರಣೆಯಿಂದ ಎರಡನೇಯವರಿಗಾಗಿ ತ್ಯಾಗಮಾಡುವುದಕ್ಕೆ ಸಿದ್ಧವಾದಲ್ಲಿ ಅದು ಶ್ರೇಷ್ಠ ವಿಚಾರ ಒಬ್ಬರ ಹಿತಕ್ಕಾಗಿ ಎರಡನೇಯವರ ಹಿತಕ್ಕೆ ಹಾನಿಯನ್ನು ಉಂಟುಮಾಡುವುದು ಒಳ್ಳೆಯದಲ್ಲ. ಬಹು ಜನರ ಹಿತಕ್ಕಾಗಿ ಬಹುಮತದಿಂದ ಕೆಲಸ ಮಾಡಲಾಗುತ್ತದೆ. ಆದರೆ ಜ್ಞಾನಿಗಳದು ಎಂದಾದರೂ ಬಹುಮತವಾಗುತ್ತದೋ? ಜ್ಞಾನಿಗಳು ಯಾವಾಗಲೂ ಕೆಲವರೇ ಇರುತ್ತಾರೆ. ಸಂಖ್ಯೆಯ ವಿಚಾರದಿಂದ ಯಾವ ಸಿದ್ಧಾಂತವನ್ನು ಮಾಡಲಾಗಿದೆಯೋ, ಅದು ನೈತಿಕವಲ್ಲ, ಅನೈತಿಕವಾಗಿದೆ, ದೋಷ ಪೂರ್ಣವಾಗಿದೆ. ಸರ್ವೋದಯ ವಿಚಾರ ಆ ದೋಷವನ್ನು ದೂರಮಾಡುತ್ತದೆ. ಮತ್ತು ನಾವು ಎಲ್ಲರ ಹಿತವನ್ನು ಮಾಡಬೇಕೆಂದು ಹೇಳುತ್ತದೆ.

ಸರ್ವೋದಯ ಸಿದ್ಧಾಂತ:- ಮೇಲ್ಕಾಣಿಸಿದ ತತ್ವಜ್ಞಾನಕ್ಕೆ ಪೂರ್ಣವಾಗಿ ಭಿನ್ನವಾದ ವಿಚಾರವನ್ನು ಸರ್ವೋದಯ ಮಂಡಿಸುತ್ತದೆ. 'ಸರ್ವ' ಎಂಬ ಈ ಶಬ್ದವೆ ತೋರಿಸುತ್ತದೆ. ಯಾವುದೇ ವ್ಯಕ್ತಿಯ ನಿಜವಾದ ಹಿತ ಬೇರೆ ಮನುಷ್ಯನ ನಿಜವಾದ ಹಿತಕ್ಕೆ ವಿರುದ್ಧವಾಗಿರಲು ಸಾಧ್ಯವಿಲ್ಲ. ನನ್ನ ಆರೋಗ್ಯ ನಿಮ್ಮ ಆರೋಗ್ಯಕ್ಕೆ ವಿರೋಧವಾಗಿರಲು ಸಾಧ್ಯವಿಲ್ಲ. ನನ್ನ ಹೃದಯ ಶುದ್ಧಿ ನಿಮ್ಮ ಹೃದಯ ಶುದ್ಧಿಗೆ ವಿರುದ್ಧವಾಗಿರಲಾರದು. ಮೊಲವನ್ನು ತಿನ್ನುವುದರಲ್ಲಿ ತನ್ನ ಹಿತವಿದೆ ಎಂದು ಹುಲಿ ತಿಳಿಯುತ್ತದೆ. ಹುಲಿಯ ಹಿಡಿತದಿಂದ ತಪ್ಪಿಸಿಕೊಳ್ಳವುದರಲ್ಲಿ ತನ್ನ ಹಿತವಿದೆ ಎಂದು ಮೊಲ ತಿಳಿಯುತ್ತದೆ. ಆದ್ದರಿಂದ ವಿರೋಧ ಬರುತ್ತದೆ. ಮಾನವ ಸಮಾಜದಲ್ಲಿ

ಎಂದೂ ಓರ್ವ ವ್ಯಕ್ತಿಯ ಹಿತಕ್ಕೆ ಇನ್ನೊರ್ವ ವ್ಯಕ್ತಿಯ ಹಿತ ವಿರುದ್ಧ ಆಗಲಾರದು. ಆದ್ದರಿಂದ ನಾವು ಎಲ್ಲರ ಹಿತವನ್ನು ಸಾಧಿಸಬೇಕು ಇದರಲ್ಲಿ ಗರಿಷ್ಠ ಸಂಖ್ಯೆ ಮತ್ತು ಕನಿಷ್ಠ ಸಂಖ್ಯೆಯ ಚಿಂತನೆ ಇರುವುದಿಲ್ಲ.

ಕೇವಲ ಸತ್ಯದರ್ಶನದ್ದೆ ಗಮನ ವಿದ್ದರೆ ಹೆಚ್ಚು ಸಂಖ್ಯೆಯ ಜನರಿಗೆ ಸತ್ಯ ದರ್ಶನವಾಗುತ್ತದೆ ಎಂದು ನಾವು ಹೇಳಲು ಸಾಧ್ಯವಿಲ್ಲ. ಸತ್ಯದರ್ಶನ ಅನೇಕರಿಗಾಗದೆ, ಒಬ್ಬನಿಗೆ ಮಾತ್ರ ಆಗುವ ಸಂಭವವಿದೆ. ಆದ್ದರಿಂದ ಸತ್ಯದರ್ಶನದ ವಿಷಯ ಇರುವಡೆಯಲ್ಲಿ ಸಂಖ್ಯೆಯ ಯಾವ ಸಂಬಂಧವು ಇಲ್ಲ. ತನ್ನ ಸತ್ಯದರ್ಶನಕ್ಕಾಗಿ ಇಡೀ ಸಮಾಜಕ್ಕೆ ವಿರೋಧವಾಗಿ ಅದರ ಎದುರಿಗೆ ನಿಲ್ಲುವ ಹಕ್ಕು ಕೂಡಾ ಅವನಿಗೆ ಇದೆ. ಇದನ್ನೆ ಸತ್ಯಾಗ್ರಹದ ಹಕ್ಕು ಎಂದು ಹೇಳುತ್ತಾರೆ. ಸತ್ಯಾಗ್ರಹ ಕೇವಲ ಹಕ್ಕು ಆಗಲಾರದೆ ಕರ್ತವ್ಯ ಕೂಡಾ ಆಗುತ್ತದೆ.

ಓರ್ವ ಶಿಕ್ಷಕ ಗಣಿತದ ಪ್ರಶ್ನೆಯೊಂದನ್ನು ಮಂಡಿಸುತ್ತಾನೆ. ೧೫ವಿದ್ಯಾರ್ಥಿಗಳು ತಪ್ಪಾಗಿ ಉತ್ತರಿಸುತ್ತಾರೆ, ಇಬ್ಬರೇ ವಿದ್ಯಾರ್ಥಿಗಳು ಸರಿಯಾದ ಉತ್ತರ ಕೊಟ್ಟರೆ ಆ ಪ್ರಶ್ನೆಯ ನಿರ್ಣಯ ಬಹುಸಂಖ್ಯಾತದಿಂದಾಗುವುದೊ? ಸತ್ಯದರ್ಶನದ ಸಂಬಂಧ ಬಹುಮತದೊಂದಿಗೆ ಇಲ್ಲವೇ ಇಲ್ಲ. ಇದೇ ರೀತಿ ಸರ್ವರ ಹಿತಕ್ಕೆ ಸಂಬಂಧಿಸಿದ ಮಾತಿದೆ. ಅಲ್ಲಿ ಯಾರ ಹಿತಕ್ಕೂ ಹಾನಿಉಂಟಾಗಕೂಡದು ಎಲ್ಲರ ಹಿತ ಸಾಧಿತವಾಗಬೇಕು ಇದೇ ಸರ್ವೋದಯ ವಿಚಾರ.

'ಅಧಿಕಾಧಿಕ ಜನರ ಅಧಿಕಾಧಿಕ ಹಿತ' ಇದೊಂದು ಅಸಹ್ಯ ವಿಚಾರ.

ಅದರೆ ಪರಿಣಾಮದ ಸ್ವರೂಪವಾಗಿ ಜಗತ್ತಿನಲ್ಲಿ ಅನೇಕ ಪ್ರಕಾರದ ರಾಜನೈತಿಕ ಗೊಂದಲಗಳು ಉಂಟಾಗುತ್ತವೆ. ಇಂದು ಜಗತ್ತಿನ ಪ್ರತಿಯೊಂದು ದೇಶದಲ್ಲಿ ಬಹುಸಂಖ್ಯಾಂತರ ವಿರುದ್ಧ ಅಲ್ಪಸಂಖ್ಯಾತರ ಪ್ರಶ್ನೆ ಇದೆ. ಮೊದಲಿದ್ದ ಭೇದಗಳು ಖಾಯಂ ಆಗಿವೆ! ಅವುಗಳೊಂದಿಗೆ ಇನ್ನೊಂದು ಭೇದದ ವೃದ್ಧಿಯಾಯಿತು. ಅದರ ಪರಿಣಾಮವಾಗಿ ಶಾಂತಿಯ ಸ್ಥಾಪನೆಯಾಗಲು ಸಾಧ್ಯವಾಗಲಿಲ್ಲ.

'ಅಲ್ಪ ಮತ, ಬಹುಮತ' ಇದರ ಹೊಟ್ಟೆಯಿಂದ ಸಂಖ್ಯಾಸುರ ಹುಟ್ಟಿದ. 'ಯಾವಾಗ ಈ ಮೆಜಾರಿಟಿ, ಮೈನಾರಿಟಿ'ಯ ಚರ್ಚೆಯಲ್ಲಿ ನಾವು ಬಿದ್ದೆವೋ ಆಗಿನಿಂದ ಜಗತ್ತಿನ ಪ್ರತಿ ದೇಶದಲ್ಲಿ ಜಗಳ ಪ್ರಾರಂಭವಾಯಿತು. ಈ ಅಪೂರ್ಣ ಮಂತ್ರದ ಕಾರಣದಿಂದ ಇಡೀ ವಿಚಾರ ಕೂಡಾ ಏಕಾಂಗಿಯಾಯಿತು.

ವಾಸ್ತವದಲ್ಲಿ ಆ ಮಂತ್ರದ ಪೂರ್ತಿ ಆತ್ಮಜ್ಞಾನದ ದರ್ಶನದಿಂದ ಆಗಲು ಸಾಧ್ಯ 'ಎಲ್ಲರ ಹಿತವಾಗಬೇಕು', ಅಧಿಕಾಧಿಕ ಜನರದಲ್ಲ ಎಂಬುದು ಪೂರ್ತಿವಿಚಾರ. ಏಕೆಂದರೆ ಅದರಲ್ಲಿ ಕಡಿಮೆ ಜನ ಅಂದರೆ ಅಲ್ಪ ಸಂಖ್ಯಾತರಿದ್ದಾರೆ ಅವರಿಗೆ ಅನ್ಯಾಯವಾಗುತ್ತದೆ. ೯ ಜನರಿಗೆ ಒಳ್ಳೆಯದಾಗಲಿ ಮತ್ತು ಒಬ್ಬನಿಗೆ ಒಳ್ಳಯದಾಗದಿರಲಿ ಎಂಬುದಾಗಿ ನಾವು ನಮ್ಮ ಕುಟುಂಬದಲ್ಲಿ ಆಲೋಚಿಸುವುದಿಲ್ಲ. ಸಮಾಜದ ಪ್ರಶ್ನೆ ಬಂದಾಗ "ಅಧಿಕಾಧಿಕ ಜನರ ಹಿತದಿಂದ ಅಧಿಕಾಧಿಕ ಹಿತವಾಗುಬೇಕೆಂದು ವಿಜ್ಞಾನ ಹೇಳಿತು. ಆದರೆ ನಾವು ಎಲ್ಲರ ಹಿತವನ್ನು ಬಯಸುತ್ತೇವೆ. ವಿಜ್ಞಾನದ್ದು ಅಪೂರ್ಣ ಮಂತ್ರ, ಸರ್ವೋದಯದು ಪೂರ್ಣಮಂತ್ರ, ಸರ್ವೋದಯದಲ್ಲಿ ಆತ್ಮದ ವಿಚಾರವಿದೆ. ಅದರ ಅಭ್ಯುದಯ ಜ್ಞಾನದಲ್ಲಿದೆ. ಸರ್ವೋದಯ ಪೂರ್ಣವಾದ ವಿಚಾರವನ್ನು

ಕೊಟ್ಟಿದೆ, ನಿಜವಾದ ಮತ್ತು ಶುದ್ಧವಾದ ವಿಚಾರ 'ಇಪ್ಪತ್ತರ ವಿರುದ್ಧ ಇಪ್ಪತ್ತೈದು' ಎಂಬಂತಹ ಅಭಿಪ್ರಾಯ ಪಡೆಯುವುದನ್ನು ನಾವು ತಪ್ಪೆಂದು ಭಾವಿಸುತ್ತೇವೆ. ಆತ್ಮವನ್ನು ತುಂಡರಿಸಬಹುದೆಂಬ ತಪ್ಪು ವಿಚಾರ ಆತ್ಮಜ್ಞಾನದಲ್ಲಿ ಇಲ್ಲ. ಆತ್ಮವಂತು ಅಖಂಡ, ಅವಿಭಾಜ್ಯ, ಪೂರ್ಣ, ಸಮಾನ ಮತ್ತು ನಿರ್ದೋಷಿ. ಅದು ಪ್ರತಿಯೊಂದು ಪ್ರಾಣಿಯಲ್ಲಿ ಸಮಾನರೂಪದಿಂದಿದೆ. ನಾವು ಪೂರ್ಣ, ಇವನು ಪೂರ್ಣ, ಅವ ಕೂಡಾ ಪೂರ್ಣ ಮತ್ತು ಪೂರ್ಣದಿಂದ ಪೂರ್ಣವೆ ನಿಷ್ಪನ್ನವಾಗುತ್ತದೆ. ಆತ್ಮಜ್ಞಾನ ಪೂರ್ಣವಿದೆ. ಆದ್ದರಿಂದಲೆ ಅದರಿಂದ ಪೂರ್ಣವಿಚಾರ ಹೊರಡುತ್ತದೆ. ಅದರಲ್ಲಿ ಮೆಜಾರಿಟಿ, ಮೈನಾರಿಟಿಗೆ ಅವಕಾಶವೆ ಇಲ್ಲ. ಈ ವಿಚಾರ ಸರ್ವೋದಯ ಮೂಲಕ ನಮ್ಮ ಎದುರಿಗೆ ಬಂದಿದೆ ಇದರ ಒಂದೊಂದು ಅಂಶವನ್ನು ತೆಗೆದುಕೊಂಡು ನಾವು ಕೆಲಸ ಮಾಡಬಹುದಾಗಿದೆ. ಸ್ವರಾಜ್ಯದ ನಂತರ ನಮಗೆ ಸರ್ವೋದಯದ ಹೊಸ ಮಂತ್ರ ಲಭ್ಯವಾಗಿದೆ. (ಸಂಗ್ರಹ : ಸು.ಕೌ)

* * *

ಸನ್ಮಾನ್ಯರಿಂದ...

ಕಳೆದ ನಾಲ್ಕೈದು ವರ್ಷಗಳಿಂದ ನಾನು ತಮ್ಮ 'ಜನಪದ ವಿಚಾರ' ಮಾಸಪತ್ರಿಕೆಯ ಓದುಗನಾಗಿ, ವಿಷಯ ಪ್ರಪಂಚದ ಸರ್ವಕಾಲೀಕ ಸತ್ಯವಾದ ವಿಚಾರಗಳನ್ನು ತಾವು ಸ್ವತಃ ಬರೆದು ಸಂಗ್ರಹಿಸಿ, ಸಂಪಾದಿಸಿ, ಮುನ್ನಡೆಸುತ್ತಿರುವ ಅಸಾಮಾನ್ಯ ಸಾಹಸಕ್ಕೆ ನಾನು ಬೆರಗಾಗಿದ್ದೇನೆ. ಈ ದಿನಗಳಲ್ಲಿ ಪತ್ರಿಕೆ ಪ್ರಕಟಿಸುವುದು ಎಂದರೆ ಕೇವಲ ಆರ್ಥಿಕ ದೃಷ್ಟಿಯಿಂದ, ಇಲ್ಲವೇ ಪ್ರಚೋದನಕಾರಿ ವಿಷಯಗಳನ್ನು ಅಬ್ಬರದಿಂದ ಆಕರ್ಷಿಸುವ ಯತ್ನ ಆಗಿರುವ ಸಮಯದಲ್ಲೂ ಕೂಡ, ತಾವು ಸರ್ವೋದಯ ಆಂದೋಲನವನ್ನು ಮುನ್ನಡೆಸುತ್ತಿರುವುದು ಕೂಡ ನನ್ನನ್ನು ಬೆರಗಾಗಿಸಿದೆ.

ಶುಭ್ರ, ಸುಂದರ ಮುದ್ರಿತ, ಪ್ರಸ್ತುತ ವಿಚಾರಧಾರೆಗಳ ಸಂಗಮವಾದ 'ಜನಪದ ವಿಚಾರ' ಎಂದೆಂದೂ ಚಿರಾಯುವಾಗಬೇಕು. ಸಮಾಜದ ಅಂಕುಡೊಂಕು, ಜೀವನದ ಸುಂದರ ಮಜಲುಗಳು ಮತ್ತು ಆಸಕ್ತಿ ಹುಟ್ಟಿಸುವ ವಿಷಯ ಹೆಚ್ಚು ವಿದ್ಯಾವಂತರನ್ನು ತಲುಪಬೇಕು ಎಂದು ನನ್ನ ಆಶಯ. ಈ ಯತ್ನದಲ್ಲಿ ನಿಮಗೆ ಸಹಾಯ ಹಸ್ತಗಳು ಬಹಳ ಅಗತ್ಯ.

ಈ ನಿಟ್ಟಿನಲ್ಲಿ ನನ್ನ ಕಿರುಕಾಣಿಕೆಯಾಗಿ ನನ್ನಿಂದ ಸಲ್ಲುವ ಚಂದಾ ಹಣವಾಗಿ ೧೦೦೦/- ರೂ ಗಳ ಚೆಕ್ಕನ್ನು ಜತೆಗಿರಿಸಿದ್ದೇನೆ. ದಯವಿಟ್ಟು ಸ್ವೀಕರಿಸಿ.

– ಎಸ್.ಆರ್.ಜಗದೀಶ್, ವಿರಾಜಪೇಟೆ

ಚೀನಾ ನಮ್ಮ ದೇಶದ ಗಡಿಯನ್ನು ಆಕ್ರಮಿಸುತ್ತಿದೆ, ನಮ್ಮ ಗಾಂಧೀಜಿ ಚೀನೀಯರನ್ನು ಆವರಿಸಿಕೊಳ್ಳುತ್ತಿದ್ದಾರೆ!

(ಚೀನಾದಲ್ಲಿ ಶಾಲಾ-ಪೂರ್ವ ತರಗತಿಗಳಿಂದಲೇ ಗಾಂಧೀಜಿಯವರನ್ನು ಪರಿಚಯಿಸಲಾಗುತ್ತಿದೆ.)

ಮಹಾತ್ಮಾ ಗಾಂಧೀಜಿಯವ ಬಗ್ಗೆ ಮತ್ತು ಅವರು ಅನುಸರಿಸಿದ ಅಹಿಂಸಾಂದೋಲನದ ಬಗ್ಗೆ ಇತ್ತೀಚೆಗೆ, ಹೆಚ್ಚು ಹೆಚ್ಚು ಚೀನಿಯರು ಆಕರ್ಷಿತರಾಗುತ್ತಿದ್ದಾರೆ, ಆಸಕ್ತಿ ವಹಿಸುತ್ತಿದ್ದಾರೆ; ಹಾಗೆಂದೇ, ಅವರನ್ನು ಕುರಿತಾದ ಬೋಧನೆ; ಶಾಲಾ–ಪೂರ್ವದ ತರಗತಿಗಳಿಂದ ಹಿಡಿದು ವಿಶ್ವವಿದ್ಯಾನಿಲಯದವರೆಗಿನ ಪಠ್ಯಾವಳಿಯಲ್ಲಿ ಅಳವಡಿಸಲಾಗಿದೆ.

ಈ ಮೊದಲಿನ ದಿನಗಳಲ್ಲಿ ಚೀನಿ ವಿದ್ವಾಂಸರು ಮಾತ್ರವೇ ಗಾಂಧೀಯವರ ಬಗ್ಗೆ ತಿಳಿಯುತ್ತಿದ್ದರು. ಅಧ್ಯಯನ ಮಾಡುತ್ತಿದ್ದರು, ಆದರೆ ಈಗ ಚೀನಾದ ಶಿಕ್ಷಣ ಪಠ್ಯಾವಳಿಯಲ್ಲಿ ಮಹಾತ್ಮಾ ಗಾಂಧೀಯವರ ಬೋಧನಾಂಶಗಳನ್ನು ಅಳವಡಿಸಿರುವುದರಿಂದ ಪ್ರತಿ ಚೀನೀಯ ಬಹುಮಟ್ಟಿಗೆ ಗಾಂಧೀಯವರನ್ನು ತಿಳಿಯಲು ಸಾಧ್ಯವಾಗುತ್ತಿದೆ.

ಶಾಲಾ–ಪೂರ್ವದ ತರಗತಿಗಳಲ್ಲಿ ಗಾಂಧೀಯವರನ್ನು ಕುರಿತಂತೆ ರೇಖಾಕೃತಿಗಳ ಬೋಧನೆ (Drawings) ಇದ್ದರೆ, ಮಾಧ್ಯಮಿಕ ಶಾಲೆಗಳ ಮಟ್ಟದಲ್ಲಿ ಬೋಧಿಸಲಾಗುವ ಸಂಘರ್ಷ ಇತಿಹಾಸದಲ್ಲಿ (War History), ಗಾಂಧಿಯವರು ನಡೆಸಿದ ಅಹಿಂಸಾ ವಿಧಾನದ ಹೋರಾಟಗಳಿರುತ್ತವೆ.

ಬೀಜಿಂಗ್ ವಿಶ್ವವಿದ್ಯಾನಿಲಯದಲ್ಲಿ ಗಾಂಧೀಜಿ ಕುರಿತ ಉಪನ್ಯಾಸ ನೀಡಲು ಮತ್ತು ಪಿ.ಎ.ನಜರತ್ ಅವರು ಬರೆದಿದ್ದ Gandhi's outstanding Leadrship ಪುಸ್ತಕದ ಚೀನಿ ಅವತರಣಿಕೆಯನ್ನು ಬಿಡುಗಡೆ ಮಾಡಲು ಹೋಗಿದ್ದ ಸಂದರ್ಭದಲ್ಲಿ ಹಿಂದೆಂಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಗಾಂಧೀ ಅಧ್ಯಯನ ಕೇಂದ್ರಗಳು ಕಂಡು ಬಂದವೆಂದು ಹೇಳಲಾಗಿದೆ. (ಹೋಗಿದ್ದವರು ಲೇಖಕರಾದ ಕ್ವಾನ್ಯುಷಾಂಗ್.)

(೨೦೦೬ ರಲ್ಲಿ ಮೊದಲ ಬಾರಿಗೆ ಇಂಗ್ಲಿಷಿನಲ್ಲಿ ಪ್ರಕಟವಾದ ಪಿ.ಎ.ನಜರತ್ ಅವರ ಈ ಪುಸ್ತಕ ಆನಂತರದ ವರ್ಷಗಳಲ್ಲಿ ಕನ್ನಡ, ಹಿಂದಿ, ತಮಿಳು, ತೆಲುಗು, ಒರಿಯಾ ಮತ್ತು ಸ್ಪಾನಿಷ್ ಭಾಷೆಗಳಿಗೆ ಭಾಷಾಂತರವಾಗಿದೆ.)

ಗಾಂಧೀಯವರನ್ನು ಕುರಿತ ಅನೇಕ ಪುಸ್ತಕಗಳು ಚೀನಾದಲ್ಲಿ ಪ್ರಕಟವಾಗಿವೆಯಾದರೂ ಪಿ.ಎ.ನಜರತ್ ಅವರ ಈ ಪುಸ್ತಕ ನಾಯಕತ್ವ ಕುರಿತಂತೆ, ನಾಯಕತ್ವವವನ್ನು ಸಾರುವ ಮಾರ್ಗ ಸೂಚಿಯಾಗಿ, ಮತ್ತು ವಿಶಿಷ್ಟ ಲಕ್ಷಣಗಳ ಆಗರವಾಗಿ ಚೀನಿಯರಿಗೆ ಕಂಡು ಬಂದಿರುತ್ತದೆ.

ಪ್ರಪಂಚಾದ್ಯಂತ ಗಾಂಧೀಯವರನ್ನು ಕುರಿತು ಪ್ರಕಟವಾಗಿರುವ ಎಲ್ಲ ಗ್ರಂಥಗಳೂ ಬಹಳಮಟ್ಟಿಗೆ ಗಾಂಧೀಯವರ ಸತ್ಯ, ಅಹಿಂಸೆ ಮತ್ತು ಅವರ ಸಾಧನೆಗಳ ಬಗ್ಗೆ ಮಾತ್ರ ತಿಳಿಸುತ್ತವೆ, ಅಪರೂಪಕ್ಕೆ ಕೆಲವು ಮಾತ್ರ, ಅವರ ನಾಯಕತ್ವವನ್ನೂ ಪ್ರಸ್ತಾಪಿಸುತ್ತವೆ. ಪಿ.ಎ.ನಜರತ್ ಅವರ ಈ ಪುಸ್ತಕ–ಗಾಂಧೀಯವರ ಸ್ವಭಾವ, ಹೊರ ಜಗತ್ತಿನ ಮೇಲೆ ಅವರ ನಾಯಕತ್ವದ ಪರಿಣಾಮ ಮೇಲಾಗಿ ಪುಕ್ಕಲನಾಗಿದ್ದ ಯುವ ಗಾಂಧೀ ನಾಯಕನಾಗಿ ರೂಪುಗೊಂಡ ಸಂಗತಿಗಳನ್ನು ವಿವರಿಸುತ್ತದೆ. ನೆಪೋಲಿಯನ್ನನ್ನೂ ಒಳಗೊಂಡಂತೆ ಆಧುನಿಕ ಕಾಲದ ನಾಯಕ ಮಹೋದಯರೊಂದಿಗೆ ಗಾಂಧೀಯವರನ್ನು ಹೋಲಿಸಲಾಗಿದೆ. ಜೀವನದ ವಿವಿಧ ರಂಗಗಳಲ್ಲಿ ಯಶಸ್ವಿ ಮುಂದಾಳುಗಳಾಗಬೇಕೆಂದು ಆಶಿಸುವವರಿಗೆ ಗಾಂಧೀಜಿಯವರ ವ್ಯಕ್ತಿತ್ವ ಮತ್ತು ಸಾಧನೆಗಳು ಮಾದರಿಯಾಗಿ ಕಂಡುಬರುತ್ತವೆ.

ಈ ಸಂಗತಿಗಳನ್ನು ನೀಡಿರುವವರು ಚೀನಾದ ವಿದ್ವಾಂಸರಾದ ಕ್ವಾನ್ಯುಷಾಂಗ್, ಸೌತ್ ಚೆಂಗ್ ನಾರ್ಮಲ್ ಯೂನಿವರ್ಸಿಟಿಯಲ್ಲಿ ವಿದೇಶಾಂಗ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದಾರೆ, ಭಾರತದ ರಾಯಭಾರಿಯಾಗಿದ್ದ ಶ್ರೀ ಪಿ.ಎ.ನಜರತ್ ಅವರ Gandhi's out standing Leadership ಗ್ರಂಥವನ್ನೂ ಚೀನಿ ಭಾಷೆಗೆ ತರ್ಜುಮೆ ಮಾಡಿದ್ದಾರೆ.

(ಸಂಗ್ರಹ: ಲ.ನ.ನರಸಿಂಹಯ್ಯ ; ಆಧಾರ: 'ಸರ್ವೋದಯ ತಾಲಿಸ್‌ಮನ್')

* * *

ನಾನೇಕೆ 'ಹರಿಜನ'ರೆಂದು ಕರೆದೆ?

ನಾನೇಕೆ 'ಹರಿಜನ' ಎಂಬ ಸಂಜ್ಞೆ ಉಪಯೋಗಿಸುತ್ತೇನೆ? ತನ್ನವರಲ್ಲವೆಂದು ನಿರಾಕರಿಸಿದವರನ್ನು ದೇವರು ತನ್ನವರನ್ನಾಗಿಸಿಕೊಳ್ಳುತ್ತಾನೆ. ಎಲ್ಲ ಧಾರ್ಮಿಕ ಗ್ರಂಥಗಳು ಇದನ್ನೇ ಕಲಿಸುತ್ತವೆ. ಗೀತಾಮಾತೆ ನಮಗೆ ಅದನ್ನೇ ಹೇಳುತ್ತದೆ. ಅಹಲ್ಯೆ ಶಿಲೆಯಾಗಿ ರೂಪಾಂತರ ಗೊಂಡಳು. ಸಮಾಜವು ಅವಳನ್ನು ತಿರಸ್ಕರಿಸಿತ್ತು. ರಾಮ ಶಿಲೆಯನ್ನು ಸ್ಪರ್ಶಿಸಿದ, ಅವಳು ಪುನರ್ ಜೀವಿತಗೊಂಡು ಅವನಲ್ಲಿ ಆಶ್ರಯ ಪಡೆದಳು. ಸವರ್ಣೀಯ ಹಿಂದು.ಗಳು ಹರಿಜನರನ್ನು ಪರಿತ್ಯಜಿಸಿದ್ದಾರೆ. ಆದ್ದರಿಂದ ದೇವರು ಅವರನ್ನು ತನ್ನ ರಕ್ಷಣೆಯೊಳಗೆಯಿರಿಸಿಕೊಂಡಿದ್ದಾನೆ. ಈ ಕಾರಣದಿಂದಾಗಿ ಅವರು ಹರಿಜನರು. ಹರಿಯಜನರು, ಅಸ್ಪೃಶ್ಯರನ್ನು ನಾವು ಸ್ವಇಚ್ಛೆಯಿಂದ ಹೃದಯ ಪೂರ್ವಕವಾಗಿ ಸ್ವೀಕರಿಸಿದ ಮೇಲೆ ನಾವೆಲ್ಲರೂ ಹರಿಯ ಜನರಾಗುವೆವು.

- **ಮಹಾತ್ಮಾಗಾಂಧೀ**

(೦೩.೦೬.೧೯೩೪ - ಹರಿಜನಬಂಧು)

ಉತ್ತರಾಖಂಡದ ಯೋಜನಾಬದ್ಧ ದುರಂತ ತಪ್ಪಿಸಿ

– ಮೇಧಾ ಪಾಟ್ಕರ್ ಮತ್ತು ಮತ್ತು ಮುಖೇಶ್ ಬಾಗೋರಿಯಾ

ಮಾನ್ಯ ಶ್ರೀ ಮನ್‌ಮೋಹನ್‌ಸಿಂಗ್
ಪ್ರಧಾನ ಮಂತ್ರಿ
ಭಾರತ ಸರ್ಕಾರ
ಹೊಸ ದಿಲ್ಲಿ

ಮಾನ್ಯರೇ,

ಅತೀ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ನಾವೀಪತ್ರ ಬರೆಯುತ್ತಿದ್ದೇವೆ. ಆದಿವಾಸಿಗಳು, ರೈತರು, ಮೀನುಗಾರರು ಕುಂಬಾರರಂಥ ಸಂಖ್ಯೆಯಿರುವ ೨ಲಕ್ಷ ಜನರ ಜೀವನ ಮತ್ತು ಅವರ ಬದುಕು ಉಳಿಯಲು ನಿಮ್ಮ ಶೀಘ್ರಾತಿಶೀಘ್ರ ನೆರವು ಬೇಕಿದೆ. ಈ ಜನರು ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯದಲ್ಲಿರುವ ನರ್ಮದಾನದಿಯ ಕೊಳ್ಳ ಪ್ರದೇಶದಲ್ಲಿಯ ೨೪೫ ಹಳ್ಳಿಗಳಲ್ಲಿ ವಾಸವಿದ್ದಾರೆ. ಸರ್ದಾರ್ ಸರೋವರ್ ಆಣೆಕಟ್ಟಿನ ಈಗಿನ ೧೨೨ ಮೀಟರ್ ಎತ್ತರದಿಂದ ಅಂತಿಮ ಎತ್ತರವಾದ ೧೩೮ ಮೀಟರ್ ಎತ್ತರಕ್ಕೆ ಏರಿಸುವ ಬಗ್ಗೆ ಅನುಮತಿ ಕೊರಲು ಇದೇ ಜುಲೈ ೨ ರಂದು ಇಂದೋರ್‌ನಲ್ಲಿ ಸಭೆ ನಡೆಯಲ್ಲಿದೆ. ಏತನ್‌ಮಧ್ಯೆ ಸಂಬಂಧಿಸಿದ ರಾಜ್ಯ ಸರ್ಕಾರಗಳು 'ಸಂಪೂರ್ಣಪುನರ್‌ವಸತಿ'ಯ ವರದಿಯನ್ನು ಸಲ್ಲಿಸಿವೆ. ನರ್ಮದಾ ನಿಯಂತ್ರಣ ಪ್ರಾಧಿಕಾರ ತೀರ್ಮಾನ ಕೈಗೊಳ್ಳಬೇಕಿದೆ.

ಸಾವಿರಾರು ಜನರು ಇನ್ನೂ ಭೂಮಿ ಪಡೆಯಬೇಕಿದೆ, ಇನ್ನೂ ಸಾವಿರಾರು ಜನರು ಪರ್ಯಾಯ ಜೀವನ ನಿರ್ವಹಣಾ ವ್ಯವಸ್ಥೆಯನ್ನು ಹೊಂದಬೇಕಿದೆ. ಮೀನುಗಾರಿಕೆ ಹಕ್ಕು ಪಡೆಯಬೇಕಿದೆ. ನಿವೇಶನಗಳನ್ನು ಪಡೆಯಬೇಕಿದೆ. ಮೀನುಗಾರಿಕೆ ಹಕ್ಕು ಪಡೆಯಬೇಕಿದೆ. ನಿವೇಶನಗಳನ್ನು ಪಡೆಯಬೇಕಿದೆ ಮತ್ತು ಇನ್ನಿತರ ಮೂಲಭೂತ ಸೌಕರ್ಯಗಳನ್ನು ಹಾಗೂ ದೃಢೀಕರಣ ಪತ್ರವನ್ನು ಪಡೆಯಬೇಕಿದೆ. ಒಂದು ಸಾವಿರ ಕೋಟಿಯಷ್ಟು ಹಣದ ದುರುಪಯೋಗದ ವಿಚಾರಣೆ ನಡೆಯುತ್ತಿದೆ. ಪರಿಸರ ಸಂಬಂಧವಾದ ವರದಿಯನ್ನು ಇನ್ನು ಒಪ್ಪಿಕೊಂಡಿರುವುದಿಲ್ಲ. ಇಂಥ ಸಂದರ್ಭದಲ್ಲಿ ಜೀವನದ ಚಟುವಟಿಕೆಗಳಿಂದ ತುಂಬಿರುವ ಹಳ್ಳಿಗಳಲ್ಲಿ ವಾಸವಾಗಿರುವ ಎರಡು ಲಕ್ಷ ಜನರನ್ನು ನೀರಿನಲ್ಲಿ ಮುಳುಗಿಸುವುದು ಮಾನವ ಹತ್ಯೆಯೇ ಆಗಿದೆ. ಉತ್ತರಾಖಂಡದ ದುರಂತಕ್ಕಿಂತಲೂ ಹೆಚ್ಚು ನೋವಿನದ್ದಾಗಿದೆ. ಆದ್ದರಿಂದ ಎಲ್ಲ ಕಾನೂನುಗಳನ್ನು ಮತ್ತು ನ್ಯಾಯಲಯದ ಆದೇಶಗಳನ್ನು ಬದಿಗೊತ್ತಿ ಆಣೆಕಟ್ಟಿನ ಎತ್ತರ ಹೆಚ್ಚಿಸಲು ನಡೆದಿರುವ ರಾಜಕೀಯ ಹುನ್ನಾರವನ್ನು ತಪ್ಪಿಸಲು ಮಧ್ಯ ಪ್ರವೇಶಿಸುವುದಕ್ಕಾಗಿ ನಿಮ್ಮ ನೆರವನ್ನು ಕೋರುತ್ತೇವೆ. ಅಣೆಕಟ್ಟಿನಿಂದ ಆಗುವುದೆಂದು ಅಂದಾಜು ಮಾಡಲಾಗಿದ್ದ

ಪ್ರಯೋಜನದಲ್ಲಿ ಕೇವಲ ಶೇ೧೦ರಷ್ಟು ಮಾತ್ರ ಸಾಧಿತವಾಗಿದೆ. ಅಲ್ಲದೇ ಆರ್ಥಿಕ ಸಾಮಾಜಿಕ ಮತ್ತು ಪರಿಸರತ್ಮಾಕ ಖರ್ಚು ಶೇ ೧೦ರಷ್ಟು ಹೆಚ್ಚಾಗಿದೆ. ದಯಮಾಡಿ ವಾಚಕರು ಪ್ರಧಾನಮಂತ್ರಿಯವರಿಗೆ, ಜಲಸಂಪನ್ಮೂಲ ಮತ್ತು ಸಾಮಾಜಿಕ ನ್ಯಾಯ ಮಂತ್ರಿಯವರಿಗೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಕೂಡಲೇ ಪತ್ರ ಬರೆಯಿರಿ.

('ಜನತಾ'ದಿಂದ)

Sri Manmohan singh,
Prime Minister,
Fax: 011-23019545
E-mail: manmohan@sansad.nic.in

Sri Harish Rawat,
Ministry, of Water Resources,
Fox: 11-23714200
E-mail:minister-mowt@nic.in

* * *

ನಿಮ್ಮ ಒಪ್ಪಿಗೆಯಿಲ್ಲದೆ ಯಾರೂ ನಿಮ್ಮನ್ನು ಕೀಳಾಗಿ ಭಾವಿಸಲು ಸಾಧ್ಯವಿಲ್ಲ.

– ಎಲಿಯೋನೋರಾ ರೂಸ್‌ವೆಲ್ಟ್

* * *

ಈ ಪ್ರಪಂಚದಲ್ಲಿ ಸ್ವಪ್ರಯತ್ನದಿಂದ ಮುಂದೆ ಬಂದಿರುವ ಜನರಿಗಿಂತ ಸ್ವಯಂಕೃತ ಅಪರಾಧಗಳಿಂದ ಹಿಂದುಳಿದವರೇ ಹೆಚ್ಚು.

– ಆರ್ನಾಲ್ಡ್ ಗ್ಲಾಸೌ

‘ಬದುಕು’ ಎಂಬ ಕಾಲೇಜು

– ಮಂಜುನಾಥ.ಎಚ್

ಕೃಷಿ ಭೂಮಿಯ ಅವನತಿ, ನೀರಿನ ಮಿತಿಮೀರಿದ ಬಳಕೆ, ವಿಷ ರಾಸಾಯನಿಕಗಳ ಬೇಜವಾಬ್ದಾರಿಯುತ ಉಪಯೋಗ, ಪರಿಸರಕ್ಕೆ ಹಾನಿಯುಂಟುಮಾಡುವ ಪ್ರವಾಸೋದ್ಯಮ ಮತ್ತು ಶಕ್ತಿಯ ಅತಿಶಯವಾದ ಉತ್ಪಾದನೆ ಇವೆಲ್ಲವೂ ಹವಾಮಾನ ಬದಲಾವಣೆಗೆ ಕಾರಣವಾಗಿದೆ. ಜೊತೆಗೆ ರೈತರ, ಕುಶಲಕರ್ಮಿಗಳ, ಸ್ಥಳೀಯ ಸಮುದಾಯಗಳ ಹಾಗೂ ಅಸಂಘಟಿತ ಕಾರ್ಮಿಕರ ದುರವಸ್ಥೆ ಹಾಗೂ ದಾರಿದ್ರ್ಯಕ್ಕೂ ಕಾರಣವಾಗಿದೆ. ಪರಿಸರ ಶ್ರೀಮಂತ ಜೀವನೋಪಾಯದ ಪದ್ಧತಿಗೋಸ್ಕರ ವಿವಿಧ ಆಯಾಮಗಳಲ್ಲಿ ಸವಾಲುಗಳನ್ನು ಎದುರಿಸಬೇಕಾದ್ದು ಅಗತ್ಯ. **‘ಬದುಕು’** ಪರಿಹಾರದ ಸಾಧ್ಯತೆಗಳನ್ನು ಅನ್ವೇಷಿಸುವಲ್ಲಿ ಒಂದು ಪುಟ್ಟ ಹೆಜ್ಜೆ ಮಾತ್ರ.

ಯುವಕರೊಂದಿಗೆ ಕೆಲಸ ಮಾಡಿ ೨೧ ವರ್ಷಗಳ ಇತಿಹಾಸವಿರುವ ಸಂವಾದ ಸಂಸ್ಥೆಯು ಪ್ರಾಯೋಜಿಸುತ್ತಿರುವ ಜೀವನಕೌಶಲ್ಯ ಹಾಗೂ ಜೀವನೋಪಾಯಗಳನ್ನು ಕಲಿಸುವ ಕಾಲೇಜೇ ‘ಬದುಕು’. ಬೆಂಗಳೂರಿನ ನಗರದಂಚಿನ ಪ್ರದೇಶದ ಯುವಕರು, ಪ್ರಮುಖವಾಗಿ ದಲಿತ ಯುವಕರು ಎದುರಿಸುತ್ತಿರುವ ಸಾಮಾಜಿಕ ಬಹಿಷ್ಕರಣೆ ಮತ್ತು ಆರ್ಥಿಕ ತುಷ್ಟೀಕರಣಗಳಿಗೆ ಸಂಬಂಧಿಸಿದಂತೆ ಎರಡು ವರ್ಷಗಳ ಕಾಲ ನಡೆದ ಚರ್ಚೆಯ ಫಲಿತಾಂಶವೇ ಈ ಕಾಲೇಜು. ಈ ಉಪಕ್ರಮದಲ್ಲಿ, ಸುಸ್ಥಿರ ಜೀವನೋಪಾಯಗಳನ್ನು ಕಟ್ಟಿಕೊಳ್ಳಲು ಸಹಾಯ ಮಾಡುತ್ತೇವೆ. ಬದುಕಿನಲ್ಲಿ ಎದುರಾಗುವ ಪರಿಸರ ಮತ್ತು ಸಾಮಾಜಿಕ ವಿವಾದಗಳಿಗೆ ಪರ್ಯಾಯ ತಂತ್ರಜ್ಞಾನಗಳು ಮತ್ತು ಬೋಧನೆಗಳ ಮೂಲಕ ಗುರಿಯನ್ನು ಹುಡುಕಿಕೊಂಡು ಹೋಗಬಲ್ಲ ಸಾಹಸಿಗರನ್ನಾಗಿ ಮಾಡುತ್ತೇವೆ.

ಇಂದಿನ ಪ್ರಮುಖವಾದ ಸಾಮಾಜಿಕ ಮತ್ತು ಪರಿಸರಯುಕ್ತ ಸವಾಲುಗಳನ್ನು ಉದ್ದೇಶಿಸಿ, ಅರ್ಥವಾತ್ತಾದ ಜೀವನೋಪಾಯಯಿಗಳನ್ನು ರೂಪಿಸುವ ಪ್ರಯತ್ನವೇ ‘ಬದುಕು’. ಯುವಜನರಿಗೆ, ಅವರ ಆಸಕ್ತಿಯೊಂದಿಗೆ ಸೃಜನಾತ್ಮಕ ಮತ್ತು ಗೌರವದಾಯಕ ಉದ್ಯೋಗದಿಂದ ಕೂಡಿದ ಮಾರ್ಗವೊಂದನ್ನು ಬದುಕು ಕಾಲೇಜು ಪ್ರಸ್ತಾಪಿಸುತ್ತದೆ. ಈ ಅನನ್ಯವಾದ ಕಾಲೇಜು. ‘ಪರ್ಯಾಯ ಜೀವನೋಪಾಯ’ ಎನ್ನುವ ಕೋರ್ಸನ್ನು ನಡೆಸುತ್ತಿದೆ. ಈ ಕೋರ್ಸ್‌ನಲ್ಲಿ ಪಾಲ್ಗೊಳ್ಳುವ ಯುವಕರು ಸುಸ್ಥಿರ ಜೀವನೋಪಾಯಗಳನ್ನು ಕಟ್ಟಲು ಪರ್ಯಾಯ ತಂತ್ರಜ್ಞಾನಗಳನ್ನು/ ದೃಷ್ಟಿಕೋನಗಳನ್ನು ಉಪಯೋಗಿಸುತ್ತಾರೆ. ಕಳೆದ ಮೂರು ವರ್ಷಗಳಲ್ಲಿ ನಾವು ಸುಸ್ಥಿರ ಕೃಷಿ, ಪಟ್ಟಣದ ಮಳೆ ನೀರು ಸಂಗ್ರಹದ ಉಪಾಯಗಳು, ಸಾಮಾಜಿಕ ಬದಲಾವಣೆಗೋಸ್ಕರ ಶಿಕ್ಷಣ (ಕಾಲೇಜು ಶಿಕ್ಷಕರಿಗಾಗಿ) ಮತ್ತು ಶಿಶು ರಕ್ಷಾ ನಿರ್ವಹಣೆ ಕುರಿತಾದ ಕೋರ್ಸ್‌ಗಳನ್ನು ವಿನ್ಯಾಸಗೊಳಿಸಿದ್ದೇವೆ ಮತ್ತು ಸಂಪೂರ್ಣಗೊಳಿಸಿದ್ದೇವೆ.

ಯುವಜನರ ಮನದಲ್ಲಿ ಕೃಷಿ ಎಂದರೆ 'ಗೌರವವಿಲ್ಲದ ಗುಲಾಮಗಿರಿ' ಎನ್ನುವ ಭಾವನೆ ಹೆಚ್ಚುತ್ತಿದೆ. ಪರಿಣಾಮವಾಗಿ ಕೃಷಿ ಕುಟುಂಬದ ಯುವಕರು ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಕೆಲವು ಸಣ್ಣರೈತರು ತಮ್ಮ ಜಮೀನನ್ನು ದೊಡ್ಡ ಜಮೀನುದಾರರಿಗೆ ಗುತ್ತಿಗೆಗೆ ಕೊಡುತ್ತಿದ್ದಾರೆ. ನಮ್ಮ ಸಂಸ್ಥೆಯ 'ಸುಸ್ಥಿರ ಕೃಷಿ ಕೋರ್ಸ್' ಸುಸ್ಥಿರ ಕೃಷಿಯ ಪಿತಾಮಹ ಮಸನೋಬ ಫುಕುವೋಕಾರವರ ಸುಸ್ಥಿರ ಬದುಕಿನ ತತ್ವವನ್ನು ಆಧರಿಸಿದೆ. ಇಂದಿನ ಯುವಕರಿಗೆ ಕೃಷಿ ಕುರಿತು ಸಂಪೂರ್ಣ ಹೊಸ ಮಾರ್ಗವೊಂದನ್ನು ತೋರಿಸುತ್ತದೆ. ಈ ಕೋರ್ಸ್ ಮಾಡಲು ಬಾಹ್ಯ ಒಳಸುರಿಗಳಿಗೆ ಏರುತ್ತಿರುವ ಬೆಲೆ, ಹುಚ್ಚು ಹಿಡಿದ ಮುಂಗಾರು, ಬರಡು ಮಣ್ಣು ಮತ್ತು ಅಸ್ಥಿರ ಮಾರುಕಟ್ಟೆಗಳ ನಡುವೆ ಸಿಕ್ಕಿಬಿದ್ದ ರೈತರ ಅತಿಯಾದ ಸಮಸ್ಯೆಗಳೇ ಕಾರಣ.

೨೦೦೮-೦೯ರಲ್ಲಿ ನಾವು ಈ ಕೋರ್ಸ್ ಪ್ರಾರಂಭಿಸಿದೆವು. ಇದು ೩೦ ದಿನಗಳ ಚಟುವಟಿಕೆಗಳನ್ನೊಳಗೊಂಡ ತರಬೇತಿ ಕಾರ್ಯಕ್ರಮ. ಸಾವಯವ ವಿಧಾನಗಳು, ಮಿಶ್ರ ಬೆಳೆ ಪದ್ಧತಿ, ಮೌಲ್ಯವರ್ಧನೆ ಮತ್ತು ಸಾವಯವ ಸರ್ಟಿಫಿಕೇಟ್ ಮಾಡಿಸುವ ಕ್ರಮಗಳ ಕುರಿತು ಅಗತ್ಯವಾದ ಕೌಶಲ್ಯ ಹಾಗೂ ತಿಳವಳಿಕೆಗಳನ್ನು ನೀಡಿ ಬದಲಾವಣೆಯ ಕಡೆಗೆ ಅವರನ್ನು ಸಜ್ಜುಗೊಳಿಸುವ ಪ್ರಯತ್ನ. ನಮ್ಮ ತರಬೇತಿಯಲ್ಲಿ ಸಾವಯವ ಕೃಷಿಕರು, ಮಾರಾಟ ಮಳಿಗೆಗಳು, ಗ್ರಾಹಕರೊಂದಿಗೆ ಸಂವಾದ ಮತ್ತು 'ಸಾವಯವ ಕೃಷಿಗೆ ಹತ್ತು ಹೆಜ್ಜೆ'ಗಳನ್ನು ಕ್ರಮಬದ್ಧವಾಗಿ ಜಾರಿಗೊಳಿಸುವ ರೀತಿಗಳು ಪ್ರಮುಖವಾಗಿದ್ದವು.

ಅರ್ಧ ಎಕರೆ ಭೂಮಿಯಿರುವ ಕೃಷಿ ಕುಟುಂಬಗಳಿಂದ ಬಂದ ಯುವಕರಿಗೆ ಸುಸ್ಥಿರ ಕೃಷಿ ಪದ್ಧತಿಯ ತರಬೇತಿಯು ಉಪಯುಕ್ತವಾಗಿತ್ತು. ಅದು ಸಣ್ಣ ಹಿಡುವಳಿದಾರರು ಸಹಾ ಹೇಗೆ ಕೃಷಿಯನ್ನು ಒಂದು ಸಮರ್ಥ ಮತ್ತು ಸುಸ್ಥಿರ ಆಯ್ಕೆಯಾಗಿ ಮಾಡಬಹುದು ಎಂಬ ವಿವರಗಳಿಂದ ಕೂಡಿತ್ತು. ಸಾವಯವ ಕೃಷಿಯನ್ನು ಕೃಷಿ ಆಧಾರಿತ ಇನ್ನಿತರ ಕವಲುಗಳೊಂದಿಗೆ ಸೇರಿಸಲಾಗಿತ್ತು. ಸುಸ್ಥಿರ ಕೃಷಿಯ ಪರಿಕಲ್ಪನೆ ಮತ್ತು ಆಚರಣೆಗಳು ಹಾಗೂ ಸಾವಯವ ಕೃಷಿಗೆ ಮಾರ್ಪಾಡಾಗುವಾಗ ಎದುರಾಗುವ ವಾಸ್ತವಗಳನ್ನು ದೀರ್ಘಕಾಲದ ಕಾರ್ಯಯೋಜನೆಯ ಮೂಲಕ ಕಲಿಸಬೇಕಾಗುತ್ತದೆ. ಮುಖ್ಯ ವಿಷಯ ದೊಂದಿಗೆ ಬೆಳೆಗಳ ಮಿಶ್ರಣ, ಕೊಟ್ಟಿಗೆ ಗೊಬ್ಬರ, ದ್ರವಗೊಬ್ಬರ, ಕೈತೋಟ, ಜೈವಿಕ ಪೀಡೆನಾಶಕಗಳು, ಮಣ್ಣಿನ ತೇವಾಂಶ ಮತ್ತು ಫಲವತ್ತತೆ, ನೀರಿನ ಸಂರಕ್ಷಣೆ ಮುಂತಾದ ವಿಷಯಗಳಿಗೆ ಅನ್ವಯಿಸುವ ಕೌಶಲ್ಯ ಹಾಗೂ ತಿಳಿವಳಿಕೆಗಳನ್ನು ಸೇರಿಸಲಾಗಿತ್ತು. ಕೋರ್ಸನ್ನು ೨೪ ದಿನಗಳಿಗೆ ರೂಪಿಸಲಾಗಿತ್ತು. ಸುಮಾರು ಆರು ತಿಂಗಳ ಬೆಳೆಗಳ ಋತುವಿನವರೆಗೂ ವಿಸ್ತರಿಲಾಗುತ್ತಿತ್ತು.

ತರಬೇತಿ ಮುಗಿದ ಮೇಲೆ ನಾವು ರೈತರ ಹೊಲಗಳಿಗೆ ನಿರಂತರವಾಗಿ ಭೇಟಿ ನೀಡಿ, ಅವರನ್ನು ಸಂದರ್ಶಿಸುತ್ತೇವೆ. ನಮ್ಮ ವಿದ್ಯಾರ್ಥಿಗಳನ್ನು ಹಾಗೂ ಅವರ ಮನೆಯವರನ್ನು ಭೇಟಿ ಮಾಡುತ್ತೇವೆ. ತರಬೇತಿಯ ನಂತರದ ಸಹಾಯ ಮತ್ತು ಹೊಲಗಳ ಸಂದರ್ಶನದ ಮೂಲಕ ಪರೀಕ್ಷಣೆ ಹಾಗೂ ಕೃಷಿ ಮಾರ್ಗದರ್ಶನಗಳನ್ನು

ಮಾಡುತ್ತೇವೆ. ಇದು ಸುಸ್ಥಿರ ಕೃಷಿಯ ಕಡೆಗೆ ಸುಲಭವಾಗಿ ಮಾರ್ಪಾಡಾಗಲು ಅನುಕೂಲವಾಗುತ್ತದೆ. ಜೊತೆಗೆ ಆತ್ಮವಿಶ್ವಾಸ ಮತ್ತು ಸ್ಪಷ್ಟತೆ ಮೂಡಲು ಸಹಾಯಕ. ಈ ರೀತಿ ಮಾಡುವುದರಿಂದ ಅವರೊಳಗಿನ ಜ್ಞಾನವನ್ನು ಕೃಷಿಗೆ ಬಳಸಲು ಅವರ ಶ್ರಮವು ಹೆಚ್ಚಲು ನಮ್ಮ ಸಂದರ್ಶನವು ಪ್ರೇರೇಪಣೆ ನೀಡುತ್ತದೆ.

ಉತ್ತಮ ಮಾರಾಟ ಕಲ್ಪಸುವ ಉದ್ದೇಶದಿಂದ ನಾವು ಒಂದು ಅನನ್ಯ ಕಾರ್ಯಕ್ರಮವನ್ನು ಸಂಘಟಿಸಿದೆವು. ಅದೇ 'ಹಸಿರು ಸಂತೆ'. ಇದೊಂದು ಸಾವಯವ ಉತ್ಪನ್ನಗಳ ಗ್ರಾಹಕರು ಸೇರುವ ವೇದಿಕ ಮತ್ತು ಅವಿಗಾಗಿ 'ಸುರಕ್ಷಿತ' ಆಹಾರವನ್ನು ಉತ್ಪಾದಿಸುವ ರೈತರೊಂದಿಗಿನ ಸಮ್ಮಿಲನ. ಹಸಿರು ಸಂತೆಯನ್ನು ಈ ಕೆಳಗಿನ ವಿಚಾರಗಳೊಂದಿಗೆ ಯೋಜಿಸಲಾಗಿತ್ತು.

೧. ಸುರಕ್ಷಿತ ಮತ್ತು ಆರೋಗ್ಯಕರ ಆಹಾರ ಒದಗಿಸುವುದು.

೨. ಪರಿಸರಸ್ನೇಹಿ ಉತ್ಪಾದನಾ ಆಚರಣೆಗಳಿಗೆ ಉತ್ತೇಜನ

೩. ಮಧ್ಯವರ್ತಿಗಳ ನಿಯಂತ್ರಣ ಮತ್ತು ರೈತರಿಗೆ ಉತ್ತಮ ಬೆಲೆಯನ್ನು ದೊರಕಿಸಿಕೊಡುವುದು.

೪. ವಿಶ್ವಾಸದ ಸಂಸ್ಕೃತಿಯ ನಿರ್ಮಾಣ

೫. ಗ್ರಾಹಕರಿಗೆ ಅವರ ಆಹಾರದ ಉತ್ಪಾದಕರನ್ನು ಅರಿಯುವ ಅವಕಾಶ ದೊರಕಿಸಿಕೊಡುವ ಮೂಲಕ ಗ್ರಾಹಕ ಹಕ್ಕುಗಳ ಪ್ರತಿಪಾದನೆ

೬. ಆಹಾರ ಉತ್ಪಾದನೆ ಮತ್ತು ಹಂಚಿಕೆಯನ್ನು ಸ್ಥಳೀಯವಾಗಿ ಕೈಗೊಳ್ಳುವುದು.

ತಿಂಗಳಿಗೊಮ್ಮೆ ಹಸಿರು ಸಂತೆಯನ್ನು ಸಂಘಟಿಸಲಾಗುತ್ತದೆ. ಸಂವಾದ ಸಂಸ್ಥೆಯ ಐವರು ರೈತರು ಈ ಸಂತೆಯಲ್ಲಿ ನಿರಂತರವಾಗಿ ಭಾಗವಹಿಸುತ್ತಿದ್ದಾರೆ. ಹಸಿರು ಸಂತೆಗೆ ಸಾವಯವ ಉತ್ಪನ್ನಗಳನ್ನು ನೀಡುತ್ತಿದ್ದಾರೆ. ನಮ್ಮ ರೈತರು ವೈವಿಧ್ಯಮಯ ಸಾವಯವ ತರಕಾರಿಗಳು ಮತ್ತು ಆಹಾರಗಳನ್ನು ಮಾರುತ್ತಾರೆ. ಆಹಾರದ ಉತ್ಪನ್ನಗಳಲ್ಲಿ ಬೆಳಗಿನ ತಿಂಡಿಯ ಧಾನ್ಯಗಳು, ಉಪ್ಪಿನಕಾಯಿ, ಹಿಟ್ಟು, ಗಿಡಮೂಲಿಕೆಗಳ ನೋವು ನಿವಾರಕ ಔಷಧಿಗಳು, ಕರುಧಾನ್ಯಗಳು, ಕುರುಕಲು ತಿಂಡಿಗಳು, ಪಾನೀಯಗಳು, ಕಾಂಪೋಸ್ಟ್, ಮೊಟ್ಟೆಗಳು... ಹೀಗೆ ಏನೆಲ್ಲಾ ಇವೆ. ಎಲ್ಲಾ ಉತ್ಪನ್ನಗಳೂ ಕಠಿಣವಾದ ಅಸಾಮಾನ್ಯ ಶಿಫಾರಸು ಪ್ರಕ್ರಿಯೆಯ ಮೂಲಕ ರೈತರಿಂದ ಶಿಫಾರಸ್ಸು ಮಾಡಲಾಗಿದೆ. ಈ ಪ್ರಕ್ರಿಯೆಗೆ ಪಿ.ಜಿ.ಎಸ್. ಅಂದರೆ ಪಾರ್ಟಿಸಿಪೇಟರಿ ಗ್ಯಾರಂಟಿ ಸ್ಕೀಮ್ ಎಂದು ಕರೆಯಲಾಗುತ್ತದೆ.

ಅನೇಕ ಯುವರೈತರು ಕೋರ್ಸಿನ ಅವಧಿಯಲ್ಲಿ ಕಲಿತ ಜ್ಞಾನವನ್ನು ತಮ್ಮ ಹೊಲಕ್ಕೆ ಅಳವಡಿಸಿದರು ಮತ್ತು ತುಂಬಾ ಚೆನ್ನಾಗಿ ಮಾಡಿದರು. ಚಟುವಟಿಕೆಗಳಿಂದ ಕೂಡಿದ ತರಬೇತಿಯಿಂದಾಗಿ ಅವರು ಶೇಕಡಾ ೨೪.೭೮ರಷ್ಟು ಸುಸ್ಥಿರತೆಯನ್ನು ಸಾಧಿಸಿದರು. ತರಬೇತಿಯ ಮೊದಲು ಹಾಗೂ ಕೊನೆಯಲ್ಲಿ ತರಬೇತಿ ಪಡೆಯುವವರ ಕೃಷಿಕ್ಷೇತ್ರದ ಕೃಷಿ ಸುಸ್ಥಿರತೆಯನ್ನು ಮೌಲ್ಯಮಾಪನ ತರಬೇತಿಯ ಮೊದಲು ಶೇಕಡಾ ೩೨.೪೨ ಇತ್ತು. ತರಬೇತಿಯ ಬಳಿಕ ಶೇಕಡಾ ೫೭.೧೪ಕ್ಕೆ ಏರಿತ್ತು.

ಈಗ ಅನೇಕ ಯುವರೈತರು ತಮ್ಮ ಕೃಷಿಕ್ಷೇತ್ರದಲ್ಲಿ ಈ ಜ್ಞಾನವನ್ನು

ಕೈಗೊಳ್ಳುತ್ತಿದಾರೆ. ಉದಾಹರಣೆಗೆ ಸುರೇಂದ್ರರವರು ಭತ್ತ ಹಾಗೂ ರಾಗಿ ಬೆಳೆಗಳೊಂದಿಗೆ ಕೃಷಿ ಪ್ರಾರಂಭಿಸಿದರು. ಅವರು ೧೫ ಪ್ರಭೇದಗಳ ಭತ್ತ ಹಾಗೂ ಎರಡು ಪ್ರಭೇದಗಳ ರಾಗಿಯನ್ನು ಬೆಳೆದು. ಕೊನೆಯಲ್ಲಿ ಐದು ಪ್ರಭೇದಗಳ ಭತ್ತ ಹಾಗೂ ಒಂದು ರಾಗಿ ಪ್ರಭೇದವು ಅವರ ಹೊಲದ ಪರಿಸ್ಥಿತಿಗೆ ಹೊಂದಿಕೊಂಡಿರುವುದನ್ನು ಗುರುತಿಸಲಾಯಿತು. ಅವರು ಮೊಲ ಸಾಕಾಣಿಕೆ, ಎರೆಗೊಬ್ಬರ ತಯಾರಿಕೆ ಮತ್ತು ಅಜೋಲಾ ಬೆಳೆಯಲು ಸಹಾ ಪ್ರಾರಂಭಿಸಿದರು. ಈಗ ಸುರೇಂದ್ರರವರು ಇನ್ನಿತರ ರೈತರೊಂದಿಗೂ ಸಹ ಕೆಲಸ ಮಾಡುತ್ತಿದ್ದಾರೆ.

ಈಗ ಈ ಕಾರ್ಯಕ್ರಮವು ಪ್ರಭಾವಿ ಮಾದರಿಯಾಗಿ ಒಂದು ಕೋರ್ಸ್ ಆಗಿರದೇ ಪದವಿಯಾಗಿದೆ. ತರಬೇತಿ ಪಡೆದವರು ತಮ್ಮ ಹಳ್ಳಿಯ ಇನ್ನಿತರ ಯುವ ಕೃಷಿಕರನ್ನು ಕ್ರಿಯಾಶೀಲರನ್ನಾಗಿ ಮಾಡುತ್ತಿದ್ದಾರೆ. ಯಾರಾದರೊಬ್ಬರ ಕೃಷಿ ಕ್ಷೇತ್ರದಲ್ಲಿ ಯುವ ಗುಂಪುಗಳಿಗೆ ತರಬೇತಿಯನ್ನು ನೀಡುತ್ತಿದ್ದಾರೆ. ನಮ್ಮ ತರಬೇತಿ ಕಾರ್ಯಕ್ರಮದಲ್ಲಿ ಅವರು ರೈತ ಸಲಹೆಗಾರರಾಗಿ ಕೆಲಸ ಮಾಡುತ್ತಿದ್ದಾರೆ.

ಭವಿಷ್ಯದ ಭರವಸೆ

೧. ನಾನೊಬ್ಬ ಸಾವಯವ ಕೃಷಿಕನಾಗಿದ್ದಕ್ಕೆ ನನಗೆ ಹೆಮ್ಮೆಯಿದೆ.

೨. ಸುಸ್ಥಿರವಾದ ಇಳುವರಿಯನ್ನು ಪಡೆಯಲು ನಾನೀಗ ಯಶಸ್ವಿಯಾಗಿದ್ದೇನೆ.

೩. ಗಿಡಮೂಲಿಕೆಗಳ ಔಷಧಿಗಳನ್ನು ಮಾರಿ ನಾನು ಒಂದೂವರೆ ಲಕ್ಷ ರೂಪಾಯಿಗಳನ್ನು ಗಳಿಸಿದೆ ಮತ್ತು ನನ್ನ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಒದಗಿಸಿದೆ.

೪. ನಾನು ನನ್ನ ಭೂಮಿಯನ್ನು ಮಾರಲಿಲ್ಲ. ಅದನ್ನು ಸಾವಯವ ಕೃಷಿಕ್ಷೇತ್ರವನ್ನಾಗಿ ಬದಲಾಯಿಸಿದೆ.

೫. ಸ್ಥಳೀಯ ಬೀಜಗಳ ವಿನಿಮಯಕ್ಕೋಸ್ಕರ ನಾನು ಸಮುದಾಯ ಬೀಜ ಬ್ಯಾಂಕ್‌ನ್ನು ಪ್ರಾರಂಭಿಸುತ್ತೇನೆ.

ಇವೆಲ್ಲಾ ಯುವಕೃಷಿಕರು ಕೇವಲ ತಮ್ಮದೊಂದೇ ಕೃಷಿಕ್ಷೇತ್ರದಲ್ಲಿ ಸಾವಯವ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿಲ್ಲ. ಊರಿನ ಇನ್ನಿತರರನ್ನೂ ಪ್ರೇರೇಪಿಸುವ ಕೆಲಸ ಮಾಡುತ್ತಿದ್ದಾರೆ. ನಮ್ಮ ಶ್ರಮ ಕೇವಲ ಪ್ರಾರಂಭಿಸುವುದು ಮಾತ್ರ, ಇದು ವಿಸ್ತಾರವಾಗಿ ಹರಡುತ್ತದೆ ಎಂಬ ಭರವಸೆ ನಮಗಿದೆ. ಈ ಮೂಲಕ ನಮ್ಮ ಪರಿಸರವನ್ನು ಮತ್ತು ಜನರನ್ನು ರಕ್ಷಿಸುತ್ತದೆ ಎಂಬ ಭರವಸೆಯೂ ನಮಗಿದೆ.

ಸಂಪರ್ಕ ವಿಳಾಸ:-

ಮಂಜುನಾಥ ಎಚ್.
ಕಾರ್ಯಕ್ರಮ ಸಂಯೋಜಕ
ಸಂವಾದ ಬದುಕು ಕಾಲೇಜು
ಕೆಂಪೇಗೌಡ ವೃತ್ತ, ಐಜೂರು
ರಾಮನಗರ
ಕರ್ನಾಟಕ

(ಸಾಭಾರ : ಲೀಸಾ ಇಂಡಿಯಾ)

ಜನಪದ ಸೇವಾ ಟ್ರಸ್ಟ್ ಸಮಾಚಾರ

೨೦೧೩ ಜೂನ್ ೧ ರಂದು ಟ್ರಸ್ಟಿನ ಕಾರ್ಯಕಾರಿ ಸಮಿತಿ ಸಭೆ ಮೈಸೂರಿನಲ್ಲಿ ಡಾ॥ ಮನೋಹರ್ ಅಧ್ಯಕ್ಷತೆಯಲ್ಲಿ, ಧರ್ಮದರ್ಶಿ ಜರ್ನಾರ್ಧನ್‌ರವರ ಸ್ವಗೃಹದಲ್ಲಿ ನಡೆಯಿತು. ಸಭೆಯಲ್ಲಿ ಧರ್ಮದರ್ಶಿಗಳಾದ ಶ್ರೀ ಅಲೋಕ, ಶೀಲವಂತ್ ಗಿರಿಜಾ ಕೌಲಗಿ, ಸುರೇಂದ್ರ ಕೌಲಗಿಯವರು ಹಾಜರಿದ್ದರು. ಕಾರ್ಯದರ್ಶಿ ಸಂತೋಷ ಕೌಲಗಿಯವರು ಕಳೆದ ಸಭೆಯ ನಡವಳಿಕೆಗಳನ್ನು ಅವುಗಳ ಅನುಷ್ಠಾನಗೊಂಡ ಬಗ್ಗೆಯೂ ಮತ್ತು ಕಳೆದ ಅವಧಿಯಲ್ಲಿ ಆದ ಕೆಲಸದ ಬಗ್ಗೆ ವರದಿಯನ್ನು ಕೊಟ್ಟರು.

ದತ್ತು ಕೇಂದ್ರದಲ್ಲಿ ಕೆಲವು ಸುಧಾರಣೆಗಳನ್ನು ಮಾಡಲಾಯಿತು. ಕೇಂದ್ರಕ್ಕೆ ಹೊಸ ಹೆಣ್ಣು ಮಗುವೊಂದು ಸೇರ್ಪಡೆಯಾಯಿತು. ಆ ಮಗುವಿಗೆ 'ಸುಚೇತನಾ'ಎಂದು ನಾಮಕರಣ ಮಾಡಲಾಗಿದೆ. ಈ ಮೊದಲು ಕೇಂದ್ರದಲ್ಲಿ ಆಶ್ರಯ ಮತ್ತು ಆರೈಕೆ ಪಡೆಯುತ್ತಿದ್ದ 'ಲೋಕಮಾತಾ' ಎಂಬ ಹೆಣ್ಣು ಮಗುವನ್ನು ಬೆಂಗಳೂರಿನ ನಿವಾಸಿಗಳೊಬ್ಬರಿಗೆ ದತ್ತು ಕೊಡಲಾಯಿತು. ದತ್ತು ಸ್ವೀಕರಿಸಲ್ಪಟ್ಟಿದ್ದ ಶ್ರಾವಣಿ ಎಂಬ ಮಗುವಿಗೆ ಒಂದು ವರ್ಷ ತುಂಬಿತೆಂದು ಆ ಮಗುವಿನ ದತ್ತು ತಂದೆ ತಾಯಿಗಳು ಬಹಳ ಸಂತೋಷದಿಂದ ಮೇಲುಕೋಟೆಯಲ್ಲಿರುವ ದತ್ತು ಕೇಂದ್ರಕ್ಕೆ ಕರೆದುಕೊಂಡು ಬಂದು ತಮ್ಮ ಸಂತೋಷ ಹಂಚಿಕೊಂಡರು ಹಾಗು ಮೈಸೂರಿನಲ್ಲಿ ತಮ್ಮೆಲ್ಲ ಮಿತ್ರರಿಗಾಗಿ ಸಮಾರಂಭವನ್ನು ಏರ್ಪಡಿಸಿದ್ದರು.

ಬೆಂಗಳೂರಿನಲ್ಲಿರುವ 'ರಚಾ' ಎಂಬ ಸಂಸ್ಥೆಯು ಖಾದಿಬಟ್ಟೆ ಮತ್ತು ಖಾದಿ ಸೀರೆಯನ್ನು ನೇಯ್ಗೆ ಮಾಡಿಸಿಕೊಂಡರು. ೨೦೧೩ ಜುಲೈ ತಿಂಗಳಲ್ಲಿ ಎಂಟು ಮಗ್ಗಗಳಿಂದ ಸುಮಾರು ೬೦೦ ಮೀಟರ್ ಖಾದಿಬಟ್ಟೆ ತಯಾರಾಯಿತು. ಸವಿತಾ ಎಂಬ ನೇಕಾರ್ತಿ ತನ್ನ ನೇಯ್ಗೆ ಕೆಲಸದ ಮೂಲಕ ೫೦೦೦ ರೂಪಾಯಿಗಳಷ್ಟು ಮತ್ತು ಇನ್ನೊರ್ವ ನೇಕಾರ್ತಿ ವಿಜಯಾರವರು ೪೦೦೦ ರೂಪಾಯಿಯಷ್ಟು ಮಜೂರಿಯನ್ನು ಪಡೆದಿದ್ದಾರೆ.

ಹೊಸ ಜೀವನ ದಾರಿ ಕೇಂದ್ರದಲ್ಲಿ ಖಾದಿದಾರಕ್ಕೆ ಸಾವಯವ ಬಣ್ಣ ಹಾಕುವ ಮನೆಯನ್ನು ಹೆಚ್ಚು ಸುಸಜ್ಜಿತ ಗೊಳಿಸಲಾಯಿತು.

ಕಳೆದ ಜೂನ್ ತಿಂಗಳಲ್ಲಿ ಜನಪದ ಸೇವಾ ಟ್ರಸ್ಟ್ ಆವರಣದಲ್ಲಿ ಕರ್ನಾಟಕ ಸರ್ವೋದಯ ಮಂಡಲಿಯ ಕಾರ್ಯಕಾರಿ ಸಮಿತಿ ಸಭೆ ನಡೆಯಿತು.

ಇಬ್ಬರು ಯುವ ವಿದ್ಯಾರ್ಥಿಗಳು ಧೃವ ಮತ್ತು ಈವೋಶ್ ಮೈಸೂರಿನಿಂದ ಸೈಕಲ್ ಮೇಲೆ ಟ್ರಸ್ಟಿಗೆ ಬಂದರು. ಪರಿಸರ ವಿಷಯವಾಗಿ ಅವರಲ್ಲಿ ಕಾಳಜಿ ಇದೆ ಮತ್ತು ನಾಡನ್ನು ನೋಡುವ ಆಸಕ್ತಿಯಿದೆ. ಅವರು ಇದೇ ರೀತಿ ಆಗಾಗ್ಗೆ ಬೇರೆ ಪ್ರೇಕ್ಷಣಿಯ ಸ್ಥಳಗಳಿಗೂ ಹೋಗುವುದುಂಟು.

ಜನಪದ ನಿಲಯದ ಅಂತರಂಗದಲ್ಲಿ.. ೧೧೫

– ಸುರೇಂದ್ರ ಕೌಲಗಿ



ಅತ್ತ ಲೋಕಸಭೆಯಲ್ಲಿ ಕೇಂದ್ರ ಸರ್ಕಾರ ಸುಮಾರು ೮೦ ಕೋಟಿ ಜನರಿಗಾಗಿ ಆಹಾರ ಭದ್ರತಾ ಯೋಜನೆ ಮಂಡಿಸುತ್ತಿದ್ದಾಗ ಇತ್ತ 'ಜನಪದ ನಿಲಯದ' ಹಿತ್ತಲಲ್ಲಿ ಕಳೆದ ಹದಿನೆಂಟು ವರ್ಷಗಳಿಂದ ನಡೆದುಕೊಂಡು ಬರುತ್ತಿದ್ದ ಸರ್ವೋದಯ ದೃಷ್ಟಿಯ ಆಹಾರ ಭದ್ರತಾ ಕಾರ್ಯಕ್ರಮ ನೆನೆಗುದಿಗೆ ಬಿದ್ದಿತು. ಈ ಕಾರ್ಯಕ್ರಮದ ಫಲಾನುಭವಿಗಳಾದ ಹದಿನೈದು ವೃದ್ಧ ಹಾಗೂ ಉದಾಸೀನಕ್ಕೊಳಗಾದ ಮಹಿಳೆಯರು ಅತಂತ್ರಕ್ಕೆ ಒಳಗಾದರು. ಹದಿನೆಂಟು ವರ್ಷಗಳ ಹಿಂದೆ ಆಚಾರ್ಯ ವಿನೋಬಾ ಭಾವೆಯವರ ಆಪ್ತ ಶಿಷ್ಯರಾದ ಬಾಲವಿಜಯ ೨೬–೦೨–೧೯೯೬ ರಂದು ಮೇಲುಕೋಟೆಯಲ್ಲಿ ಸರ್ವೋದಯ ಪಾತ್ರೆ ಆಂದೋಲವನ್ನು ಉದ್ಘಾಟಿಸಿದರು. ಆ ಸಮಯದಲ್ಲಿ ಮೇಲುಕೋಟೆಯಲ್ಲಿ ೭೮ ಮನೆಯಲ್ಲಿ ಸರ್ವೋದಯ ಪಾತ್ರೆಯನ್ನು ಇರಿಸಲಾಗಿತ್ತು. ಸರ್ವೋದಯ ಪಾತ್ರೆಯ ವಿಚಾರವನ್ನು ವಿನೋಬ ಭಾವೆಯವರು ತಮ್ಮ ಭೂದಾನ ಆಂದೋಲನದ ಸಂದರ್ಭದಲ್ಲಿ ದೇಶದ ಮುಂದೆ ಇಟ್ಟರು. ಸರ್ವೋದಯ ಪಾತ್ರೆಯ ಬಗ್ಗೆ ವಿನೋಬಾ ಹೇಳಿದ ಈ ಕೆಳಗೆ ಕಾಣಿಸಿದ ವಿಚಾರ ಗಮನಿಸುವಂತಹದಾಗಿದೆ "ಸರ್ವೋದಯ ಪಾತ್ರೆ ಯೋಜನೆಯಿಂದ ನಮಗೆ ಶಕ್ತಿಯೂ ಸಾಮೂಹಿಕ ಪುರುಷಾರ್ಥದ ಶಿಕ್ಷಣವೂ ದೊರೆಯುವುದು. ಜನತೆಯ ಸಾಮೂಹಿಕ ಪುರುಷಾರ್ಥ ಆಗುವವರೆಗೆ ಯಾವ ಸರ್ಕಾರಿ ಯೋಜನೆಯೂ ಸಫಲವಾಗುವುದಿಲ್ಲ. ಕೆಲಸ ಸಣ್ಣದೆ ಆದರೂ ಅದನ್ನು ಎಲ್ಲರೂ ಕೂಡಿ ಮಾಡಿದರೆ ಸಾಮೂಹಿಕ ಪರುಷಾರ್ಥ ಆಗುವುದು".

ಆದರೆ ಈಗ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು 'ಅನ್ನಭಾಗ್ಯ' ಎಂಬ ಹೆಸರಿನಲ್ಲಿ ಸಮಾಜದಲ್ಲಿರುವ ಕಡುಬಡವರಿಗೆ ಅತ್ಯಂತ ಕಡಿಮೆ ದರದಲ್ಲಿ ಧಾನ್ಯವನ್ನು ಕೊಡುವ ಯೋಜನೆ ಪ್ರಾರಂಭಿಸಿವೆ. ಆದ್ದರಿಂದ ಸಮಾಜದಿಂದಲೆ ಸಮಾಜಕ್ಕಾಗಿ ನಡೆಯುತ್ತಿದ್ದ ಸರ್ವೋದಯ ಪಾತ್ರೆ ಆಂದೋಲನ ಸ್ಥಗಿತ ಗೊಳ್ಳುವಂತಹ ಪರಿಸ್ಥಿತಿ ಉಂಟಾಗಿದೆ. ಈ ಯೋಜನೆಯನ್ನು ಮುಂದುವರೆಸುವ ಬಗ್ಗೆ ಫಲಾನುಭವಿಗಳನ್ನು ಕೇಳಿದಾಗ ಅವರು ತಮ್ಮ ನಿಃಸಹಾಯಕತೆಯನ್ನು ವ್ಯಕ್ತಪಡಿಸಿದರು. ಅವರ ಪ್ರಕಾರ ಅವರಿಗೆ ಇನ್ನೂ ಪಡಿತರ ಚೀಟಿ ದೊರೆತಿರುವುದಿಲ್ಲ. ದೊರೆಯುವುದು ಕಷ್ಟಕರವಾಗಿದೆ. ಸರಕಾರದ ಆ ಯೋಜನೆಗಿಂತ ಸರ್ವೋದಯ ಪಾತ್ರೆಯ ಆಂದೋಲನದ ಮೂಲಕ ದೊರೆಯುತ್ತಿರುವ ಧಾನ್ಯವೆ ತಮಗೆ ಹೆಚ್ಚು ವಿಶ್ವಸನೀಯ ಮತ್ತು ಸುಲಭವಾಗಿ ಸಿಗುವಂತಹದ್ದಾಗಿದೆ ಎಂದು ಹೇಳಿದರು. ಸರ್ಕಾರದ ಆಹಾರ ಭದ್ರತಾ ಯೋಜನೆಯಲ್ಲಿ ಸಾಮಾಜದ ಒಟ್ಟು ಹಿತದ ಯಾವುದೆ

ವಿಚಾರವಿಲ್ಲ. ಬಡವರಿಗೆ ಧಾನ್ಯ ಕೊಡುವ ವಿಚಾರ ಮಾತ್ರ ಇದೆ. ಅದೂ ರಾಜಕೀಯ ಉದ್ದೇಶ ಪ್ರೇರಿತ ಆಗಿದೆ. ಆದ್ದರಿಂದ ಆಹಾರ ಭದ್ರತಾ ಯೋಜನೆ ಒಂದು ಸರ್ಕಾರಿಯ ಕಾರ್ಯಕ್ರಮವಾಗಬಹುದೇ ಹೊರತು ಸಮಾಜ ಪರಿವರ್ತನೆಯ, ಸಮಾನತೆಯ ವಿಚಾರ ತರುವ ಕಾರ್ಯಕ್ರಮ ವಾಗಲಾರದು. ಸರ್ವೋದಯ ಪಾತ್ರೆ ಇಟ್ಟಿರುವಂಥಹ ಜನರಿಗೆ ಅದರ ಹಿಂದೆ ಇರುವ ವ್ಯಾಪಕ ವಿಚಾರದ ಆಯಾಮಗಳನ್ನು ತಿಳಿಸಲು ಪ್ರತಿತಿಂಗಳಿಗೊಮ್ಮೆ "ಸರ್ವೋದಯ ಪಾತ್ರೆ ವಾರ್ತಾ" ಎಂಬ ಪತ್ರಿಕೆಯನ್ನು ಸಹ ಹೊರಡಿಸಲಾಗುತಿತ್ತು.

ಸರ್ವೋದಯ ಪಾತ್ರೆ ಆಂದೋಲನಕ್ಕೆ ಸಂಬಂಧಿಸಿದಂತೆ ಪಂಚತತ್ವಗಳು ಇಂತಿವೆ:-

೧) ಸತ್ಯ-ಅಹಿಂಸೆಗಳ ಆಧಾರದ ಮೇಲೆ ಶಾಂತಿ-ಸಮತೆಯ ಸಮಾಜ ಸ್ಥಾಪಿಸಲು ತ್ಯಾಗ-ಧರ್ಮದ ಕಾರ್ಯಕ್ರಮ ಸರ್ವೋದಯ ಪಾತ್ರೆ.

೨) ನಮಗಿಂತ ಕಷ್ಟದಲ್ಲಿರುವ ದೀನ ದುಃಖಿತರ ಬಗೆಗೆ ಬಾಲ್ಯದಿಂದಲೂ ಅನುಕಂಪ ಉಂಟುಮಾಡುವುದು ಸರ್ವೋದಯ ಪಾತ್ರೆ;

೩) "ದುಃಖ ಹಂಚಿಕೊಂಡರೆ ತಾಪ ಕಳೆವುದು, ಸುಖ ಹಂಚಿಕೊಂಡರೆ ಸ್ವಾದ ಬೆಳೆವುದು" ಎಂಬ ತತ್ವವನ್ನು ಜನತೆಗೆ ಕಲಿಸುವುದು ಸರ್ವೋದಯ ಪಾತ್ರೆ;

೪) ಬಡವ-ಬಲ್ಲಿದ ವ್ಯತ್ಯಾಸವೇ ಇಂದಿನ ಸಮಾಜದಲ್ಲಿ ಬೆಳೆದಿರುವ ಎಲ್ಲ ದುರಾಚಾರಗಳಿಗೂ ಮೂಲ ಕಾರಣ ಮತ್ತು ಅದನ್ನು ಕೊನೆಗಾಣಿಸಲು ಅಹಿಂಸಾತ್ಮಕ ಕಾರ್ಯಕ್ರಮ ಸರ್ವೋದಯ ಪಾತ್ರೆ;

೫) ಚಿಕ್ಕಂದಿನಿಂದ ಮಾನವ ಸಹಜ ಸಂಸ್ಕಾರಗಳಾದ ತ್ಯಾಗ, ದಾನ, ಸಮಾನತೆಗಳಂತಹ ಉದಾತ್ತ ತತ್ವಗಳ ಪರಿಪಾಲನೆ ಮಾಡುತ್ತಾ ಸರ್ವಸಮಾನ, ಸರ್ವರ ಏಳಿಗೆ ಅರ್ಥಾತ್ ಸರ್ವೋದಯವನ್ನು ಸಾಧಿಸಲು ಸರಳ ಕಾರ್ಯಕ್ರಮ ಸರ್ವೋದಯ ಪಾತ್ರೆ.

ಸರ್ವೋದಯ ಪಾತ್ರೆ ಇಟ್ಟಿದ್ದಂತಹವರ ಮನೆಯಲ್ಲಿ ಆ ಮನಯ ಚಿಕ್ಕ ಮಗು ಸಮಾಜದ ಹಿತಕ್ಕಾಗಿ ತನ್ನ ಪಾಲಿನ ಒಂದು ಮುಷ್ಠಿ ಅಕ್ಕಿಯನ್ನು ಸರ್ವೋದಯ ಪಾತ್ರೆಯಲ್ಲಿ ಹಾಕುವ ಕ್ರಮವಿತ್ತು. ಹಾಗೆ ಪಾತ್ರೆಯಲ್ಲಿ ಅಕ್ಕಿ ಹಾಕುವಾಗ ಮಗು ಎರಡು ಘೋಷಣೆಗಳನ್ನು ಹೇಳುತಿತ್ತು.
ಒಂದುನೆಯದು, "ಅಕ್ಕಿ ಹಾಕುವ ಕೈ ಇದು ಎಂದೂ ಯಾರನು ಹೊಡೆಯದಿದು", ಎರಡನೇಯದು, "ಜೈ ಜಗತ್ ಹೇಳುವ ಬಾಯಿ ಇದು ಎಂದೂ ಯಾರನು ಬೈಯದಿದು" ಈ ಘೋಷಣೆಗಳ ಮೂಲಕ ಮಗುವಿಗೆ ಇಡೀ ಒಂದು ಸಮಾಜ ಶಾಸ್ತ್ರದ ಶಿಕ್ಷಣವನ್ನು ಕೊಡಲಾಗುತಿತ್ತು. ಹೀಗೆ ಸರ್ವೋದಯ ಪಾತ್ರೆಯ ಆಂದೋಲನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಕಾರ್ಯಕ್ರಮವಾಗಿತ್ತು.

ಜನಪದ ಸೇವಾ ಟ್ರಸ್ಟಿನ ೧೮ ವರ್ಷಗಳ ಹೆಮ್ಮೆಯ ಸಾಮಾಜಿಕ ಪರಿವರ್ತನೆಯ ಈ ಕಾರ್ಯಕ್ರಮ ಸ್ಥಗಿತಗೊಳ್ಳುತ್ತಿರುವುದಕ್ಕೆ ವ್ಯಥೆಯಾಗುತ್ತದೆ.

ಖಾದಿ ವಿಚಾರ

ಹಳ್ಳಿಗಳ ವಿಷಮ ಸ್ಥಿತಿ

"ಈಗಿನ ತುರ್ತು ಸಮಸ್ಯೆ ಎಂದರೆ, ಲಕ್ಷಾಂತರ ಗ್ರಾಮೀಣ ಜನರಿಗೆ ಕೆಲಸ ಮತ್ತು ವೇತನ ಹೇಗೆ ದೊರಕಿಸಿ ಕೊಡುವುದು ಎನ್ನುವುದು. ಹಳ್ಳಿಗಳಿಗೆ ಹೋಗಿ ನೋಡುವ ಕಷ್ಟ ತೆಗೆದುಕೊಳ್ಳುವ ಯಾರಿಗಾದರೂ ತಿಳಿಯುತ್ತದೆ. ವಿಶೇಷಜ್ಞರು ಹೇಳುವುದೂ ಇದನ್ನೇ. ದಿನ ದಿನಕ್ಕೆ ಅವರ ಬಡತನ ಹೆಚ್ಚುತ್ತಿದೆ. ಜನರು ಆರ್ಥಿಕವಾಗಿ ಮಾತ್ರವಲ್ಲ, ಮಾನಸಿಕವಾಗಿಯೂ ಮತ್ತು ನೈತಿಕವಾಗಿಯೂ ಬಡವಾಗುತ್ತಿದ್ದಾರೆ, ಅವರು ತಮ್ಮ ಆಲೋಚನಾ ಶಕ್ತಿ, ಕೆಲಸ ಮಾಡುವ ಹಾಗೂ ಜೀವನ ನಡೆಸುವ ಇಚ್ಛಾಶಕ್ತಿಯನ್ನೂ ಬಹು ವೇಗವಾಗಿ ಕಳೆದುಕೊಳ್ಳುತ್ತಿದ್ದಾರೆ! ಅವರು ಸತ್ತು ಬದುಕಿದ್ದಾರೆ. ಹೀಗಿರುವಲ್ಲಿ ಖಾದಿ ಉದ್ಯೋಗ ಅವರಿಗೆ ಕೆಲಸ ನಿಡುತ್ತಿದೆ, ಉಪಕರಣಗಳನ್ನು ಕೊಡುತ್ತಿದೆ ಮತ್ತು ಅವರ ಉತ್ಪನ್ನಗಳನ್ನು ಕೊಳ್ಳುತ್ತಿದೆ. ಇದರಿಂದ ನಿನ್ನೆ ಹತಾಶರಾಗಿದ್ದ ಅವರಲ್ಲಿ ಇಂದು ಭರವಸೆ ಮೂಡುತ್ತಿದೆ".

"ಖಾದಿ ಅಷ್ಟು ಆಶಾದಾಯಕವಾದದ್ದಾದರೆ, ಏಕೆ ಅದು ಪ್ರಗತಿಯನ್ನೇ ಕಾಣುತ್ತಿಲ್ಲ?"

"ಖಾದಿಯ ಪ್ರಗತಿಯನ್ನು ಲಕ್ಷಾಂತರ ರೂಪಾಯಿಗಳಲ್ಲಿ ಅಳೆದರೆ ಅದು ಹೆಚ್ಚಿರಲಾರದು. ಆದರೆ, ಇನ್ನಾವುದೇ ಉದ್ಯೋಗಕ್ಕೆ ಹೋಲಿಸಿದರೂ ಖಾದಿಯೇ ಅತಿ ದೊಡ್ಡದಾಗಿದೆ. ವಾರ್ಷಿಕವಾಗಿ, ಅತಿ ಹೆಚ್ಚು ಸಂಖ್ಯೆಯ ಜನರಿಗೆ, ಅತಿ ಹೆಚ್ಚಿನ ವೇತನ ವಿತರಣೆ ಮಾಡುತ್ತಿರುವುದು ಖಾದಿ ಉದ್ಯೋಗ. ಈ ಉದ್ಯೋಗದಲ್ಲಿ ಕನಿಷ್ಠ ಮೇಲು ಖರ್ಚಿದ್ದು(Overhead Charges) ಪ್ರತಿಯೊಂದು ಪೈಸೆಯೂ ಜನರ ನಡುವೆಯೇ ವಿನಿಮಯ ಆಗುತ್ತಿದೆ. ಅಖಿಲ ಭಾರತ ನೂಲುವವರ ಸಂಘ (ಅ.ಭಾ.ನೂ.ಸಂ.) ಪ್ರಕಟಿಸುವ ವರದಿಗಳನ್ನು ಯಾರು ಬೇಕಾದರೂ ನೋಡಲಿ. ಇದು ಸ್ಪಷ್ಟವಾಗಿ ತಿಳಿಯುತ್ತದೆ.

"ಖಾದಿ ವಿರುದ್ಧ ಅನೇಕ ಪೂರ್ವಾಗ್ರಹ ಪೀಡಿತ ಅನಿಸಿಕೆಗಳಿವೆ. ಖಾದಿ ಅನೈತಿಕ ಪೈಪೋಟಿಯನ್ನು ಎದುರಿಸುತ್ತಿದೆ. ಇದಕ್ಕೆ ಸರಕಾರದ ಬೆಂಬಲವೂ ಇಲ್ಲ. ಇನ್ನೂ ಅಗ್ಗದ ಖಾದಿ ಬೇಕೆನ್ನುವವರು ಅನೇಕರಿದ್ದಾರೆ. ಆದರೆ ಈ ಕಣ್ಣೀರಿನ ನೆಲದಲ್ಲಿ ಇದರ ನಿಜವಾದ ಆರ್ಥಿಕತೆಯ ಬಗ್ಗೆ ಹಳ್ಳಿಯವರಿಗೂ ಮತ್ತು ನಗರವಾಸಿಗಳಿಗೂ ತಿಳಯ ಹೇಳಬೇಕಾಗಿದೆ". (ಹರಿಜನ್ : ೨-೬-೩೬)

ಪ್ರಶ್ನೆ : ಖಾದಿಯ ಪ್ರತಿಪಾದನೆ ಬಟ್ಟೆಗಿರಣಿಗಳಿಗೆ ಸಹಾಯ ಮಾಡುತ್ತಿದೆಯೇ?

ದೇಶಿ ಮಿಲ್ಲ್‌ಗಳು ಖಾದಿ ವಿರೋಧಿಯಾಗಿಲ್ಲ. ಬದಲಿಗೆ, ವಿದೇಶಿ ವಸ್ತ್ರದ ವಿರೋಧ ಅವರಿಗೆ ಲಾಭವೇ ಆಗಿದೆ, ಅವರ ಒರಟು ಬಟ್ಟೆಗಳು ಹೆಚ್ಚು ಮಾರಾಟವಾಗಿವೆ ಎನ್ನುತ್ತಾರೆ. ಆದರೆ ಖಾದಿಯ ವಿಶೇಷ ಪ್ರತಿಪಾದನೆಯನ್ನು

ನಿಲ್ಲಿಸಿ ಗಿರಣಿ ಬಟ್ಟೆಗಳಿಗೆ ಅವಕಾಶ ನೀಡಿದಿರೋ, ನೀವು ಖಾದಿಯನ್ನು ಕೊಂದು ಬಿಡುವಿರಿ. ನಂತರದಲ್ಲಿ ಮಿಲ್ಲ್‌ಗಳನ್ನೂ ಕೊಂದು ಬಿಡುವಿರಿ. ಏಕೆಂದರೆ, ವಿದೇಶೀ ಬಟ್ಟೆ ಗಿರಿಣಿಗಳೊಡನೆ ಪೈಪೋಟಿಯಲ್ಲಿ ನಮ್ಮ ಗಿರಿಣಿಗಳು ಸೋಲುವುದು ಖಂಡಿತ".

"ಕಡೆಯದಾಗಿ, ಖಾದಿಯ ಅದ್ವಿತೀಯ ಲಾಭವೆಂದರೆ, ಅದರ ಮೂಲಕ ಆಗುವ ಸಾಮೂಹಿಕ ಶಿಕ್ಷಣ, ಏಳ್ಗೆ ಮತ್ತು ಹಸಿವೆಯನ್ನು ಗಮನಾರ್ಹವಾಗಿ ನಿವಾರಿಸುವ ಅದರ ಬಲ. ಜನರಿಗೆ ಉದ್ಯೋಗವಾಗಲಿ, ಹಣದ ಸಹಾಯವಾಗಲಿ ಖಾದಿಯಂತೆ ಮತ್ಯಾವುದರಲ್ಲೂ ಸಿಗುವುದಿಲ್ಲ".

(ಯಂಗ್ ಇಂಡಿಯ : ೧೦-೫-೨೫)

ಆರ್ಥಿಕ ಬಲವೇ ಇತರರ ಆಕ್ರಮಣಕ್ಕೆ ತಡೆಯಾಗುವುದು.

ಲಕ್ಷಾಂತರ ಕೈಗಳು ಸುಲಭವಾಗಿ ಮಾಡಬಲ್ಲ ಕೆಲಸವನ್ನು ಯಂತ್ರದ ಮೂಲಕ ಮಾಡಿಸಿ ಆ ಕೈಗಳನ್ನು ಬರಿದೇ ಬಿಡುವುದು ಹಾನಿಕರ ಎಂದೇ ನನ್ನ ನಂಬಿಕೆ. ದೇಶದಾದ್ಯಂತ ಹರಡಿರುವ ಹಳ್ಳಿಗಳು ತಮ್ಮ ಆಹಾರ ಉತ್ಪಾದಿಸುವಂತೆಯೆ ತಮ್ಮ ಬಟ್ಟೆಯನ್ನು ಉತ್ಪಾದಿಸುವುದೇ ಯಾವತ್ತೂ ಉತ್ತಮ. ಅವರ ಮೂಲಭೂತ ಅವಶ್ಯಕತೆಗಳ ಉತ್ಪಾದನೆ ಅವರ ನಿಯಂತ್ರಣದಲ್ಲಿ ಇಲ್ಲದಿದ್ದರೆ, ನಮ್ಮ ಹಳ್ಳಿಗಳು ಅನಾದಿಕಾಲದಿಂದ ಅನುಭವಿಸುತ್ತಿರುವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲಾಗುವುದಿಲ್ಲ. ಪಾಶ್ಚಾತ್ಯ ದೇಶದವರು ತಮ್ಮ ಪರಿಸ್ಥಿಗೆ ಅನ್ವಯಿಸುವ ಆರ್ಥಿಕ ಸೂತ್ರಗಳು ನಮ್ಮ ದೇಶದ ಪರಿಸ್ಥಿತಿಗೂ ಹಾಗೆಯೇ ಅನ್ವಯಿಸುತ್ತವೆ ಎಂದು ಹೇಳುತ್ತಾರೆ. ಆದರೆ ಆ ಸೂತ್ರಗಳು ಆಯಾ ಸ್ಥಿತಿಗತಿಗಳಿಗೆ ತಕ್ಕಂತೆ ಮಾತ್ರ ಅನ್ವಯಿಸಲು ಸಾಧ್ಯ.

ಯಂತ್ರಗಳ ಅಳವಡಿಕೆ ಸುಲಭ ಮಾರ್ಗವೇನೋ ಸರಿ. ಹಾಗೆಂದ ಮಾತ್ರಕ್ಕೆ ಅದು ವರದಾನ ಎನ್ನಲಾಗುವುದಿಲ್ಲ. ಅದು ಅಪಾಯಕಾರಿ, ಇಳಿಜಾರಿನ ಮಾರ್ಗ. ಎಲ್ಲಕ್ಕೂ ಯಂತ್ರಗಳನ್ನು ಅವಲಂಬಿಸಲು ಆರಂಭಿಸಿದರೆ ನಮ್ಮ ಕೈ ಕಾಲುಗಳನ್ನು ಉಪಯೋಗಿಸುವುದೇ ಮರೆತು ಬಿಟ್ಟೆವಲ್ಲ ಎಂದು ನಮ್ಮನ್ನೇ ಶಪಿಸಿಕೊಳ್ಳುವ ಕಾಲ ಮುಂದೆ ಬರುತ್ತದೆ. ಲಕ್ಷಾಂತರ ಜನರು ವ್ಯಾಯಾಮ ಮತ್ತು ಆಟಗಳಿಂದ ಶರೀರ ಬಲ ಮತ್ತು ಆರೋಗ್ಯ ಕಾಪಾಡಿಕೊಳ್ಳಲಾಗದು. ಅಷ್ಟಕ್ಕೂ, ಆರೋಗ್ಯ ರಕ್ಷಿಸಿಕೊಳ್ಳಲು ಉಪಯೋಗವಾದ ಕೆಲಸಗಳನ್ನು ಮಾಡದೆ, ನಿಷ್ಪ್ರಯೋಜಕ, ವಿಲಾಸಿ ಆಟ-ವ್ಯಾಯಾಮಗಳಿಗೇಕೆ ಮೊರೆ ಹೋಗಬೇಕು? ನಮ್ಮ ದುಡಿಮೆಯ ಅಂಶ ಕಿಂಚಿತ್ತೂ ಇಲ್ಲದಂತಹ ಆಹಾರವನ್ನು ತಿಂದು ಅರಗಿಸಿಕೊಳ್ಳಲು ವ್ಯಾಯಾಮ ಬೇಕು ಎನ್ನುವ ಸ್ಥಿತಿ ಬಂದರೆ ಅದು ಹೇಸಿಗೆ ಉಂಟು ಮಾಡುತ್ತದೆ.

ಭಾರತ ಸ್ವಂತ ಕಾಲಿನ ಮೇಲೆ ನಿಂತು, ಸ್ವಾವಲಂಬಿಯಾಗಿ, ಹೊರಗಿನ ಪ್ರಲೋಭನೆ, ಶೋಷಣೆಗಳಿಗೆ ಬಲಿಯಾಗದೆ ಇದ್ದರೆ, ಯಾವುದೇ ಹೊರ ದೇಶದ ಲೋಭದಾಹಕ್ಕೆ ಅದು ಸಿಕ್ಕಿ ಬೀಳುವುದಿಲ್ಲ. ಆಗ ನಮಗೆ ದುಬಾರಿ ಸೈನ್ಯದ ರಕ್ಷಣೆ ಬೇಕಿರುವುದಿಲ್ಲ. ಭಾರತದ ಒಳಗಿನ ಆರ್ಥಿಕ ಬಲವೇ ಇತರರ ಆಕ್ರಮಣಕ್ಕೆ ತಡೆಯಾಗಿ ನಿಲ್ಲುವುದು.

(ಯಂಗ್ ಇಂಡಿಯಾ :೨-೭-೧೯೩೧)

ಸರ್ವೋದಯ ಆಂದೋಲನದ ಮುನ್ನಡೆ

ಕಳೆದ ಆಗಸ್ಟ್ ೨೫ರಂದು ಮಂಡ್ಯ ನಗರದ ಡಾ॥ಹರ್ಡೀಕರ್ ಭವನದಲ್ಲಿ ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಂಘಟಿತವಾಗಿರುವ ಜಿಲ್ಲಾ ಸರ್ವೋದಯ ಮಿತ್ರ ಮಂಡಲಿಯ ಮಿತ್ರರ ಮಿಲನವೊಂದನ್ನು ಏರ್ಪಡಿಸಲಾಗಿತ್ತು. ಸುಮಾರು ಐವತ್ತು ಮಿತ್ರರು ಭಾಗವಹಿಸಿದ್ದರು. ಮಿತ್ರರಾದ ಶ್ರೀ ಕೆ.ಟಿ.ವೀರಪ್ಪನವರು ಎಲ್ಲರನ್ನು ಸ್ವಾಗತಿಸಿದರು. ಕಾರ್ಯಕ್ರಮ ಹಿರಿಯ ಸರ್ವೋದಯ ಸೇವಕರಾದ ಶ್ರೀ ನಾಮದೇವ ಶಣ್ಯೆ ಅವರಿಂದ 'ವೈಷ್ಣವ ಜನತೋ' ಕನ್ನಡ ಅವತರಿಣಿಕೆಯ ಹಾಡುಗಾರಿಕೆಯಿಂದ ಪ್ರಾರಂಭವಾಯಿತು. ನಂತರ ಪರಸ್ಪರ ಪರಿಚಯ. ನಂತರ ಕಾರ್ಯಕಲಾಪಗಳು ಪ್ರಾರಂಭವಾದವು. ತಾಲ್ಲೂಕು ಮಟ್ಟದಲ್ಲಿಯೂ ಕೂಡ ಸರ್ವೋದಯ ಮಿತ್ರ ಸಂಘಟನೆ ಮಾಡಬೇಕೆಂದು ಅಭಿಪ್ರಾಯಪಡಲಾಯಿತು. ಆಯ್ದ ಒಂದೆರಡು ಹಳ್ಳಿಗಳಲ್ಲಿ 'ಗ್ರಾಮ ಸೇವಾ ದಳ' ಪ್ರಾರಂಭಿಸಬೇಕೆಂಬ ಸೂಚನೆ ಬಂತು. ಯುವಕರನ್ನು ಆಕರ್ಷಿಸಲು ವೈಚಾರಿಕ ಶಿಬಿರಗಳನ್ನು ಆಯೋಜಿಸಬೇಕೆಂಬ ವಿಚಾರ ಮುಂದೆ ಬಂದಿತು. ಸಮಯಾನುಸಾರ ಮನೆ ಮನೆಗಳಲ್ಲಿ ಸರ್ವೋದಯ ಗೋಷ್ಠಿಯನ್ನು ಏರ್ಪಡಿಸಬೇಕೆಂಬ ಸಲಹೆಗೆ ಸ್ವಾಗತ ದೊರೆಯಿತು.

ಕಳೆದ ಜೂನ್ ಮತ್ತು ಜುಲೈ ಮಾಹೆಗಳಲ್ಲಿ ಉತ್ತರಾಖಂಡದಲ್ಲಿ ಸಂಭವಿಸಿದ ಭೀಕರ ಜಲಪ್ರಳಯಕ್ಕೆ ಸಭೆ ತನ್ನ ತೀವ್ರ ಚಿಂತೆಯನ್ನು ವ್ಯಕ್ತಪಡಿಸಿತು. ಈ ಪ್ರಾಕೃತಿಕ ದುರಂತಕ್ಕೆ ಪ್ರಕೃತಿಯ ವಿಕೋಪದಷ್ಟೇ ಮಾನವನ ದುರಾಸೆಯೂ ಕಾರಣವಾಗಿದೆ. ೧೯೩೪ರಲ್ಲಿ ಬಿಹಾರದಲ್ಲಿ ಭೂಕಂಪವಾಗಿತ್ತು. ಆ ಭೂಕಂಪಕ್ಕೆ ಅಸ್ಪೃಶ್ಯತೆಯ ಆಚರಣೆಯ ಪಾಪದ ಕಾರಣವೆಂದು ಮಹಾತ್ಮಾ ಗಾಂಧೀ ಹೇಳಿದರು. ಉತ್ತರಾಖಂಡದ ಜಲಪ್ರಳಯಕ್ಕೆ ಮಾನವನ ಆಧುನಿಕ ಅಭಿವೃದ್ಧಿಯು ಶಾಪವೆಂದು ಸಭೆ ಅಭಿಪ್ರಾಯಪಟ್ಟಿತು.

ಸಾಮಾನ್ಯ ಮಾನವ ಅಪರಾಧಗಳನ್ನು ಸರ್ಕಾರಗಳು ದಂಡಿಸುತ್ತವೆ ಮತ್ತು ಶಿಕ್ಷಿಸುತ್ತವೆ. ಈಗ ಉತ್ತರಾಖಂಡದಲ್ಲಿ ಆಗಿರುವ ತಪ್ಪು ಅಭಿವೃದ್ಧಿಯ ನೀತಿಯ ಕಾರಣಕ್ಕಾಗಿ ಕೇಂದ್ರ ಸರ್ಕಾರವನ್ನು ಅಲ್ಲಿಯ ರಾಜ್ಯ ಸರ್ಕಾರವನ್ನು ಮತ್ತು ಯೋಜನಾ ಆಯೋಗವನ್ನು ಸಾರ್ವಜನಿಕ ಹಿತಾಸಕ್ತಿಯ ಕಾನೂನಿನ ಮೂಲಕ ದಂಡನೆಗೆ ಗುರಿಪಡಿಸಬೇಕೆಂದು ಈ ಸಭೆಯು ಸರ್ವಾನುಮತದಿಂದ ಅಭಿಪ್ರಾಯಪಟ್ಟಿತು. ನಾಗರೀಕರು ೨೦೧೩ ಅಕ್ಟೋಬರ್ ೨ ಗಾಂಧೀಜಯಂತಿಯಂದು ಬೆಳಿಗ್ಗೆ ೧೧ ಗಂಟೆಯಿಂದ ಸಾರ್ವಜನಿಕ ಸ್ಥಳದಲ್ಲಿ ನಿರಾಹಾರಿಗಳಾಗಿ ಮತ್ತು ಸತ್ಯವ್ರತಿಗಳಾಗಿ ಪಶ್ಚಾತ್ತಾಪ ಸಭೆ ನಡೆಸಬೇಕೆಂದು ಈ ಸಭೆ ಸಾರ್ವಜನಿಕರಿಗೆ ಕರೆ ನೀಡಿತು.

ಸಭೆಯಲ್ಲಿ ಜಿ.ಟಿ.ವಿಶ್ವನಾಥ್, ಜ್ಞಾನಂ, ಮಂಗಳೂರು ವಿಜಯ, ಹೇಮಂತ್‌ಕುಮಾರ್, ಎಚ್.ರಮೇಶ್, ಎಮ್.ಬೋರೇಗೌಡ, ಯಶವಂತ್, ಸ್ವಾಮಿ। ಶಿವಣ್ಣ, ಲ.ನರಸಿಂಹಯ್ಯ ಹಾಗೂ ಇನ್ನೂ ಕೆಲವರು ಚರ್ಚೆಯಲ್ಲಿ ಭಾಗವಹಿಸಿದ್ದರು.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ

ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಪ್ರೊ॥ ಕ್ಯಾಪ್ಟನ್ ಅನ್ನಪೂರ್ಣ ; ಶ್ರೀಮತಿ ವಿಶಾಲಾಕ್ಷೀ ಶರ್ಮ – ಬೆಂಗಳೂರು
ಶ್ರೀ ಎಸ್.ನಾಗರಾಜರಾವ್ ; ಶ್ರೀ ಜ್ಞಾನಂ – ಮೈಸೂರು
ಶ್ರೀ ಎಸ್.ಆರ್.ಜಗದೀಶ್ – ವಿರಾಜಪೇಟೆ
ಶ್ರೀ ತಮ್ಮಣ್ಣ ಬುದ್ನಿ – ಮುಧೋಳ
ಭಾರತಿ ಪ್ರಥಮದರ್ಜೆ ಕಾಲೇಜು – ಭಾರತೀನಗರ
ಶ್ರೀ ದಿಲೀಪ್ ಕುಮಾರ್ – ಚಿತ್ರದುರ್ಗ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಶ್ರೀಪಾದ ಆರ್.ಹೆಗಡೆ ; ಶ್ರೀ ಪಿ.ವೈ.ಹೇಮಂತ್ ಕುಮಾರ್ – ಬೆಂಗಳೂರು
ಶ್ರೀ ಜಿ.ಎನ್.ಕುಮಾರ್ – ಮೈಸೂರು
ಶ್ರೀ ಕೆ. ಜವರೇಗೌಡ – ಪಾಂಡವಪುರ
ಭಾರತಿ ಪ್ರಥಮದರ್ಜೆ ಕಾಲೇಜು – ದೊಡ್ಡರಸಿನಕೆರೆ

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820



ಶ್ರೀಮತಿ/ ಶ್ರೀ.......... ....

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh Mudrana, Melkote.